ಜನಶಕ್ತಿ

ಪ್ರಗತಿಶೀಲ ಕನ್ನಡ ವಾರಪತ್ರಿಕೆ
ಸಂಪುಟ 6 ಸಂಚಿಕೆ 10
೫ ಜನವರಿ ೧೯೫೮
★
ಪುಟ ೧೦ ಬೆಲೆ: ೧೩ ನ. ಪೈಸೆ

ಅಖಿಲ ಭಾರತ ಟ್ರೇಡ್ ಯೂನಿಯನ್ ಕಾಂಗ್ರೆಸ್ ರಜತಾಧಿವೇಶನ

ಒಂದೂವರೆ ಲಕ್ಷ ಜನ ನೆರೆದ ಬಹಿರಂಗ ಸಭೆ

ಅಖಿಲ ಭಾರತ ಟ್ರೇಡ್ ಯೂನಿಯನ್ ಕಾಂಗ್ರೆಸಿನ ರಜತಾಧಿವೇಶನವು ದಶಂಬರ ತಾ 25ರಿಂದ ತಾ 30ರ ತನಕ ಎರ್ನಾಕುಲಂನಲ್ಲಿ ಜರಗಿತು. ಕೇರಳದ ಮುಖ್ಯಮಂತ್ರಿ ಇ. ಎಂ. ಎಸ್. ನಂಬೂದ್ರಿಪಾದ್‌ರವರು ಅಧಿವೇಶನವನ್ನು ಉದ್ಘಾಟನೆ ಮಾಡಿದರು. ಎ. ಐ. ಟಿ. ಯು. ಸಿ. ಯ ಉಪಾಧ್ಯಕ್ಷ ಎಸ್. ಎಸ್ ಮಿರಾಜಕರ್‌ರವರು. ಅಧ್ಯಕ್ಷತೆ ವಹಿಸಿದ್ದರು.

ದೇಶದ ನಾನಾ ಭಾಗಗಳಿಂದ ಬಂದು ಸೇರಿದ್ದ ಸಾವಿರಾರು ಕಾರ್ಮಿಕ ಪ್ರತಿನಿಧಿಗಳಲ್ಲಿ ಬೊಂಬಯಿ, ಬಂಗಾಳ, ಕರ್ನಾಟಕ ಪ್ರಾಂತಗಳಿಂದ ಬಹಳ ಮಂದಿ ಮಹಿಳೆಯರೂ ಇದ್ದರು. ಈ ಅಧಿವೇಶನವು ಎ. ಐ. ಟಿ. ಯು. ಸಿ.ಯ ಇತಿಹಾಸದಲ್ಲಿ ಒಂದು ಉಜ್ವಲ ಘಟನೆಯಾಗಿದೆ. ಈ ಅಧಿವೇಶನವು ಎ. ಐ. ಟಿ. ಯು. ಸಿ ಯ ಚರಿತ್ರೆಯಲ್ಲೊಂದು ಮುಖ್ಯವಾದ ಮೈಲುಗಲ್ಲು ಮಾತ್ರವಲ್ಲ, ಒಂದು ಹೊಸ ಅಧ್ಯಾಯದ ಆರಂಭ ಕೂಡಾ ಆಗಿದೆ ಎನ್ನಬಹುದು.

ಪ್ರತಿನಿಧಿಗಳನ್ನೂ ಸೋವಿಯತ್ ಯೂನಿಯನ್, ಚೈನ ಮತ್ತಿತರ ದೇಶಗಳ ಸೌಹಾರ್ದ ಪ್ರತಿನಿಧಿಗಳನ್ನೂ ಅತಿಥಿಗಳನ್ನೂ ಸ್ವಾಗತಿಸುತ್ತ, ಪ್ರಧಾನ ಕಾರ್ಯದರ್ಶಿ ಎಸ್. ಎ. ಡಾಂಗೆ, "ಈ ಅಧಿವೇಶನವು ಅನೇಕ ರೀತಿಗಳಲ್ಲಿ ಅಪೂರ್ವವಾಗಿರುತ್ತದೆ. ನಮ್ಮ ಸಂಘಟನೆಯ ಚರಿತ್ರೆಯಲ್ಲೇ ಮೊದಲ ಸಲ ಕಾರ್ಮಿಕ ವರ್ಗದ ಮಂತ್ರಿಮಂಡಲವು ಅಧಿಕಾರದಲ್ಲಿರುವ ಒಂದು ರಾಜ್ಯದಲ್ಲಿ ಈ ಅಧಿವೇಶನ ಜರಗುತ್ತಿದೆ" ಎಂದು ಹೇಳಿದರು.

ಇ. ಎಂ. ಎಸ್.ರವರ ಭಾಷಣ

ಅಧಿವೇಶನವನ್ನು ಉದ್ಘಾಟನೆ ಮಾಡಲು ಇ. ಎಂ. ಎಸ್. ನಂಬೂದ್ರಿಪಾದ್‌ರವರು ಎದ್ದು ನಿಂತಾಗ ಸೌಹಾರ್ದ ಪ್ರತಿನಿಧಿಗಳೂ ಸಭಿಕರೂ ಎದ್ದು ನಿಂತು ಹರ್ಷೋದ್ಗಾರ ಮಾಡುತ್ತ ಹಲವು ನಿಮಿಷಗಳ ವರೆಗೆ ಕರತಾಡನ ಮಾಡಿದರು. ಕೇರಳದ ಕಮ್ಯೂನಿಸ್ಟ್ ಸರಕಾರದ ಕಡೆಗೆ ಅವರು ತೋರಿಸಿದ ಗೌರವ ಮತ್ತು ಆತ್ಮೀಯತೆಯು ಎಲ್ಲರ ಹೃದಯಗಳನ್ನೂ ಸ್ಪರ್ಶಿಸಿತು. ಇ. ಎಂ. ಎಸ್.ರವರು ಭಾವನಾವೇಶದಿಂದ ಒಂದೆರಡು ನಿಮಿಷಗಳ ವರೆಗೆ ಮಾತನಾಡಲಾರದೆ ಹೋದರು!

ನಂಬೂದ್ರಿಪಾದ್‌ರವರು ಪ್ರತಿನಿಧಿಗಳಿಗೆ ಕೇರಳ ಸರಕಾರದ ಅಭಿನಂದನೆಗಳನ್ನು ಅರ್ಪಿಸಿದರು. ಅವರು ಮಾತನಾಡುತ್ತ, ಕಾರ್ಮಿಕ–ಮಾಲಕ ಸಂಬಂಧದ ಸಮಸ್ಯೆಗಳನ್ನು ಮೂಲಭೂತವಾಗಿ ಪರಿಹರಿಸಲು ಯತ್ನಿಸುವುದು ಅಗತ್ಯವೆಂದರು. ಕಾರ್ಮಿಕರ ಅಡಚಣೆಗಳನ್ನು ದೂರ ಮಾಡಲು, ಬೇಡಿಕೆಗಳನ್ನು ಪೂರೈಸಲು, ಜೀವನದ ಹಾಗು ಕೆಲಸದ ಸ್ಥಿತಿಯನ್ನು ಉತ್ತಮಗೊಳಿಸಲು ನಿರಂತರವಾಗಿ ಕ್ರಮವಹಿಸಬೇಕು. ಅದೇ ಸಮಯದಲ್ಲಿ ಉತ್ಪಾದನೆಯು ಸಂಪೂರ್ಣವಾಗಿ ಅಲ್ಲವಾದರೂ ಆದಷ್ಟು ಹೆಚ್ಚಿನ ಮಟ್ಟಿಗೆ ತಡೆಹಿಡಿಯಲ್ಪಡದಂತೆ ಮಾಲಿಕರಿಗೂ ರಾಷ್ಟ್ರಕ್ಕೂ ಭರವಸೆ ಹುಟ್ಟಿಸಬೇಕು. ಈ ಎರಡು ಕಾರ್ಯಗಳನ್ನು ಒಂದಾಗಿ ನೆರವೇರಿಸುವ ಧೋರಣೆಯನ್ನು ಕೇರಳ ಸರಕಾರ ಅನುಸರಿಸುತ್ತಿದೆ ಎಂದು ಅವರು ತಿಳಿಸಿದರು.

ಕೇರಳ ಸರಕಾರವು, ಕೈಗಾರಿಕೆಗಳ ಬೆಳವಣಿಗೆಗೆ ಅನುಕೂಲವಾದ ವಾತಾವರಣವನ್ನು ಸೃಷ್ಟಿಸಲು ಪ್ರಯತ್ನಿಸುತ್ತಿದೆ. ಕೇರಳದಲ್ಲಿ ಕಾರ್ಮಿಕರ ಹಿತ ರಕ್ಷಿಸಲ್ಪಡುವುದು. ಅದರೊಂದಿಗೆನೇ ಮಾಲಿಕರಿಗೆ ನ್ಯಾಯವಾದ ಲಾಭ ದೊರಕುವುದು ಎಂದು ನಂಬೂದ್ರಿಪಾದ್‌ರವರು ವಿವರಿಸಿದರು.

ಹಿಂದೆ ಕಾರ್ಮಿಕರಾಗಲಿ ರೈತರಾಗಲಿ ಬೇರೆ ಜನಸಾಮಾನ್ಯರಾಗಲಿ ಯಾವುದಾದರೂ ಬೇಡಿಕೆಗೆ ಚಳುವಳಿ ನಡೆಸಿದರೆ, ಹೋರಾಟ ಹೂಡಿದರೆ, ಎಲ್ಲದಕ್ಕಿಂತ ಮೊದಲು ಸರಕಾರದ ಪೋಲಿಸ್ ಖಾತೆ ಮತ್ತು ದಬ್ಬಾಳಿಕೆಯ ಆಯುಧಗಳು ಅವರ ವಿರೋಧವಾಗಿ ಪ್ರಯೋಗಿಸಲ್ಪಡುತ್ತಿತ್ತು, ಈಗ ಕೇರಳದಲ್ಲಿ ಹಾಗೆ ಆಗುವುದಿಲ್ಲ. ಬೇಡಿಕೆಗಳನ್ನು ಪೂರೈಸುವುದಕ್ಕೆ ಸಮಸ್ಯೆಗಳನ್ನು ಬಗೆಹರಿಸುವುದಕ್ಕೆ ಸರಕಾರ ಸರ್ವ ಪ್ರಯತ್ನವನ್ನು ನಡೆಸುತ್ತದೆ. ಶಾಂತ ರೀತಿಯ ಚಳುವಳಿಗಳಲ್ಲೂ ಹೋರಾಟಗಳಲ್ಲೂ–ಅದು ಸರಕಾರಕ್ಕೆ ಮೆಚ್ಚುಗೆಯಾಗದ ಸಂದರ್ಭಗಳಲ್ಲಿ ಕೂಡ–ಪೋಲೀಸುಖಾತೆ ಪ್ರವೇಶಿಸಬಾರದೆಂದು ಕೇರಳ ಸರಕಾರ ವಿಧಿಸಿದೆ. ಇದೊಂದೇ ಹೊಸ ದಾರಿ ಎಂದು ನಂಬೂದ್ರಿಪಾದ್ ಹೇಳಿದರು.

ಕೂಲಿ, ಬೋನಸ್ಸು ಮುಂತಾದ ವಿಚಾರಗಳಿಗೆ ಸಂಬಂಧಿಸಿದ ಪ್ರತ್ಯೇಕ–ಪ್ರತ್ಯೇಕವಾದ ವಿವಾದಗಳನ್ನು ಬಗೆಹರಿಸಿದರೆ ಸಾಲದು. ಈ ಪ್ರಶ್ನೆಗಳನ್ನು ಕೈಗಾರಿಕಾವಾರಾಗಿಯೂ ರಾಜ್ಯವ್ಯಾಪಿಯಾಗಿಯೂ ಬಗೆಹರಿಸುವುದಕ್ಕೆ ತೀವ್ರ ಪ್ರಯತ್ನಗಳನ್ನು ಮಾಡಬೇಕಾಗಿದೆ. ಈ ಉದ್ದೇಶದಿಂದ ಕಾರ್ಮಿಕ – ಮಾಲಕರೊಳಗೆ ದೀರ್ಘಾವಧಿ ಒಪ್ಪಂದಗಳಾಗುವುದು ಒಳಿತು. ಕೇರಳ ಸರಕಾರವು ಅಖಿಲ ಭಾರತ ಟ್ರೇಡ್ ಯೂನಿಯನ್ ಕಾಂಗ್ರೆಸ್ ಅಂಗೀಕರಿಸಿರುವ ಕಾರ್ಮಿಕ ಹಿತ ರಕ್ಷಣೆಯ ಧೋರಣೆಯನ್ನು ಅನುಸರಿಸುತ್ತಿದೆ ಎಂದು ಮುಖ್ಯಮಂತ್ರಿಯವರು ವಿಶದೀಕರಿಸಿದರು.

ಕಾರ್ಮಿಕರ ಹಿತವನ್ನು ಗಮನಿಸಿರಿ

ಅಧ್ಯಕ್ಷತೆ ವಹಿಸಿದ್ದ ಶ್ರೀ ಎಸ್. ಎಸ್. ಮಿರಾಜಕರ್‌ರವರು ತಮ್ಮ ಭಾಷಣದಲ್ಲಿ, ಎ. ಐ. ಟಿ. ಯು. ಸಿ.ಯು ದ್ವಿತೀಯ ಪಂಚವಾರ್ಷಿಕ ಯೋಜನೆ ಯಶಸ್ವಿಯಾಗಬೇಕೆಂದು ಬಯಸುತ್ತದೆ. ಆದುದರಿಂದಲೇ ಕಾರ್ಮಿಕರು ತಮ್ಮ ಬೇಡಿಕೆಗಳನ್ನು ಮಂಡಿಸುವಾಗಲೂ ಹೋರಾಟಗಳನ್ನು ನಡೆಸುವಾಗಲೂ ಬಹಳ ತಾಳ್ಮೆಯಿಂದ ಮತ್ತು ವಿವೇಚನೆಯಿಂದ ವರ್ತಿಸುತ್ತಿದ್ದಾರೆ. ಆದರೆ ಉತ್ಪಾದನೆ ಹೆಚ್ಚಾದರೂ ದರ ಫಲವನ್ನೆಲ್ಲ ಮಾಲಿಕರು ಲಾಭದ ರೂಪದಲ್ಲಿ ವಶಪಡಿಸಿಕೊಳ್ಳುತ್ತಾರೆ. ಕೂಲಿ ಮತ್ತಿತರ ಸಲವತ್ತುಗಳು ಹೆಚ್ಚಾಗುವುದಿಲ್ಲ. ಆಹಾರದ ಬಿಕ್ಕಟ್ಟು ತೀವ್ರವಾಗಿದೆ. ಅದು ಕೇವಲ ಸ್ವಾಭಾವಿಕ ಕಾರಣಗಳಿಂದಲೇ ಆದುದಲ್ಲ. ಸಟ್ಟಾ ವ್ಯಾಪಾರಿಗಳ ಲಾಭ ಖೋರತನ ಮತ್ತು ಅವರಿಗೆ ಸರಕಾರದಿಂದ ಸಿಗುತ್ತಿರುವ ಪ್ರೋತ್ಸಾಹ ಅದಕ್ಕೆ ಕಾರಣ. ಈ ಸಮಸ್ಯೆಗಳನ್ನೆಲ್ಲ ಸಂಘಟಿತ ಕಾರ್ಮಿಕ ವರ್ಗ ತಿಳಿದುಕೊಂಡು, ಅವುಗಳ ಪರಿಹಾರಕ್ಕೆ ಹೋರಾಡಬೇಕೆಂದು ಅಧ್ಯಕ್ಷರು ಆಹ್ವಾನವಿತ್ತರು.

ದ್ವಿತೀಯ ಯೋಜನೆಗೆ ಕಾರ್ಮಿಕರ ಬೆಂಬಲ

ಎ.ಐ.ಟಿ.ಯು.ಸಿ.ಯ ಪ್ರಧಾನ ಕಾರ್ಯದರ್ಶಿ ಶ್ರೀ ಎಸ್. ಎ. ಡಾಂಗೆ, ಎಂ.ಪಿ. ಅವರು ಅಧಿವೇಶನಕ್ಕೆ ಸುದೀರ್ಘವಾದ ವರದಿಯನ್ನು ಒಪ್ಪಿಸಿದರು. ಕಾರ್ಮಿಕ ವರ್ಗದ ಹಿತಸಾಧನೆ, ರಾಷ್ಟ್ರೀಯ ಹಾಗೂ ಅಂತರ್ರಾಷ್ಟ್ರೀಯ ರಂಗಗಳಲ್ಲಿ ಕಾರ್ಮಿಕ ವರ್ಗ ವಹಿಸತಕ್ಕ ಪಾತ್ರ ಇವುಗಳನ್ನು ವಿವರಿಸುವ ಹದಿನೇಳು ಅಂಶಗಳ ಕಾರ್ಯಕ್ರಮವನ್ನು ಅವರು ಅಧಿವೇಶನದ ಮುಂದಿಟ್ಟರು.

ಇವತ್ತು ನಮ್ಮ ದೇಶದ ಕಾರ್ಮಿಕ ರಂಗದಲ್ಲಿ ನೈತಿಕವಾಗಿ, ರಾಜಕೀಯವಾಗಿ ಮತ್ತು ಇತರ ರೀತಿಗಳಲ್ಲಿ ಎ.ಐ.ಟಿ.ಯು.ಸಿ.ಯು ಪ್ರಥಮ ಸ್ಥಾನದಲ್ಲಿದೆ. ಇಂದು ಐ.ಎನ್.ಟಿ.ಯು.ಸಿ.ಯು ತನ್ನ ಇಚ್ಛೆಯನ್ನು ಹೇರುವ ಸ್ಥಿತಿಯಲ್ಲಿ ಇಲ್ಲ. ಹೆಚ್. ಎಂ. ಎಸ್. ಒಂದು ಶಕ್ತಿಯಾಗಿದೆಯಾದರೂ ಎ.ಐ.ಟಿ.ಯು.ಸಿ.ಗೆ ಅದೊಂದು ಪ್ರತಿಸ್ಪರ್ಧಿಯಲ್ಲ. ಕಾರ್ಮಿಕ ಸಂಘಗಳು ಅನುಸರಿಸತಕ್ಕ ಮಾರ್ಗವನ್ನು ವಿವರಿಸುತ್ತ ಡಾಂಗೆ, "ಸಂಘಟನೆ ಮತ್ತು ಐಕ್ಯತೆ; ಮತ ಪ್ರದರ್ಶನ ಮತ್ತು ಪ್ರತಿಷೇಧ; ಸಂಧಾನ ಮತ್ತು ತೀರ್ಮಾನ" ಎಂಬ ಮೂರು ಮಾರ್ಗದರ್ಶಕ ಘೋಷಣೆಗಳನ್ನು ಕೊಟ್ಟರು. ಮುಷ್ಕರಗಳು ಕಾರ್ಮಿಕ ಸಂಘಗಳ ಕೊನೆಯ ಅಸ್ತ್ರವಾಗಿರಬೇಕೆಂದೂ, ಮುಷ್ಕರ ಹೂಡಬೇಕಾಗಿ ಬಂದಾಗಲೂ ವಿವಾದವನ್ನು ತೀರ್ಮಾನಮಾಡುವ ಗುರಿಯನ್ನು ಮುಂದಿಟ್ಟುಕೊಳ್ಳಬೇಕೆಂದೂ ಡಾಂಗೆ ತಿಳಿಸಿದರು.



ಎಸ್. ಎ. ಡಾಂಗೆ, ಎಂ. ಪಿ.

ದ್ವಿತೀಯ ಪಂಚವಾರ್ಷಿಕ ಯೋಜನೆ ಯಶಸ್ವಿಯಾಗುವುದು ಇಡೀ ದೇಶದ ಏಳಿಗೆಗೆ ಅಗತ್ಯ. ಅದರಲ್ಲಿ ಕಾರ್ಮಿಕರಿಗೆ ತುಂಬ ಆಸಕ್ತಿಯಿದೆ. ಯೋಜನೆಯನ್ನು ವಿರೋಧಿಸುವ ಮತ್ತು ಅಡ್ಡಿ ಮಾಡುವ ಪ್ರತಿಗಾಮಿಗಳ ವಿರೋಧವಾಗಿ ಕಾರ್ಮಿಕ ವರ್ಗ ಹೋರಾಡುವುದು. ಲಂಚಗೋಳಿತನ ರಾಷ್ಟ್ರೀಯ ಸಂಪತ್ತಿನ ಕಳವು ಹಾಗು ದುರುಪಯೋಗ ಮುಂತಾದವುಗಳನ್ನು ಕಾರ್ಮಿಕರು ಬಯಲಿಗೆಳೆದು ಕೊನೆಗಾಣಿಸುವರು ಎಂದು ಡಾಂಗೆ ಹೇಳಿದರು.

ಅಧಿವೇಶನದ ಅಂಗವಾಗಿ ಜರಗಿದ ಬಹಿರಂಗ ಸಭೆಯಲ್ಲಿ ಒಂದೂವರೆ ಲಕ್ಷ ಜನರಿಗಿಂತಲೂ ಹೆಚ್ಚು ನೆರೆದಿದ್ದರು. ಬೃಹತ್ ಮೆರವಣಿಗೆಯೊಂದು ನಗರದ ಮುಖ್ಯ ಬೀದಿಗಳಲ್ಲಿ ಸುತ್ತಾಡಿ ಎ.ಐ.ಟಿ.ಯು.ಸಿ.ಯ ನಿರ್ಣಯಗಳನ್ನು ಘೋಷಿಸಿತು.

(ಕೊನೇ ಪುಟ ನೋಡಿ)

ರಾಷ್ಟ್ರೀಯ:

ಕಾಂಗ್ರೆಸ್ಸಿನೊಳಗೆ ಸೋಷ್ಯಲಿಸ್ಟ್ ಪಂಗಡದ ರಚನೆ

ಕಾಂಗ್ರೆಸ್ ಪಕ್ಷಕ್ಕೆ ಕಾಯಕಲ್ಪ ಚಿಕಿತ್ಸೆ ಮಾಡುವ ಉದ್ದೇಶದಿಂದ "ಕಾಂಗ್ರೆಸ್ ಸೋಷ್ಯಲಿಸ್ಟ್ ಫಾರಂ" ಎಂಬ ಹೊಸ ಪಂಗಡವೊಂದು ರಚನೆಯಾಗಿದೆ. ಕಾಂಗ್ರೆಸ್ ವರ್ಕಿಂಗ್ ಕಮಿಟಿ ಸದಸ್ಯೆ ಶ್ರೀಮತಿ ಇಂದಿರಾಗಾಂಧಿ, ಕೇಂದ್ರದ ಉಪಸಚಿವರುಗಳಾದ ಶ್ರೀ ಕೆ. ಡಿ. ಮಾಲವೀಯ ಮತ್ತು ಶ್ರೀ ಎಸ್. ಎಸ್. ಮಿಶ್ರಾ, ಕಾಂಗ್ರೆಸ್ ಪಾರ್ಲಿಮೆಂಟರಿ ಪಕ್ಷದ ಕಾರ್ಯದರ್ಶಿ ಶ್ರೀ ಎನ್. ಸಿ. ಕಾಸ್ಲಿವಾಲ, ಐ. ಎನ್. ಟಿ. ಯು. ಸಿ. ಕಾರ್ಯದರ್ಶಿ ಡಾ। ಜಿ. ಎಸ್. ಮೇಲ್ಕೋಟೆ ಮೊದಲಾದ ಹದಿನೈದು ಮಂದಿ ಈ ಹೊಸ ಪಂಗಡದ ಘೋಷಣೆಗೆ ಸಹಿ ಹಾಕಿದ್ದಾರೆ. ಈ ಪಂಗಡದವರ ಸಭೆಯೊಂದು ಕೆ. ಡಿ. ಮಲವೀಯವರ ಅಧ್ಯಕ್ಷತೆಯಲ್ಲಿ ನಡೆದು ಒಂದು ತಾತ್ಕಾಲಿಕ ಸಮಿತಿಯನ್ನು ರಚಿಸಲಾಗಿದೆ. ಕಾಂಗ್ರೆಸಿನೊಳಗೆ ಇದೊಂದು ಪ್ರಭಾವಶಾಲಿಯಾದ ಅಖಿಲಭಾರತ ಪಂಗಡವಾಗಬಹುದೆಂದು ನಿರೀಕ್ಷಿಸಬಹುದು.

ಕಾಂಗ್ರೆಸ್ಸಿನ ನಾಯಕತ್ವದೊಳಗೂ ಕಾಂಗ್ರೆಸ್ ಕೇಂದ್ರಹಾಗೂ ರಾಜ್ಯಪಾರ್ಲಿಮೆಂಟರಿ ಪಕ್ಷಗಳಲ್ಲಿಯೂ ಮಂತ್ರಿಮಂಡಲಗಳಲ್ಲೂ ದ್ವಿತೀಯ ಪಂಚವಾರ್ಷಿಕ ಯೋಜನೆಯನ್ನು ವಿರೋಧಿಸುವ ಶಕ್ತಿಗಳಿವೆ; ಭೂಸುಧಾರಣೆ, ಕಾರ್ಮಿಕರ ಮತ್ತು ನೌಕರರ ಜೀವನ ಸ್ಥಿತಿಯ ಅಭಿವೃದ್ಧಿ, ವಿದ್ಯಾಭ್ಯಾಸ ಕ್ರಮದಲ್ಲಿ ಪ್ರಗತಿಶೀಲ ಬದಲಾವಣೆ ಮುಂತಾದ ಪ್ರತಿಯೊಂದು ಅತ್ಯಾವಶ್ಯಕ ಪುರೋಗಾಮಿ ಹೆಜ್ಜೆಗೂ ಆತಂಕ ತಂದೊಡ್ಡುವ ಬಲವಾದ ತಂಡಗಳಿವೆ. ಬೆಂಗಳೂರಲ್ಲಿ ಒಂದು ಪತ್ರಿಕಾ ಸಮ್ಮೇಳನದಲ್ಲಿ ಕೇಂದ್ರದ ಸಮಾಜವಿಕಾಸ ಸಚಿವ ಶ್ರೀ ಕೆ. ಸಿ. ರೆಡ್ಡಿ ಅವರು ಹೇಳಿರುವಂತೆ "ಬಂಡವಾಳಗಾರ - ಜಮೀನುದಾರ - ಜಾತೀಯವಾದಿ ಪ್ರತಿಗಾಮಿ ಶಕ್ತಿಗಳ ಪ್ರಭಾವದಿಂದ" ಪುರೋಗಾಮಿ ಕಾರ್ಯಕ್ರಮಗಳನ್ನು ಕೈಗೊಳ್ಳಲಾಗುವುದಿಲ್ಲ. ಅದೇ ಸಮಯದಲ್ಲಿ ಕಾಂಗ್ರೆಸ್ಸಿನೊಳಗೆ ನಿಜವಾಗಿ ಪ್ರಜಾಪ್ರಭುತ್ವವನ್ನು, ಜನರ ಹಿತವನ್ನು, ಸಮಾಜವಾದೀ ಮಾದರಿಯ ಸಮಾಜವನ್ನು ಅಪೇಕ್ಷಿಸುವವರೂ ಇದ್ದಾರೆ. ಈ ಎರಡನೆಯ ವಿಭಾಗಕ್ಕೊಂದು ಸಂಘಟನೆ ಹುಟ್ಟಿಕೊಂಡಿರುವುದು ನಿಜಕ್ಕೂ ಸ್ವಾಗತಾರ್ಹವೇ ಸರಿ. ದೇಶದ ಆದ್ಯಂತವಾಗಿ ನಡೆದಿರುವ ಮತ್ತು ನಡೆಯುತ್ತಿರುವ ಜನತೆಯ ಚಳುವಳಿಗಳೂ ಹೋರಾಟಗಳೂ ಈ ಪಂಗಡದ ರಚನೆಗೆ ಬಹಳ ಮಟ್ಟಿಗೆ ಕಾರಣವಾಗಿದೆ. ಅಂಥ ಚಳುವಳಿಗಳೂ ಹೋರಾಟಗಳೂ ಈ ಪಂಗಡವು ಕಾಂಗ್ರೆಸ್ ಪಕ್ಷದ ಒಳಗೆ ಪ್ರತಿಗಾಮಿಗಳ ಪ್ರಭಾವಕ್ಕೆ ಇದಿರಾಗಿ ನಡೆಸುವ ಪ್ರಯತ್ನಗಳಿಗೆ ಬಲ ನೀಡುವುದು ಎನ್ನುವುದರಲ್ಲಿ ಅನುಮಾನವಿಲ್ಲ.

ಹೊಸತಾಗಿ ರಚಿಸಲ್ಪಟ್ಟಿರುವ ಈ "ಕಾಂಗ್ರೆಸ್ ಸೋಷ್ಯಲಿಸ್ಟ್ ಫಾರಂ"ನ ಘೋಷಣೆಯು, ಕಾಂಗ್ರೆಸಿನೊಳಗಿನ ಪ್ರತಿಗಾಮಿಗಳನ್ನು ಇದಿರಿಸುವುದರ ಜೊತೆಯಲ್ಲೇ ಕಮ್ಯೂನಿಸ್ಟ್ ಪಾರ್ಟಿಯ ಮತ್ತಿತರ ಪ್ರತಿಪಕ್ಷಗಳ ಪ್ರಭಾವ ಬೆಳೆಯುತ್ತಿರುವುದನ್ನೂ ಇದಿರಿಸುವುದಾಗಿ ಈ ಪ್ರತಿಪಕ್ಷಗಳು ಪ್ರತಿಯೊಂದು ಸನ್ನಿವೇಶವನ್ನೂ ಕಾಂಗ್ರೆಸಿಗೆ ವಿರೋಧವಾಗಿ ಉಪಯೋಗಿಸಿಕೊಳ್ಳುತ್ತಿವೆ ಎಂದು ಘೋಷಣೆಯಲ್ಲಿ ದೂರಲಾಗಿದೆ. 'ಕಮ್ಯೂನಿಸ್ಟರು ದೇಶದ ಇತರ ಪ್ರಾಂತಗಳನ್ನು ಆಕ್ರಮಿಸಿಕೊಳ್ಳಲು ಕೇರಳವನ್ನು ಉಪಯೋಗಿಸಿಕೊಳ್ಳುವರು' ಎಂದೂ ಘೋಷಣೆಯಲ್ಲಿ ಹೇಳಲಾಗಿದೆ. ಕಮ್ಯೂನಿಸ್ಟರಿಗೂ ಇತರ ಪ್ರತಿಪಕ್ಷಗಳಿಗೂ ನಮ್ಮ ದೇಶದ ಎಲ್ಲ ರಾಜ್ಯಗಳಲ್ಲೂ ಘಟನಾತ್ಮಕವಾಗಿ ಅಧಿಕಾರಕ್ಕೆ ಬರುವ ಹಕ್ಕು ಕಾಂಗ್ರೆಸ್ಸಿನಷ್ಟೆ ಇದೆ. ಅದನ್ನು ಈ ಹೊಸ ಪಂಗಡದವರು ನೆನಪಿಟ್ಟುಕೊಳ್ಳಬೇಕೆಂದು ಕೇಳಿಕೊಳ್ಳಬೇಕಾಗಿದ

ಕಾಂಗ್ರೆಸಿನೊಳಗೆ ಸಮಾಜವಾದದ ತತ್ವ ಹಾಗೂ ಕಾರ್ಯ ವಿಧಾನಗಳ ತಿಳುವಳಿಕೆಯನ್ನು ಹರಡುವುದರ ಮೂಲಕ, ಸಮಾಜೀಕರಣದ ಕಾರ್ಯಕ್ರಮಗಳು ಕೇವಲ ಆಡಳಿತಾಂಗದ ಧೋರಣೆ ಮತ್ತು ನೌಕರಶಾಹಿ ಯಂತ್ರದ ಮೂಲಕ ನಡೆದು ವಿಫಲವಾಗದಂತೆ ನೋಡಿಕೊಳ್ಳುವ ಉದ್ದೇಶವನ್ನು ಈ ಹೊಸ ಪಂಗಡ ಇಟ್ಟುಕೊಂಡಿದೆ. ಈ ಘೋಷಣೆಯು ಬರೇ ಘೋಷಣೆಯಾಗಿ ಉಳಿಯದೆ ಕಾರ್ಯಗತವಾಗಲೆಂದು ಹಾರೈಸೋಣ.

ಮೈಸೂರು ಸರಕಾರಕ್ಕೆ ಪ್ರಜಾಪ್ರಭುತ್ವದ ಭಯ!

ಕೋಲಾರದ ಚಿನ್ನದ ಗನಿ ಪ್ರದೇಶದಲ್ಲಿ ಜನರಿಂದ ಆರಿಸಲ್ಪಡುವ ಪೌರಸಭೆಯ ಬದಲು ಸರಕಾರದಿಂದ ನೇಮಿಸಲ್ಪಡುವ "ಸೆನಿಟರಿ ಬೋರ್ಡು" ಎನ್ನುವ ಸ್ಥಳೀಯ ಆಡಳಿತ ಸಂಸ್ಥೆಯೊಂದಿದೆ. ಅದರಲ್ಲಿ 26 ಸದಸ್ಯರ ಪೈಕಿ 7 ಮಂದಿ ಮಾತ್ರ ಚುನಾಯಿತರು. ಅಧ್ಯಕ್ಷರೂ ಉಪಾಧ್ಯಕ್ಷರೂ ಸರಕಾರೀ ಅಧಿಕಾರಿಗಳು. ಒಬ್ಬ ಬಾತ್ಮಿದಾರರು ಹೇಳುವಂತೆ ಈ 'ಸೆನಿಟರಿ ಬೋರ್ಡ್'ನಲ್ಲಿ ಚುನಾಯಿತ ಸದಸ್ಯರ ಸಂಖ್ಯೆ ತೀರ ಕಡಿಮೆಯಾದದರಿಂದ ಅವರ ಸ್ಥಿತಿಯು 'ಅಸಹಾಯಕ ಮತ್ತು ನಿರಾಶದಾಯಕ ಮಾತ್ರವಲ್ಲ ಅಪಮಾನಕರವೂ ನಿರರ್ಥಕವೂ' ಆಗಿದೆ. ಜವಾಬ್ದಾರಿ ಸರಕಾರ ಬಂದಂದಿನಿಂದ ಈ ಸೆನಿಟರಿ ಬೋರ್ಡನ್ನು ಮುನ್ಸಿಪಾಲಿಟಿಯಾಗಿ ಮಾರ್ಪಡಿಸಬೇಕೆಂದು ಎಲ್ಲ ಪಕ್ಷ ಪಂಗಡ, ಸಂಘ ಸಂಸ್ಥೆಗಳವರೂ ಸರಕಾರವನ್ನು ಕೇಳುತ್ತ ಬಂದಿದ್ದಾರೆ.

ಈ ಸಲದ ಚುನಾವಣೆ ದಶಂಬರ ತಾ. 22ಕ್ಕೆ ನಡೆಯಬೇಕಿತ್ತು. ದಶಂಬರ ತಾ 12ರಂದು ಚಿನ್ನದಗನಿ ಪ್ರದೇಶದ ನಾಗರಿಕ ಶಿಷ್ಟಮಂಡಲವೊಂದು ಮುಖ್ಯಮಂತ್ರಿಯವರನ್ನು ಭೇಟಿಯಾಗಿ, ಚುನಾವಣೆಗೆ ಮೊದಲು ಚುನಾಯಿತ ಸದಸ್ಯರಿಗೆ ಬಹುಮತವಾದರೂ ಇರುವಂತೆ ಮಾಡಬೇಕೆಂದು ಬೇಡಿಕೊಂಡರು. ಮುಖ್ಯಮಂತ್ರಿಯವರು, ಅವರು ರೂಢಿ ಮಾಡಿಕೊಂಡಿರುವಂತೆ, "ಸಹಾನುಭೂತಿಯಿಂದ ಆಲೋಚಿಸಲಾಗುವುದು" ಎಂದು ಭರವಸೆ ಕೊಟ್ಟರು. ಆದರೆ ಅದೇ ರೂಢಿಯಂತೆ ಆ ಭರವಸೆಯನ್ನು ಆಗಲೇ ಮರೆತೂ ಬಿಟ್ಟರು. ಈಗ "ಹಾಗೆ ಮಾಡಲಾಗುವುದಿಲ್ಲ" ಎನ್ನುತ್ತಾರೆ.

ಸರಕಾರದ ಈ ನಾಚಿಕೇಡು ಕ್ರಮವನ್ನು ಬಂಗಾರದ ಗನಿ ಪ್ರದೇಶದ ಇಡೀ ಜನತೆ ಪ್ರತಿಷೇಧಿಸಿದೆ. ಚುನಾವಣೆಯಲ್ಲಿ ಸ್ಪರ್ಧಿಸಬೇಕಾಗಿದ್ದ ಉಮೇದ್ವಾರರೂ, ಪಕ್ಷಗಳೂ, ಎಲ್ಲಜನರೂ ಒಂದಾಗಿ ಸರಕಾರದ ಈ ಜನ ವಿರೋಧಿ ನೀತಿಯನ್ನು ಖಂಡಿಸಿ ಚುನಾವಣೆಯನ್ನು ಬಹಿಷ್ಕರಿಸಿದ್ದಾರೆ. ದಶಂಬರ ತಾ 22ಕ್ಕೆ ನಡೆಯಬೇಕಾಗಿದ್ದ ಚುನಾವಣೆ—ಸ್ಪರ್ಧಿಸಲು ಯಾರೂ ನಿಲ್ಲದುದರಿಂದ—ನಡೆಯಲಿಲ್ಲ. ಬಂಗಾರದ ಗನಿ ಪ್ರದೇಶದ ನಾಗರಿಕರ ಈ ಆದರ್ಶ ಒಗಟ್ಟು ಮತ್ತು ಪ್ರಜಾಪ್ರಭುತ್ವದ ರಕ್ಷಣೆಗೆ ಅವರು ಅನುಸರಿಸಿದ ಕ್ರಮ ಅಭಿನಂದನೀಯವಿದೆ.

ಪ್ರಜಾಪ್ರಭುತ್ವದ ಮಂತ್ರ ಜಪಿಸುವ ಮೈಸೂರು ಸರಕಾರಕ್ಕೆ ನಿಜವಾಗಿ ಪ್ರಜಾಪ್ರಭುತ್ವದ ಭಯ ತುಂಬಿದೆ. ಬಂಗಾರದ ಗನಿ ಪ್ರದೇಶದಲ್ಲಿ ಎಸೆಂಬ್ಲಿ ಚುನಾವಣೆಯಲ್ಲಿ ಕಮ್ಯೂನಿಸ್ಟ್ ಉಮೇದ್ವಾರ ಆರಿಸಿ ಬಂದಿರುವುದನ್ನು ಇಲ್ಲಿ ಗಮನಿಸಬೇಕು. ಚುನಾಯಿತ ಪ್ರತಿನಿಧಿಗಳ ಬಹುಮತ ಇರುವ ಪೌರಸಭೆ ಏರ್ಪಡಿಸಿದರೆ ಕಮ್ಯೂನಿಸ್ಟರು ಬಹುಮತಗಳಿಸಬಹುದೆಂಬ ಭೀತಿ ಸರಕಾರಕ್ಕೆ ಇರಬಹುದು ಅಥವಾ ಕಾಂಗ್ರೆಸಿನೊಳಗೆ ಕಿತ್ತಾಡುತ್ತಿರುವ ಗುಂಪುಗಳಲ್ಲಿ ಸರಕಾರದ ವಿರೋಧಿ ಗುಂಪಿನವರು ಗೆದ್ದು ಬರಹಹುದೆಂಬ ಹೆದರಿಕೆ ಇರಬಹುದು. ಅಧಿಕಾರ ಭದ್ರಪಡಿಸುವುದಕ್ಕೆ ಪ್ರಜಾಪ್ರಭುತ್ವವನ್ನೇ ಸರಕಾರ ಬಲಿ ಕೊಟ್ಟಿದೆ.

ಕೇರಳ ವಿದ್ಯಾ ಮಸೂದೆ ಸುಪ್ರೀಂ ಕೋರ್ಟಿಗೆ

ರಾಷ್ಟ್ರಾಧ್ಯಕ್ಷರ ಅನುಮೋದನೆಗೆ ಕಳೆದ ಸಪ್ಟಂಬರ ತಿಂಗಳಲ್ಲಿ ಕಳುಹಿಸಲಾಗಿದ್ದ ಕೇರಳ ವಿದ್ಯಾ ಮಸೂದೆಯನ್ನು ಅವರು ಈಗ ಸುಪ್ರೀಂ ಕೋರ್ಟಿಗೆ ಕಳುಹಿಸಿದ್ದಾರೆ! ಈ ಮಸೂದೆಯ ಚರ್ಚೆ ನಡೆಯುತ್ತಿದ್ದಾಗ ಕೇರಳದ ಕೆಥೋಲಿಕ ಮಠಾಧಿಪತಿಗಳು, ಕಾಂಗ್ರೆಸ್—ಪಿ. ಎಸ್. ಪಿ ಪ್ರಭೃತಿಗಳು, ತೀವ್ರವಾಗಿ ವಿರೋಧಿಸಿದ್ದರು. ಗುಲ್ಲು-ಗಲಭೆ ಎಬ್ಬಿಸಿದ್ದರು. ಆದರೆ ಕೇರಳದ ಅಧ್ಯಾಪಕ ವೃಂದ, ಜನಸಾಮಾನ್ಯರು, ಈ ಮಸೂದೆಯನ್ನು ಸ್ವಾಗತಿಸಿ ಬೆಂಬಲ ನೀಡಿದ್ದರು. ಮಸೂದೆಯನ್ನು ವಿಧಾನ ಸಭೆಯಲ್ಲಿ ಮಂಡಿಸುವ ಮೊದಲು, ಕೇಂದ್ರ ಸರಕಾರದ ಸಲಹೆ-ಸೂಚನೆಗಳನ್ನು ಅದರಲ್ಲಿ ಸೇರಿಸಿಕೊಳ್ಳಲಾಗಿತ್ತು. ಕೇರಳ ವಿದ್ಯಾ ಮಸೂದೆಗೆ ದೇಶದ ಆದ್ಯಂತವಾಗಿ ಪ್ರಗತಿಶೀಲ ಜನರ ಸ್ವಾಗತ ದೊರಕಿತ್ತು. ಅದೊಂದು ಆದರ್ಶ ಮಸೂದೆ ಎನ್ನುವುದರಲ್ಲಿ ಅನುಮಾನವಿಲ್ಲ.

ಆದರೆ ಮಸೂದೆ ಮಂಜೂರಾಗಿ ಅಧ್ಯಕ್ಷರ ಅನುಮೋದನೆಗೆ ಕಳುಹಿಸಲ್ಪಟ್ಟು ಮೂರು ತಿಂಗಳುಗಳಾದುವು. ಈ ತನಕ ಅನುಮೋದನೆ ತಡೆಹಿಡಿದು, ಈಗ ಸುಪ್ರೀಂ ಕೋರ್ಟಿಗೆ ಕಳುಹಿಸಿರುವುದನ್ನು ನೋಡಿದರೆ, ಕೇರಳ ಸರಕಾರವನ್ನು ಬಲಾತ್ಕಾರದಿಂದಲೋ ಲಂಚದ ಬಲದಿಂದಲೋ ಉರುಳಿಸಲು ಯತ್ನಿಸುತ್ತಿದ್ದವರು ಕೃತಾರ್ಥರಾಗುವರೋ ನೋಡೋಣವೆಂದು ಕೇಂದ್ರ ಈವರೆಗೆ ಕಾದು ಕುಳಿತಿತ್ತೆಂದು ಹೇಳಬೇಕಾಗುತ್ತದೆ. ಕೇರಳ ಸರಕಾರವನ್ನು ಉರುಳಿಸುವ ಆಸೆ ಮಣ್ಣುಗೂಡಿತೆಂದು ಮನಗಂಡಾಗ, ಮಸೂದೆ ಸುಪ್ರೀಂ ಕೋರ್ಟಿಗೆ ಕಳುಹಿಸಲ್ಪಟ್ಟಿತೆಂದು ಎಣಿಸಿದರೆ ತಪ್ಪಾಗದು.

ಪ್ರಾಂತ ವಿಧಾನ ಸಭೆ ಅಂಗೀಕರಿಸಿದ ಮಸೂದೆಯೊಂದನ್ನು ರಾಷ್ಟ್ರಾಧ್ಯಕ್ಷರು ಸುಪ್ರೀಂ ಕೋರ್ಟಿಗೆ ಕಳುಹಿಸಿರುವುದು ಇದೇ ಮೊದಲು! ಇದೇ ಕೊನೆಯದೂ ಆಗಿರಲೆಂದು ಹಾರೈಸೋಣ! ಸಾರ್ವಜನಿಕ ಖಜಾನೆಯಿಂದ ಹಣ ಪಡೆದು ಖಾಸಗಿ ವ್ಯಕ್ತಿಗಳ ಅಥವ ವಿಶಿಷ್ಟ ಕೋಮಿನ ಸ್ವಂತ ಲಾಭಕ್ಕೆ ಬಳಸಿಕೊಳ್ಳುವುದನ್ನು "ಜಾತ್ಯತೀತ ರಾಷ್ಟ್ರ"ವೆಂದೂ "ಪ್ರಜಾರಾಜ್ಯ"ವೆಂದೂ ಹೇಳಿಕೊಳ್ಳುವ ನಮ್ಮ ದೇಶದಲ್ಲಿ ಎಷ್ಟು ಬೇಗ ಕೊನೆಗಾಣಿಸಲಾಗುವುದೋ ಅಷ್ಟು ಒಳ್ಳೆಯದು. ಮಠಾಧಿಪತಿಗಳ, ಗುತ್ತೇದಾರರ, ಜಮೀನುದಾರರ ಪ್ರತಿರೋಧಕ್ಕೆ ತಲೆಬಾಗದಿರುವ ಧೈರ್ಯ ಕಾಂಗ್ರೆಸ್ ಸರಕಾರಗಳಿಗೆ ಇಲ್ಲವಾದರೆ, ಅಂಥ ಧೈರ್ಯವಿರುವ ಕಮ್ಯೂನಿಸ್ಟ್ ಸರಕಾರಕ್ಕಾದರೂ ಕೇಂದ್ರ ಅಡ್ಡಿ ಮಾಡದಿರಲಿ.

ವಿದ್ಯಾ ಮಸೂದೆ ಒಂದೇ ಅಲ್ಲ, ಖಾಸಗಿ ಅರಣ್ಯಗಳ ಆಡಳಿತೆಯನ್ನು ಸರಕಾರ ವಹಿಸಿಕೊಳ್ಳುವ ಮಸೂದೆ ಮತ್ತು ಬೇರೆ ಮೂರು ಮಸೂದೆಗಳು ಅಧ್ಯಕ್ಷರ ಅನುಮೋದನೆ ಕಾಯುತ್ತಿವೆ. ಈ ಮಸೂದೆಗಳಿಗೆಲ್ಲ ರಾಷ್ಟ್ರಾಧ್ಯಕ್ಷರ ಅನುಮತಿ ಕೂಡಲೆ ದೊರಕಲಿ. ಇದು ದೇಶದ ಆದ್ಯಂತ ಜನತೆಯ ಒತ್ತಾಯದ ಬೇಡಿಕೆ.

ಕೇರಳ ದವಿದ್ಯಾಮಂತ್ರಿ ಈ ಬಗ್ಗೆ ಪ್ರಸ್ತಾಪಿಸುತ್ತ, 'ಕೇಂದ್ರ ಸರಕಾರದ ನ್ಯಾಯಾಂಗಕ್ಕೆ ನಮ್ಮ ವಿದ್ಯಾಮಸೂದೆಯಲ್ಲಿ ಆಕ್ಷೇಪಕರವಾದುದೇನೂ ಕಂಡುಬರಲಿಲ್ಲ ಎಂದೀಗ ಸ್ಪಷ್ಟವಾಯಿತು. ಸುಮ್ಮನೆ ದಿನ ಕಳೆಯುವ ಬದಲು ಮಸೂದೆಯನ್ನು ರಾಷ್ಟ್ರದ ಅತ್ಯುನ್ನತ ನ್ಯಾಯಾಲಯಕ್ಕೆ ಕಳುಹಿಸಲಾಗಿದೆ ಎನ್ನುವುದು ಸಂತೋಷದ ಸುದ್ದಿ. ಸುಪ್ರೀಂ ಕೋರ್ಟಿಗೂ ಅದರಲ್ಲೇನೂ ಆಕ್ಷೇಪ ಕಾಣಲಾರದೆಂದು ಹಾರೈಸುತ್ತೇವೆ" ಎಂದಿದ್ದಾರೆ.

ಬುಲ್ಗಾನಿನ್‌ರ ಶಾಂತಿ ಪತ್ರಗಳು

ನ್ಯಾಟೋ ಸಮ್ಮೇಳನದಲ್ಲಿ ಗೊಂದಲ
ಐಕ್ ನೀತಿಗೆ ಅಮೆರಿಕದಲ್ಲೆ ಪ್ರತಿರೋಧ

ವಿಶ್ವಸಂಸ್ಥೆಯ ನಿರಾಯುಧೀಕರಣ ಸಮಿತಿಯಲ್ಲಿ ಇತ್ಯರ್ಥವಾಗದೆ—ಇತ್ಯರ್ಥವಾಗಲು ಸಾಧ್ಯವಾಗದಂತೆ ಅಮೆರಿಕಾದ ಅನುಯಾಯಿ ರಾಷ್ಟ್ರಗಳ ಬಹುಮತ ಅಡ್ಡ ಬಂದುದರಿಂದಾಗಿ—ಸೋವಿಯತ್ ರಷ್ಯಾ ನಿರಾಯುಧೀಕರಣದ ಬಗ್ಗೆ, ಅಣು ಬಾಂಬುಗಳ ಪ್ರಯೋಗ ನಿಲ್ಲಿಸಬೇಕೆಂದುದರ ಬಗ್ಗೆ, ಮುಂದಿಟ್ಟ ಸಲಹೆಗಳೆಲ್ಲಾ ಇಷ್ಟರವರೆಗೆ ವ್ಯರ್ಥವಾಗುತ್ತಾ ಬಂದಿವೆ.

ಕಟ್ಟಕಡೆಗೆ, ಅಣುಅಸ್ತ್ರ ರಾಷ್ಟ್ರಗಳೊಳಗೆ ಒಂದು ಶೃಂಗ ಸಮ್ಮೇಳನ ಕರೆಯಬೇಕೆಂದೂ, ರಷ್ಯಾ ಕರೆಯಿತ್ತಿತು. ಇದು ಅಮೆರಿಕಾದ ಶೀತಲ ಯುದ್ಧದ ಮಡುವಿನಲ್ಲಿ ಮುಳುಗಿದಂತೆ ಭಾಸವಾಯಿತು. ಇತ್ತ ಪ್ರಧಾನಿ ನೆಹ್ರೂರವರು, ನ್ಯೂಕ್ಲಿಯರ್ ರಾಷ್ಟ್ರಗಳು ಅಣು–ಜಲಜನಕ ಬಾಂಬುಗಳ ಪ್ರಯೋಗವನ್ನು ಮೊದಲಾಗಿ ಒಂದು ನಿಶ್ಚಿತ ಅವಧಿಯ ವರೆಗೆ ನಿಲ್ಲಿಸಲು ಸಂಧಿಗೆ ಬರಬೇಕೆಂದು ಪತ್ರಮೂಲಕ ಅಮೆರಿಕಾದ ಅಧ್ಯಕ್ಷ ಐಕ್ ಮತ್ತು ರಷ್ಯಾ ಮಹಾಪ್ರಧಾನಿ ಬುಲ್ಗಾನಿನ್‌ರನ್ನು ಕೇಳಿಕೊಂಡರು. ಬುಲ್ಗಾನಿನ್ ಇದನ್ನು ಒಪ್ಪಿದ್ದೇ ಅಲ್ಲ, ಜನವರಿ ಒಂದರಿಂದ ಅಮೆರಿಕಾ ಒಪ್ಪಿದಲ್ಲಿ, ಅಣುಬಾಂಬು ಪ್ರಯೋಗವನ್ನು ರಷ್ಯಾ ನಿಲ್ಲಿಸುವುದಾಗಿ ಘೋಷಿಸಿದರು. ಅಮೆರಿಕಾ ಇತ್ತ ಉತ್ತರ ಆಶಾಜನಕವಾಗಿಲ್ಲ. ಬದಲು ಹಿಂದಿನಂತೆಯೇ ರಷ್ಯಾದ ಮಾತು ನಂಬಲಸಾಧ್ಯ, ಎಂಬ ಏನೇನೋ ಸ್ವಯಂ ಕಲ್ಪಿತ ನೆಪಗಳನ್ನು ಮುಂದೊಡ್ಡಿತು. ಶಾಂತಿಯೇ 'ಸ್ವತಂತ್ರ ವಿಶ್ವದ ಗುರಿ'ಯೆಂದು ಯುದ್ಧ ಕೂಟವಾದ ನ್ಯಾಟೋ ರಾಷ್ಟ್ರಗಳ ಶೃಂಗ ಸಮ್ಮೇಳನವನ್ನು ಅಮೆರಿಕಾ ಕರೆಯಿತು.

ನ್ಯಾಟೋದಲ್ಲಿ ಬಿರುಕು

ಕೂಡಲೇ ನ್ಯಾಟೋ ರಾಷ್ಟ್ರಗಳಲ್ಲಿ ಪ್ರತಿಯೊಂದನ್ನೂ ಉದ್ದೇಶಿಸಿ, ಬುಲ್ಗಾನಿನ್‌ರವರು ಶಾಂತಿ ಪತ್ರಗಳನ್ನು ಕಳಿಸಿದರು. ಈ ಪತ್ರದ ಪರಿಣಾಮವೆಂದರೆ 'ನ್ಯಾಟೊ' ಯುದ್ಧಕೂಟಗಳ ಕೋಟೆಯಲ್ಲಿ ಬಿರುಕು ಉಂಟಾದದ್ದು.

ಇತ್ತ 'ಸ್ಪೂತ್ನಿಕ್'ನ ಯಶಸ್ವಿ ಪ್ರಯೋಗ. ವಿಶ್ವದ ಎಲ್ಲೆಡೆಯನ್ನು ಮುಟ್ಟಬಲ್ಲ ಅಂತರಖಂಡ ಕ್ಷಿಪಣಿಯ ಸಾಧನೆ ಇದರ ಪರಿಣಾಮವಾಗಿ ಯುರೋಪಿನ ರಾಷ್ಟ್ರಗಳು ಅಮೆರಿಕಾದ ಮಧ್ಯಾಂತರ ಕ್ಷಿಪಣಿಗೆ ನೆಲೆಯೀಯಬೇಕೆಂಬ ಅಮೆರಿಕಾದ ಕೇಳಿಕೆಗೆ, ದೃಢವಾಗಿ ನಾರ್ವೆ ಮತ್ತು ಸ್ವೀಡನ್‌ಗಳು ಪ್ರತಿರೋಧಿಸಿವೆ.

ಇದಕ್ಕೆ ಮೊದಲು ಒಪ್ಪಿದ ಫ್ರಾನ್ಸ್ ಕೂಡಾ, ಈಗ, ರಷ್ಯಾ–ಅಮೆರಿಕಾ ಮತ್ತಿತರ ನ್ಯೂಕ್ಲಿಯರ್ ರಾಷ್ಟ್ರಗಳ ವಿದೇಶೀ ಮಂತ್ರಿಗಳ ಮಟ್ಟದಲ್ಲಿ ಸಮ್ಮೇಳನ ಕರೆಯುವುದುತ್ತಮವೆಂದು ಹೇಳಿದೆ.

ಬ್ರಿಟನಿನಲ್ಲಿ ವಿರೋಧಿ ಪಕ್ಷಗಳ ಮತ್ತು ಜನರ ವಿರೋಧ ಉದ್ರೇಕಗೊಂಡಿದೆ. ಬ್ರಿಟನ್ ತನ್ನನ್ನು ಅಮೆರಿಕಾಕ್ಕೆ ಮಾರಿಕೊಂಡಿದೆ ಎಂದು ಪ್ರಧಾನಿ ಮ್ಯಾಕ್ಮಿಲನರನ್ನು ಅವ ಟೋರಿ ಪಕ್ಷದವರು ಕೂಡಾ ಟೀಕೆ ಮಾಡಿದ್ದಾರೆ.

ಅಮೆರಿಕಾ ಪ್ರತಿಷ್ಠೆ ಇಳಿಮುಖವಾಗಿದೆ

ಇಷ್ಟರವರೆಗೆ ಯುರೋಪಿನಲ್ಲಿ ಯುದ್ಧ ನಡೆದರೆ ಅಮೆರಿಕಾ ದೂರದಲ್ಲಿ ಸುರಕ್ಷಿತವಾಗಿ ಇರಬಹುದೆಂಬ ಭಾವನೆ ಅಮೆರಿಕನ್ ಜನತೆ ಮತ್ತು ರಾಜಕಾರಣಿಗಳಲ್ಲಿ ಮನೆಮಾಡಿತ್ತು. ರಷ್ಯಾದ ಖಂಡಾಂತರ ಕ್ಷಿಪಣಿ ಈ ಸುರಕ್ಷಿತೆಯ ಮರಳಿನ ಮನೆಯನ್ನು ಮುರಿದಿದೆ. ಯುರೋಪಿನ ರಾಷ್ಟ್ರಗಳಿಗೂ, ಇದರಿಂದಾಗಿ, ಜ್ಞಾನೋದಯವಾದಂತಾಗಿದೆ. ಇಲ್ಲಿ ವರೆಗೆ ಅಮೆರಿಕಾವನ್ನು ಹೊಂದಿಕೊಂಡಿರಬೇಕಾಗಿದ್ದ ಈ ರಾಷ್ಟ್ರಗಳು ಇದೀಗ ಯುದ್ಧವಾದರೆ ಹೇಗೂ ನಮ್ಮ ನಾಶ ಶತಸಿದ್ಧ. ಅತ್ತ ಅಮೆರಿಕಾ ಕೂಡಾ ರಷ್ಯದ ಕ್ಷಿಪಣಿಗಳಿಗೆ ಅರ್ಧ ಗಂಟೆಯಲ್ಲೇ ಬಲಿ ಬೀಳುವುದೂ ಖಂಡಿತ; ಪರಿಸ್ಥಿತಿ ಹೀಗಿರುವಾಗ ಅಮೆರಿಕಾದ ಕೆಲವು ಯುದ್ಧ ಖೋರರ ಹುಚ್ಚುತನಕ್ಕೆ ನಾವೇಕೆ ಬಲಿಯಾಗಬೇಕೆಂದು ಯೋಚಿಸ ಹತ್ತಿದ್ದಾರೆಂದು ತಿಳಿಯಲಾಗಿದೆ. ಸಾಮ್ರಾಜ್ಯಶಾಹಿ ಶಿಬಿರಗಳಲ್ಲೇ ಗೊಂದಲ ಹುಟ್ಟಿ, ನ್ಯಾಟೊ ಸಮ್ಮೇಳನದಿಂದ ಅಮೆರಿಕಾ ಬಯಸಿದ ಸಹಾಯ ಫಲಿಸಲಿಲ್ಲ.

ಅಮೆರಿಕದ ಪ್ರತಿಕ್ರಿಯೆ

ಅತ್ತ ಅಮೆರಿಕದಲ್ಲೆ ಪತ್ರಿಕೆಗಳು, ಪಕ್ಷ ಹಾಗು ಜನತೆಯಿಂದ ಶಾಂತಿಯ ಒತ್ತಾಯ ಹೆಚ್ಚಾಗುತ್ತಿದೆ. ರಷ್ಯಾದಲ್ಲಿ ಹಿಂದೆ ರಾಯಭಾರಿಯಾಗಿದ್ದ, ಕೆನ್ನನ್‌ರವರು, ರಷ್ಯಾ ಹೇಳಿದ್ದನ್ನೆಲ್ಲಾ ನಂಬದಿರುವುದು ಅಮೆರಿಕಾಕ್ಕೆ ಹಿಡಿದ ಅಂಟು ಜಾಡ್ಯ. ಇದರಿಂದ ಅಮೆರಿಕಾಕ್ಕೆ ನಷ್ಟವಲ್ಲದೆ ರಷ್ಯಾಕ್ಕೇನು ತೊಂದರೆಯಾಗದು. ರಷ್ಯಾದ ಶಾಂತಿ ಪ್ರಯತ್ನವನ್ನು ಅಮೆರಿಕಾ ನೇರದೃಷ್ಟಿಯಿಂದ ಪರಿಗಣಿಸುವುದು ಕ್ಷೇಮವೆಂದು ಸಾರಿದ್ದಾರೆ.

ಶಾಂತಿ ಅನಿವಾರ್ಯ

ಕೊನೆಗೂ 1957 ಅಂತ್ಯವಾಗುವಾಗ ನಿರಾಯುಧೀಕರಣ ಅಣುಅಸ್ತ್ರ ಪ್ರಯೋಗದ ನಿಷೇಧ, ಜಾಗತಿಕ ಶಾಂತಿ ಮತ್ತು ಇವೆಲ್ಲವನ್ನು ತನ್ನೆದೆಯಲ್ಲಿ ಅಡಗಿಸಿರುವ 'ಶೀತಲ ಯುದ್ಧ' ನೀತಿಯಲ್ಲಿ ಮೇಲಿಂದ ಮೇಲೆ ಏನೊಂದು ಬದಲಾವಣೆ ಕಾಣಬರುವುದಿಲ್ಲವಾದರೂ ನಿಜಾಂಶ ಮಾತ್ರ ಬೇರಿದೆ. ಹೊಸ ವರುಷದಲ್ಲಿ ಇದರ ನಿಜವಾದ ಪರಿಣಾಮ ನಮಗೆ ತೋರಬಹುದು. ಜನವರಿ ಒಂದರಿಂದ 'ನ್ಯೂಕ್ಲಿಯರ್' ಅಸ್ತ್ರ ಪ್ರಯೋಗ ರದ್ದು ಮಾಡುವೆನೆಂದು ರಷ್ಯಾ ಘೋಷಿಸಿದ್ದು, ಅಮೆರಿಕಾ ಇದನ್ನಿನ್ನೂ ಒಪ್ಪಿಲ್ಲವೆನ್ನೋ ನಿಜ.

ಆದರೆ ಶಸ್ತ್ರಾಸ್ತ್ರಗಳ ಪಂದ್ಯಾಟದಲ್ಲಿ ಹಿಂದೆ ಬಿದ್ದು ಮುಖಭಂಗ ಹೊಂದಿದ ಅಮೆರಿಕಾ ಇನ್ನೂ ಈ ಓಟದಲ್ಲಿ ರಷ್ಯಾವನ್ನು ಸೋಲಿಸುವ ಹಗಲುಕನಸು ಕಾಣುತ್ತಿದೆಯಾದರೂ ಇಂದು ಅಮೆರಿಕಾದ ಪ್ರತಿಷ್ಠೆ ಇಳಿಮುಖವಾಗುತ್ತಿದೆ. ಅದರ ಶಿಬಿರದಲ್ಲೆ ಅಮೆರಿಕಾದ ಮಾತು ಮಾರಿ ರಾಷ್ಟ್ರಗಳೂ, ಅಲ್ಲಿನ ಜನತೆಯೂ ಶಾಂತಿಗಾಗಿ ಹಾತೊರೆಯುತ್ತಿದ್ದಾರೆ. ಶಾಂತಿಯ ಅಂತಿಮ ವಿಜಯದ ಸಂಕೇತವೋ ಎಂಬಂತೆ ಇಂದು ನಾರ್ವೆ ಮತ್ತು ಸ್ವೀಡನ್ ಅಮೆರಿಕಾದ ಯುದ್ಧನೆಲೆಯ ನೀತಿಯನ್ನು ಧಿಕ್ಕರಿಸಿವೆ, ನಾಳೆ ಇದು ವಿಶ್ವವಿಡೀ ಪಸರುವುದು ಖಂಡಿತ: ಆಗಲಾದರೂ ಅಮೆರಿಕಾ ತನ್ನ ಜನತೆಯ ಮತ್ತು ವಿಶ್ವದ ಇತರ ಶಾಂತಿಯುತ ರಾಷ್ಟ್ರಗಳ ಒತ್ತಾಯಕ್ಕೆ ತಲೆಬಾಗ ಬೇಕಾಗುವುದು ಅನಿವಾರ್ಯ.

ನ್ಯೂಕ್ಲಿಯರ್ ಕ್ಷೇತ್ರದಲ್ಲಿ ರಷ್ಯಾದ ಮತ್ತೊಂದು ವಿಜಯ

"ಹೈಡ್ರೊಜನ್ ಬಾಂಬು ಸಿಡಿಯುವಾಗ ನಡೆಯುವ ಅದ್ಭುತವಾದ ಪ್ರತಿಕ್ರಿಯೆನ್ನು ಲೆಬೊರೇಟರಿ ಪರಿಸ್ಥಿತಿಯಲ್ಲಿ ಅವಲೋಕಿಸುವ ಕಾರ್ಯದಲ್ಲಿ ರಷ್ಯನ್ ವಿಜ್ಞಾನಿಗಳು ಸಫಲರಾಗಿದ್ದಾರೆ" ಎಂದು ಸೋವಿಯತ್ ವಿಜ್ಞಾನಿಗಳ ಅಕಾಡೆಮಿಯ ಸದಸ್ಯರಾದ ಅಲೆಕ್ಸಾಂಡರ್ ತರ್ಪಿಗೊಲೆವ್ ಮೊಸ್ಕೊ ರೇಡಿಯೋ ಪ್ರಕಟಣೆಯೊಂದರಲ್ಲಿ ಹೇಳಿದ್ದಾರೆ.

ಮಾನವನ ಅಧೀನವಾಗಿ, ಥರ್ಮೊ–ನ್ಯೂಕ್ಲಿಯರ್ ಪ್ರತಿಕ್ರಿಯೆ ಎಂಥದಿದೆ, ಹೈಡ್ರೊಜನ್ ಬಾಂಬು ಸಿಡಿಯುವಾಗ ಉಂಟಾಗುವ ಅಗಾಧವಾದ ಉಷ್ಣ ಮತ್ತಿತರ ವಿಶಿಷ್ಟ ಪ್ರತಿಕ್ರಿಯೆಗಳೇನು ಎಂಬುದರ ಬಗ್ಗೆ ಅಮೆರಿಕಾ, ಬ್ರಿಟನ್‌ನಿನ ನ್ಯೂಕ್ಲಿಯರ್ ವಿಜ್ಞಾನಿಗಳು ಪ್ರಯೋಗಗಳನ್ನು ನಡೆಸುತ್ತಾ ಬಂದಿದ್ದಾರೆ. ಇದರಲ್ಲಿ ಬ್ರಿಟನ್ ಸಾಕಷ್ಟು ಮುಂದುವರಿದಿದೆ ಎಂದು ಹೇಳಲಾಗಿದೆ.

ಆದರೆ, ಲೆಬೊರೇಟರಿ ಪರಿಸ್ಥಿತಿಯ ಅಧೀನದಲ್ಲಿ ಒಂದು ಮಿಲಿಯ ಡಿಗ್ರಿಗೂ ಮೀರಿದ ಉಷ್ಣಾಂಶವನ್ನು ಪಡೆದಿರುವುದರಲ್ಲಿ ರಷ್ಯಾವೇ ಮೊದಲು. ಈ ಹೊಸ ಪ್ರಯೋಗವು ಯಶಸ್ವಿಯಾದುದರಿಂದಾಗಿ ರಷ್ಯಾವು ಈ ನ್ಯೂಕ್ಲಿಯರ್ ಕ್ಷೇತ್ರದಲ್ಲಿ ಬಾಕಿ ನ್ಯೂಕ್ಲಿಯರ್ ರಾಷ್ಟ್ರಗಳನ್ನು ಹಿಂದಕ್ಕೆ ಹಾಕಿ ಸ್ಪೂತ್ನಿಕ್ ನಂತರ ಇನ್ನೊಂದು ವಿಜಯವನ್ನು ಸಾಧಿಸಿದೆ ಎಂದು ಹೇಳಲಾಗಿದೆ. ಅಷ್ಟೇ ಅಲ್ಲ, ಥರ್ಮೊ–ನ್ಯೂಕ್ಲಿಯರ್ ಪ್ರತಿಕ್ರಿಯೆಯನ್ನು, ಮಾನವ ಅಧೀನಪಡಿಸಿ, ನಡೆಸುವುದಾದಲ್ಲಿ ಇದರಿಂದ ಜನಿತವಾದ ಪ್ರಚಂಡವಾದ ವಿದ್ಯುತ್ ಶಕ್ತಿಯಿಂದಾಗಿ ಮಾನವ ಅದ್ಭುತವಾದುವನ್ನು ಸಾಧಿಸಬಲ್ಲ ಎಂದು ತಿಳಿಯಲಾಗಿದೆ. ಅಣುಶಕ್ತಿಗಳ ಶಾಂತಿಯುತ ಬಳಕೆಯ ಹೊಸಯುಗ ಆರಂಭದಲ್ಲೇ ರಷ್ಯಾ ಅಗ್ರಪಾತ್ರವಹಿಸಿರುವುದು ಅಭಿನಂದನೀಯ.

ಇನ್ನೊಂದು ರೈಲ್ವೆ ದುರಂತದಲ್ಲಿ ಹೊಸ ವರ್ಷದ ಆರಂಭ

1956–57ರ ವರ್ಷವಿಡಿ ಅಗ್ಗೈ ಭೀಕರವಾದ ರೈಲ್ವೆ ದುರಂತಗಳು ನಡೆದಿದ್ದು ಈ ಬಗ್ಗೆ ವಿಚಾರ ಸಮಿತಿಗಳೂ, ಲೋಕಸಭೆಯಲ್ಲಿ ತೀವ್ರ ಚರ್ಚೆಗಳೂ ನಡೆದಿವೆ. ಮೆಹಬೂಬ್ ನಗರ ಅರಿಯಲೂರು ಮತ್ತು ಇದೇ ಕಳೆದ ನವೆಂಬರ್ ತಿಂಗಳಲ್ಲಿ ಮುಂಬಾಯಿ ಬಳಿ ನಡೆಯಲಾದ ದುರಂತನೀಯ ರೈಲ್ವೆ ದುರ್ಘಟನೆಗಳ ನಂತರ, ಹೊಸ ವರುಷವು ಕೂಡಾ ಇನ್ನೊಂದು ರೈಲ್ವೆ ದುರಂತದಲ್ಲಿ ಆರಂಭವಾದುದು ವಿಷಾದಪೂರ್ಣವಾಗಿದೆ

ಅಂಬಾಲದ ಮೊಹ್ರಿ ಸ್ಟೇಷನಿನಿಂದ ಆರು ಮೈಲಿ ಅಂತರದಲ್ಲಿ ನೋರ್ತರ್ನ್ ರೈಲ್ವೆ ಮೇಲೆ ಬೆಳಗ್ಗೆ 4 ಗಂಟೆ ಹೊತ್ತಿಗೆ ನಡೆದ ಈ ಘಟನೆ ದುರ್ದೈವೀ ದುರಂತವೆಂದು ರೈಲ್ವೆ ಉಪಮಂತ್ರಿಯೊಬ್ಬರು ಹೇಳಿಕೆ ಇತ್ತಿದ್ದಾರೆ ಹೌದು 34 ಜನ ಸಾಯುವುದು ಹಾಗೂ 89 ಜನರು ತೀವ್ರವಾಗಿ ಘಾಯ ಪಟ್ಟಿರುವುದು ದುರಂತನೀಯವೇ ಸರಿ. ಆದರೆ ಇದಕ್ಕಿಂತಲೂ ದುರಂತನೀಯವಾದುದು ಈ ರೈಲ್ವೆ ಮಂತ್ರಿ ಖಾತೆ ಹಾಗು ರೈಲ್ವೆ ಬೋರ್ಡುಗಳು ಬದಲಾಗದೆ ಉಳಿದುದು.

ಈ "ಮರದ ತಲೆಯ" ನೌಕರಶಾಹಿಗಳ ಕಿವಿಗೆ ದುರಂತಗಳ ಮೇಲೆ ದುರಂತಗಳು ನಡೆದು ದೇಶವಿಡೀ ಪ್ರತಿಭಟನೆಯ ಕೋಲಾಹಲವೆದ್ದರೂ, ಅದು ಇವರ ಮೇಲೆ ಯಾವ ಪರಿಣಾಮವನ್ನು ಬೀರದಂತೆ ಕಂಡಿಲ್ಲ. ವಿಚಾರಣೆ ನಡೆದು ರೈಲ್ವೆ ಅಧಿಕಾರಿಗಳ ತಪ್ಪು ತೋರಿಸಿದರೂ ಸರಕಾರ ಈ ಕಡೆ ಗಮನ ಕೊಟ್ಟಿಲ್ಲ; ಇದಕ್ಕಿಂತ ದೊಡ್ಡ ದುರಂತ ಇನ್ನೊಂದಿದೆಯೇ! ಈ ಅಧಿಕಾರಶಾಹಿ ರೈಲ್ವೆ ಅಧಿಕಾರ ವರ್ಗ ಹಾಗೂ ಅಧಿಕಾರಾಂಧ ಕಾಂಗ್ರೆಸ್ ಸರಕಾರ ಇವೆರಡೂ ಈ ದುರಂತಗಳಿಗೆ ಹೊಣೆ ಎಂದು ನಾವು ದೃಢವಾಗಿ ಹೇಳುತ್ತೇವೆ.

ಕೇರಳ ಭೂ-ಸಂಬಂಧ ಮಸೂದೆ

ಭೂಮಾಲಕತ್ವ ಕೊನೆಗಾಣಿಸುವ ಆದರ್ಶ ಶಾ

ಕೇರಳ ಸರಕಾರದ ಒಂದೊಂದು ಹೆಜ್ಜೆಯನ್ನೂ ಇಡೀ ದೇಶ ಆಶೆ ಮತ್ತು ಆಸಕ್ತಿ ತುಂಬಿದ ದೃಷ್ಟಿಯಿಂದ ನಿರೀಕ್ಷಿಸುತ್ತಿದೆ. ನಮ್ಮ ನಾಡಿನ ಒಂದೇ ಒಂದು ಕಾಂಗ್ರೆಸೇತರ ಸರಕಾರ, ಅದರಲ್ಲೂ ಕಮ್ಯೂನಿಸ್ಟ್ ಸರಕಾರ, ಜನತೆ ಹತ್ತು ವರ್ಷಗಳಿಂದಲೂ ಇದಿರು ನೋಡುತ್ತಿದ್ದ ಸುಧಾರಣೆಗಳಲ್ಲಿ ಒಂದೊಂದನ್ನೇ ಜಾರಿಗೆ ತರುತ್ತಿದೆ. ಕೇರಳ ಸರಕಾರವು ಜಾಗರೂಕತೆಯಿಂದ, ದೃಢವಾದ ಹೆಜ್ಜೆಗಳನ್ನು ಇಟ್ಟು, ಪ್ರಜಾ ಪ್ರಭುತ್ವ ಮತ್ತು ರಾಷ್ಟ್ರೀಯ ಪುರೋಗಮನಕ್ಕೆ ಭದ್ರವಾದ ಬುನಾದಿಯನ್ನು ಕಟ್ಟುತ್ತಿದೆ.

ಈಗ ಸಾರ್ವಜನಿಕ ಅಭಿಪ್ರಾಯ ಸಂಗ್ರಹದ ಬಗ್ಗೆ ಪ್ರಕಟವಾಗಿರುವ ಭೂ ಸಂಬಂಧ ಮಸೂದೆಯು ಅಂಥ ಒಂದು ಸ್ವಾಗತಾರ್ಹ ಹೆಜ್ಜೆಯಾಗಿದೆ. ಭೂಸುಧಾರಣೆಯ ಬಗ್ಗೆ ಉದ್ದುದ್ದ ಭಾಷಣ ಮಾಡುವುದು, ವಿಚಾರಣಾ ಸಮಿತಿಗಳ ಮೇಲೆ ವಿಚಾರಣಾ ಸಮಿತಿಗಳನ್ನು ನೇಮಿಸುವುದು, ವರದಿಗಳ ಮೇಲೆ ವರದಿಗಳನ್ನು ಪ್ರಕಟಿಸುವುದು, ಅವನ್ನು ಚರ್ಚಿಸುವುದರಲ್ಲಿ ಕಾಲ ಕಳೆಯುವುದು, ಮತ್ತೆ ಅವನ್ನೆಲ್ಲ ಕಸದ ಬುಟ್ಟಿಗೆ ಸೇರಿಸುವುದು—ಹೀಗೆ ಕಾಂಗ್ರೆಸ್ ಸರಕಾರಗಳು ಕಾಲ ಕಳೆಯುತ್ತಿವೆ. ಸರಕಾರಗಳು ಹೀಗೆ ಕಾಲಹರಣ ಮಾಡುವಾಗಲೇ ಭೂಮಾಲಕರು ಉಳುವವರನ್ನು ಹೊಲಗಳಿಂದ ಹೊರತಳ್ಳುತ್ತಾರೆ; ಗೇಣಿ ಚೀಟಿ ಅಥವ ಗುತ್ತಿಗೆ ಪತ್ರಗಳನ್ನು ಹರಿದು ಹಾಕಿ "ಗೈಮೆ ಕರಾರು" ಅಥವ ಕೂಲಿ ಕೆಲಸದ ಆಳು ತಾನೆಂದು ರೈತರಿಂದ ಬರೆಸಿಕೊಳ್ಳುತ್ತಾರೆ; ಆಸ್ತಿಯನ್ನು ಬೇಕು ಬೇಕಾದವರೊಳಗೆ ಹರಿದು ಹಂಚಿಕೊಂಡು ಬಿನಾಮಿ ದಾಖಲೆಗಳನ್ನು ತಯಾರಿಸಿಕೊಳ್ಳುತ್ತಾರೆ. ಇದೆಲ್ಲ ನಮ್ಮ ಮೈಸೂರು ರಾಜ್ಯದಲ್ಲಿ ನಾವು ಕಣ್ಣಾರೆ ಕಾಣುತ್ತಿದ್ದೇವೆ; ಸ್ವತಃ ಅನುಭವಿಸುತ್ತಿದ್ದೇವೆ. ಕೇರಳ ಸರಕಾರವು ಮಾತಿನಲ್ಲಿ ಕಾಲ ಕಳೆಯದೆ ಕಾರ್ಯವನ್ನು ಕೈಗೊಂಡಿದೆ. ಬರಲಿರುವ ಕಾನೂನಿನಿಂದ ತಪ್ಪಿಸಿಕೊಳ್ಳುವ ಭೂಮಾಲಕರಿಗೆ ಮೊದಲೇ ಬೇಲಿ ಹಾಕಿದೆ. ಕಾನೂನಿನಲ್ಲಿ ಜಾರುಕಂಡಿಗಳನ್ನು ಬಿಟ್ಟಿಲ್ಲ. ರೈತರಿಗೆ ಬರಿ ಆಶ್ವಾಸನೆ ಮತ್ತು ಭೂಮಾಲಿಕರಿಗೆ ಬೇಕು ಬೇಕಾದ ಅವಕಾಶ ಕೊಡುವ ಶಾಸನವನ್ನು ತಂದು ಜನತೆಯ ಕಣ್ಣಿಗೆ ಮಣ್ಣೆರಚುವ ಕಾಂಗ್ರೆಸ್ ಸರಕಾರಗಳ ಡೊಂಬರಾಟದಂತೆ ಕೇರಳ ಸರಕಾರ ಮಾಡಿಲ್ಲ. ಉಳುವ ರೈತರಿಗೆ ಅತ್ಯಧಿಕ ರಕ್ಷಣೆ ಮತ್ತು ಸವಲತ್ತು ನಿಜವಾಗಿ ಕೊಡಲ್ಪಟ್ಟಿದೆ; ಅದೇ ಸಮಯದಲ್ಲಿ ಚಿಕ್ಕ ಭೂಮಾಲಿಕರಿಗೆ –ವ್ಯವಸಾಯಗಾರರಾದ ಭೂಮಾಲಕರಿಗೆ –ಸಾಕಷ್ಟು ಅನುಕೂಲತೆಯನ್ನು ನೀಡಲಾಗಿದೆ.

ರೈತರಿಂದ ಹೊಲ ತಪ್ಪಿಸುವುದಕ್ಕೆ ತಡೆ

ಕೇರಳ ಭೂಸಂಬಂಧ ಮಸೂದೆಯು ಉಳುವ ರೈತರಿಂದ ಹೊಲ ತಪ್ಪಿಸುವುದನ್ನು ಹೆಚ್ಚು ಕಡಿಮೆ ಸಂಪೂರ್ಣವಾಗಿ ನಿಷೇಧಿಸಿದೆ. ಮತ್ತೊಬ್ಬರ ಜಮೀನಿನಲ್ಲಿ ಯಾವ ತರದ ಕರಾರು ಅಥವ ಸಂಪ್ರದಾಯಕ್ಕೆ ಒಳಪಟ್ಟು ಸಾಗುವಳಿ ಮಾಡುವ ರೈತನಾದರೂ ಈ ಕಾನೂನಿನ ರಕ್ಷಣೆಗೆ ಪಾತ್ರನಾಗುತ್ತಾನೆ. ಒಂದು ವೇಳೆ ತಾನು ಬರೇ ಕೂಲಿ ಕೆಲಸಗಾರನೆಂದು ರೈತನು ಭೂಮಾಲಕನಿಗೆ ಬರೆದು ಕೊಟ್ಟಿದ್ದರೂ, ತಾನು ನಿಜವಾಗಿ ಬೇಸಾಯಗಾರ ಒಕ್ಕಲೆಂದು ಸಾಕ್ಷಿಗಳ ಮುಖಾಂತರ ರುಜುಪಡಿಸಿದಲ್ಲಿ ಅಂಥವನನ್ನೂ ಒಕ್ಕಲೆಂದೇ ಪರಿಗಣಿಸಲಾಗುವುದು.

1957ನೇ ಏಪ್ರಿಲ್ ತಾ. 11ರ ಮೊದಲು ಮಲಬಾರು ಪ್ರದೇಶದಲ್ಲಿ ಐದು ವರ್ಷಗಳಿಂದ ಹಾಗೂ ಉಳಿದ ಪ್ರದೇಶಗಳಲ್ಲಿ ಹತ್ತು ವರ್ಷಗಳಿಂದ ಒಂದು ಹೊಲದಲ್ಲಿ ಉಳುಮೆ ಮಾಡುತ್ತಿರುವ ರೈತರು ಸ್ಥಿರ ಒಕ್ಕಲುಗಳು. ಅಂಥವರಿಂದ ಯಾವುದೇ ಕಾರಣದಿಂದಲೂ ಹೊಲವನ್ನು ತಪ್ಪಿಸಲು ಸಾಧ್ಯವಿಲ್ಲ.

ದೇವಸ್ಥಾನ, ಇಗರ್ಜಿ, ಮಸೀದಿ ಮುಂತಾದ ಧಾರ್ಮಿಕ ಸಂಸ್ಥೆಗಳ ಹೊಲಗಳಲ್ಲಿ ಉಳುಮೆ ಮಾಡುವವರು ಸ್ಥಿರ ಒಕ್ಕಲುಗಳು; ಅವರನ್ನು ಯಾವ ಸಂದರ್ಭದಲ್ಲೂ ಹೊಲದಿಂದ ಹೊರ ತಳ್ಳುವಂತಿಲ್ಲ.

ಹಿಡುವಳಿಯ ಪರಿಮಿತಿಗಿಂತ ಹೆಚ್ಚು ಜಮೀನಿರುವ ಭೂಮಾಲಿಕರ ಹೊಲಗಳಲ್ಲಿ ಸಾಗುವಳಿ ಮಾಡುತ್ತಿರುವವರೂ ಸ್ಥಿರ ಒಕ್ಕಲುಗಳು. ಅವರಿಂದಲೂ ಹೊಲ ಬಿಡಿಸಿಕೊಳ್ಳಲು ಅವಕಾಶವಿಲ್ಲ.

ಹಂಗಾಮಿ ಒಕ್ಕಲುಗಳಿಂದಲಾದರೂ ಹೊಲ ಬಿಡಿಸುವುದನ್ನು ಬಹಳ ಮಟ್ಟಿಗೆ ತಡೆಗಟ್ಟಲಾಗಿದೆ. ಭೂಮಾಲಿಕನು ಮುಕ್ತೇಸರನಾಗಿರುವ ಧಾರ್ಮಿಕ ಸಂಸ್ಥೆಯ ಕಟ್ಟಡವನ್ನು ವಿಸ್ತರಿಸುವುದಕ್ಕೆ, ಭೂಮಾಲಿಕನ ಸ್ವಂತಕ್ಕೆ ಅಥವ ಅವನ ಕುಟುಂಬದ ಒಬ್ಬ ಸದಸ್ಯನಿಗೆ ಮನೆ ಕಟ್ಟುವ ನಿಜವಾದ ಅಗತ್ಯಕ್ಕೆ, ಹಂಗಾಮಿ ಒಕ್ಕಲುಗಳಿಂದ ಅವರಲ್ಲಿರುವ ಜಮೀನಿನ ಒಂದು ಭಾಗವನ್ನು ಬಿಡಿಸಿಕೊಳ್ಳಬಹುದು. ಆದರೆ ರೈತನಲ್ಲಿ ಒಂದು ಎಕ್ರೆ ಎರಡು ಬೆಳೆ ಬರುವ ಜಮೀನು ಅಥವ ಅದಕ್ಕೆ ಸಮನಾದ ಇತರ ತರದ ಜಮೀನು ಉಳಿಯಬೇಕು. ಒಂದು ಎಕ್ರೆಗಿಂತ ಕಮ್ಮಿ ಜಮೀನು ಸ್ವಾಧೀನದಲ್ಲಿರುವ ರೈತನಿಂದ 20 ಸೆಂಟ್ಸ್‌ಗಿಂತ ಹೆಚ್ಚನ್ನು ಬಿಡಿಸಿಕೊಳ್ಳಲು ಸಾಧ್ಯವಿಲ್ಲ. ಅಂಥ ಸಂದರ್ಭದಲ್ಲೂ ರೈತನಲ್ಲಿ 20 ಸೆಂಟ್ಸ್ ಸ್ಥಳ ಉಳಿದಿರಲೇಬೇಕು. ಸ್ವಂತ ಸಾಗುವಳಿಗೆಂದು ಜಮೀನನ್ನು ಬಿಡಿಸಿಕೊಳ್ಳುವುದಕ್ಕೂ ಇದೇ ರೀತಿಯ ಕಟ್ಟುನಿಟ್ಟಿನ ನಿಬಂಧನೆಗಳಿವೆ.

ನ್ಯಾಯ ಗೇಣಿಯ ನಿರ್ಣಯ

ಭತ್ತ ಬೆಳೆಯುವ ತರಿ ಜಮೀನಿಗೆ ಪರಮಾವಧಿ ಗೇಣಿ, ಗುತ್ತಿಗೆ ಅಥವ ಲಾವಣಿ ಒಟ್ಟು ಉತ್ಪತ್ತಿಯ (ಅಂದರೆ ಉತ್ಪತ್ತಿಯಲ್ಲಿ ಕೊಯ್ಲಿನ ಖರ್ಚು ಕಳೆದು ಉಳಿಯುವುದರ) ಕಾಲುಭಾಗ. ಕನಿಷ್ಟ ಗೇಣಿ ಆರನೆ ಒಂದು ಭಾಗ ಒಣ ಭೂಮಿಯನ್ನು ರೈತನು ಸ್ವಂತ ಶ್ರಮ ಮತ್ತು ಖರ್ಚಿನಿಂದ ತರಿಯಾಗಿ ಮಾಡಿದ್ದಾದರೆ ಗೇಣಿಯು ಆರನೆ ಒಂದು ಭಾಗದಿಂದ ಹನ್ನೆರಡನೆ ಒಂದು ಭಾಗದ ಅಂತರದಲ್ಲಿ ನಿರ್ಣಯಿಸಲ್ಪಡುವುದು. ಈ ಪರಮಾವಧಿ ಮತ್ತು ಕನಿಷ್ಟ ಮಟ್ಟಗಳಿಗೆ ಒಳಪಟ್ಟು ಗೇಣಿಯನ್ನು ನಿರ್ಣಯಿಸುವ ಅಧಿಕಾರ ಸರಕಾರಕ್ಕಿದೆ.

ರೈತನಿಗೆ ಪರಿಹಾರ

ರೈತನಿಂದ ಹೊಲ ಬಿಡಿಸಿಕೊಳ್ಳುವ ಸಂದರ್ಭದಲ್ಲಿ, ಅವನ ಕಷ್ಟ ಕೃತಕ್ಕೆ ತಕ್ಕ ಪ್ರತಿಫಲವನ್ನು ಭೂಮಾಲಕನು ಕೊಡಬೇಕು. ಅಂಥ ಪ್ರತಿಫಲ ಕೊಡತಕ್ಕದ್ದಿಲ್ಲದಾಗ ಕನಿಷ್ಟ ಪಕ್ಷ ಒಂದು ವರ್ಷದ ಗೇಣಿಯಷ್ಟು ಪರಿಹಾರವನ್ನು ಭೂಮಾಲಕನು ರೈತನಿಗೆ ಕೊಡಬೇಕೆಂಬ ನಿಯಮವಿದೆ.

ಗೇಣಿ ಬಾಕಿಗೆ ರಿಯಾಯತಿ

ರೈತನು ಗೇಣಿ ಕೊಟ್ಟಾಗ ಭೂಮಾಲಕನು ತಪ್ಪದೆ ರಶೀದಿ ಕೊಡುವಂತೆ ನಿರ್ಬಂಧಿಸುವ ನಿಬಂಧನೆಗಳು ಮಸೂದೆಯಲ್ಲಿವೆ. ಹಿಂದಿನ ಬಾಕಿಯ ಮಟ್ಟಿಗೆ ರೈತರಿಗೆ ರಿಯಾಯತಿ ದೊರಕುವುದು. ಐದು ಎಕ್ರೆಗಿಂತ ಕಡಿಮೆ ಹೊಲವಿರುವ ಒಕ್ಕಲು ಒಂದು ವರ್ಷದ ಗೇಣಿ ಅಥವ ನಿಜವಾಗಿ ಬಾಕಿಯಿರುವುದು—ಯಾವುದು ಕಡಿಮೆಯೋ ಅದನ್ನು ಕೊಟ್ಟರೆ 1957 ಏಪ್ರಿಲ್ 11ರ ವರೆಗಿನ ಎಲ್ಲ ಬಾಕಿಯನ್ನೂ ತೀರಿಸಿದಂತೆ ಪರಿಗಣಿಸಲಾಗುವುದು. 5 ಎಕ್ರೆಯಿಂದ 15 ಎಕ್ರೆಯ ವರೆಗೆ ಹೊಲವಿರುವವರು ಮೂರು ವರ್ಷದ ಗೇಣಿ ಅಥವ ನಿಜವಾಗಿ ಬಾಕಿಯಿರುವುದರಲ್ಲಿ ಯಾವುದು ಕಡಿಮೆಯೋ ಅದನ್ನು ಕೊಟ್ಟರೆ ಎಲ್ಲ ಬಾಕಿ ತೀರ್ಮಾನವಾದಂತೆ ಎಣಿಸಲಾಗುವುದು. 15 ಎಕ್ರೆಗಿಂತ ಹೆಚ್ಚು ಹೊಲವಿರುವ ಒಕ್ಕಲುಗಳು 6 ವರ್ಷದ ಗೇಣಿ ಅಥವ ನಿಜವಾಗಿ ಬಾಕಿಯಿರುವುದರಲ್ಲಿ ಯಾವುದು ಕಡಿಮೆಯೋ ಅದನ್ನು ಕೊಟ್ಟರೆ ಬಾಕಿಯೆಲ್ಲ ಸಂದಾಯವಾಯಿತೆಂದು ಗಣಿಸಲ್ಪಡುವುದು.

ಉಳುವವನು ಹೊಲದ ಒಡೆಯ

ಸರಕಾರವು "ರೈತರ ದಿನ" ಎಂದು ಸಾರುವ ಒಂದು ನಿಶ್ಚಿತ ದಿನದಿಂದ ರೈತನು ಸ್ಥಿರ ಒಕ್ಕಲಾಗಿ ಹಾಲಿ ಉಳುವ ಹೊಲದ ಒಡೆಯನಾಗುವನು. ಸಾಲದ ತಗಾದೆಯಿಂದ ವಿರಹಿತವಾಗಿ ಆ ಹೊಲವನ್ನು ಅವನು ಭೂಮಾಲಿಕನಿಂದ ಆ ದಿನ ಕೊಂಡುಕೊಂಡಿರುವುದಾಗಿ ಪರಿಗಣಿಸಲ್ಪಡುವುದು. ಆ ಹೊಲಕ್ಕೆ ನಿಯಮದಂತೆ ಕೊಡತಕ್ಕ ಪರಮಾವಧಿ ಗೇಣಿಯ 16 ರಷ್ಟು ಬೆಲೆಯನ್ನು ರೈತನು ತೆರತಕ್ಕದ್ದು. ಅದಲ್ಲದೆ ಭೂಮಾಲಕನಾಗಲಿ ಹೊಲದಲ್ಲಿ ಹಕ್ಕಿರುವ ಬೇರೆ ಯಾರಾಗಲಿ ಅದರಲ್ಲಿ ನಿರ್ಮಿಸಿರುವ ಕಟ್ಟಡ, ಬಂಡು, ಭಾವಿ ಮುಂತಾದವುಗಳ ಮೌಲ್ಯವನ್ನೂ ರೈತನು ತೆರತಕ್ಕದ್ದು. ಈ ಬೆಲೆಯನ್ನು 16 ಸಮಾನ ವಾರ್ಷಿಕ ಕಂತುಗಳಲ್ಲಿ ತೆರಬಹುದು. ಒಂದೇ ಗಂಟಿನಲ್ಲಿ ತೆರುವುದಿದ್ದರೆ ನ್ಯಾಯ ಗೇಣಿಯ 12ರಷ್ಟು ಮಾತ್ರ ತೆರಬೇಕಾಗುವುದು. ಈ ಆಧಾರದಲ್ಲಿ ಹೊಲದ ಬೆಲೆಯನ್ನು ನಿರ್ಣಯಿಸುವ ಅಧಿಕಾರ "ಲ್ಯಾಂಡ್ ಟ್ರಿಬ್ಯೂನಲ್"ನದ್ದು. ಅದರ ತೀರ್ಮಾನ ಸರಿಯಿಲ್ಲವೆಂದು ಕಂಡರೆ "ಲ್ಯಾಂಡ್ ಬೋರ್ಡ್"ಗೆ ಅಪೀಲು ಮಾಡಬಹುದು. "ಲ್ಯಾಂಡ್ ಬೋರ್ಡಿ"ನ ತೀರ್ಪು ಕೊನೆಯದಾಗಿರುವುದು.

ಭೂಮಾಲಕರಿಗೆ ಪರಿಹಾರ

ಭೂಮಾಲಕರ ಹಕ್ಕು ಕಳೆದು ಹೋಗುವ ಜಮೀನಿನ ಬಗ್ಗೆ ಅವರಿಗೆ ಪರಿಹಾರ ಕೊಡಲಾಗುವುದು. ಮೊದಲನೆಯ 5 ಎಕ್ರೆಗೆ ನ್ಯಾಯ ಗೇಣಿಯ 16ರಷ್ಟು, ಅನಂತರದ 5 ಎಕ್ರೆಗಳಿಗೆ ನ್ಯಾಯ ಗೇಣಿಯ 12ರಷ್ಟು, ಅನಂತರದ 5 ಎಕ್ರೆಗಳಿಗೆ ನ್ಯಾಯಗೇಣಿಯ 10ರಷ್ಟು, ಅನಂತರದ 30 ಎಕ್ರೆಗಳಿಗೆ ನ್ಯಾಯಗೇಣಿಯ 8ರಷ್ಟು, ಅನಂತರದ 50 ಎಕ್ರೆಗಳಿಗೆ ನ್ಯಾಯಗೇಣಿಯ 6 ರಷ್ಟು, ಮತ್ತು 100 ಎಕ್ರೆಗಳಿಗಿಂತ ಹೆಚ್ಚಿನದಕ್ಕೆ ನ್ಯಾಯಗೇಣಿಯ 5ರಷ್ಟು ಪರಿಹಾರ ಎಂದು ಮಸೂದೆಯಲ್ಲಿ ಹೇಳಲಾಗಿದೆ.

ಪರಿಹಾರ ಕೊಡುವಾಗ ಜಮೀನಿನ ಮೇಲಿನ ಸಾಲವನ್ನು ಕಳೆದು ಉಳಿದುದನ್ನು ಭೂಮಾಲಿಕನಿಗೆ ಕೊಡಲಾಗುವುದು. ರೈತನಿಗೂ ಭೂಮಾಲಿಕನಿಗೂ ನಡುವೆ ಮಧ್ಯವರ್ತಿಗಳಿದ್ದರೆ, ಪರಿಹಾರದಲ್ಲಿ ಅಂಥವರಿಗೆ ಸಲ್ಲತಕ್ಕ ಭಾಗಗಳನ್ನು ಅವರಿಗೆ ಕೊಡಲಾಗುವುದು. ಮಧ್ಯವರ್ತಿಗಳ ಎಲ್ಲ ಹಕ್ಕುಗಳನ್ನೂ ರೈತರಿಗೆ ವಿಕ್ರಯಿಸತಕ್ಕದ್ದೆಂದು ನಿಯಮವಿದೆ.

ಸ್ಥಿರ ಒಕ್ಕಲುಗಳು ಮಾಲಕತನ ಪಡೆಯುವ ನಿಯಮವು ಧಾರ್ಮಿಕ ಸಂಸ್ಥೆಗಳ ಜಮೀನುಗಳಿಗೆ ಅನ್ವಯಿಸುವುದಿಲ್ಲ. ಆದರೆ ಅಂಥ ಜಮೀನುಗಳ ಉತ್ಪತ್ತಿಯು ಸಂಪೂರ್ಣವಾಗಿ ಧಾರ್ಮಿಕ ಸಂಸ್ಥೆಗಳ ಸಲುವಾಗಿಯೇ ಉಪಯೋಗಿಸಲ್ಪಡತಕ್ಕದ್ದೆಂಬ ನಿಬಂಧನೆಯಿದೆ.

ಹಿಡುವಳಿಯ ಪರಿಮಿತಿ

ಹಿಡುವಳಿಯ ಪರಿಮಿತಿಯು 15 ಎಕ್ರೆ ಎರಡು ಬೆಳೆ ಬರುವ ತರಿ ಜಮೀನು ಅಥವ ಅದಕ್ಕೆ ಸಮನಾಗುವಷ್ಟು ಇತರ ಜಮೀನು ಎಂದು ನಿರ್ಣಯಿಸಲ್ಪಟ್ಟಿದೆ. 22½ ಎಕ್ರೆ ಒಂದು ಬೆಳೆಯ ಜಮೀನು ಅಥವ 30 ಎಕ್ರೆ ಕುಷ್ಕಿ ಜಮೀನು 15 ಎಕ್ರೆ ಎರಡು ಬೆಳೆಯ ತರಿ ಜಮೀನಿಗೆ ಸಮ ಎಂದು ಪರಿಗಣಿಸಲ್ಪಡುವುದು.

ಮಾಲಕನಾಗಿಯೋ ಗೇಣಿದಾರನಾಗಿಯೋ ಎರಡು ರೂಪದಲ್ಲಿ ಒಟ್ಟಾಗಿಯೋ ಪರಿಮಿತಿಗಿಂತ ಹೆಚ್ಚು ಜಮೀನನ್ನು ಸ್ವಾಧೀನ ಇಟ್ಟುಕೊಳ್ಳುವುದು ಕಾನೂನಿಗೆ ವಿರೋಧವಾಗುತ್ತದೆ. ಪರಿಮಿತಿಗಿಂತ ಹೆಚ್ಚಿನ ಜಮೀನನ್ನು ಲ್ಯಾಂಡ್ ಬೋರ್ಡಿಗೆ ಬಿಟ್ಟುಕೊಡತಕ್ಕದ್ದು

ಹೀಗೆ ಬಿಟ್ಟು ಕೊ
ಕೊಂಡುಕೊಳ್ಳುವ ಜ
ಕಾಗಿರುವ ದರದಲ್ಲೇ
ಗುವುದು. ಪರಿಹಾರ
ನಲ್ಲಿ ಕೊಡಬಹುದು
ಮಾಡಲು ಸಾಧ್ಯವಿಲ್ಲ
ಪದಲ್ಲಿ ಕೊಡಬಹುದು

ಐದು ಸದಸ್ಯರಿಗಿ
ಯಿರುವ ಕುಟುಂಬ
ಹೆಚ್ಚಿನ ಪ್ರತಿಯೊಂ
ಒಂದೊಂದು ಎಕ್ರೆ
ಟ್ಟುಕೊಳ್ಳುವ ಅವಕಾ
ರೆ ಯಾವ ಸಂದರ್ಭ
ರಡು ಬೆಳೆಯ ತರಿ ಜ
ಇಟ್ಟುಕೊಳ್ಳಲು ಅವಕಾ

ಭೂಮಿಯ

ಲ್ಯಾಂಡ್ ಬೋರ್ಡಿ
ಜಮೀನನ್ನು ಪರಿಮಿ
ಮಿಯಿರುವವರಿಗೆ,
ಕೆಲಸಗಾರರಿಗೆ, ವ್ಯಾ
ರಿ ಸಂಘಗಳಿಗೆ ವಿತರ
ದು. ವಿತರಣೆ ಆಗಿರು
ನುಗಳ ಆಡಳಿತೆಯು
ಗೆ ಸೇರಿರುವುದು.

ಕಾನೂನಿನಿಂದ ತಪ್ಪಿ ತ

ಪರಿಮಿತಿಗಿಂತ ಹೆ
ವವರು 1957 ದಶಂ
ರಾಟ ಅಥವ ದಾನ
ನ ಪರಾಭಾರೆಗಳನ್ನು
ಣಿಸಲಾಗುವುದಿಲ್ಲ.
ಪ್ರಿಲ್ ತಾ, 11 ನ
ಯದೆನೆ ಪರಾಭಾರೆ
ರದ್ದುಗೊಳಿಸಲಾಗುವು

ಮಧ್ಯಸ್ಥಿಕೆ

ರೈತನಿಂದ ಭೂಮ
ನ್ನು ವಾಪಾಸು ಪಡೆಯ
ಲ್ಲಿ (ತಿರುವಾಂಕೂರು
ಲ್ಲಿ) ವಿವಾದಗಳನ್ನು
ತೀರ್ಮಾನ ಮಾಡು
ಗಳನ್ನು ನೇಮಿಸಲಾಗ
ಸಂಬಂಧಿಸಿದ ಎರಡೂ
ಪರಿಸ್ಥಿತಿಗಳನ್ನೂ,
ಗೆ ಯಾರು ಹಣ ಖ
ಎನ್ನುವುದನ್ನೂ,
ಉಪಜೀವನ ನಡೆಯ
ದೆ ಎನ್ನುವುದನ್ನೂ ಇ
ವಿಚಾರಗಳನ್ನೂ ಟ್ರಿ
ತೆಗೆದುಕೊಂಡು ವಿವಾ
ನಿಸುವುದು.

ಕಾಂಗ್ರೆಸ್ ಮಾಡದಿ

ಕೇರಳದ ಭೂಸಂ
ಪರ ಮತ್ತು ವಿರೋಧ
ರಳದಲ್ಲಷ್ಟೇ ಅಲ್ಲ, ದೇ

ಷನ

ಜಮೀನಿಗೂ
ಗೆ ಕೊಡಬೇ
ವಾರ ಕೊಡಲಾ
ಜಿಂದೇ ಗಂಟೆ
ದ ಸರಾಭಾರಿ
ಂಡುಗಳ ರೂ

ಚ್ಚು ಮಂದಿ
ಐದಕ್ಕಿಂತ
ಸದಸ್ಯನಿಗೂ
ಮೀನು ಇ
ವುದು. ಆದ
25 ಎಕ್ರೆ ಎ
ಗಿಂತ ಹೆಚ್ಚು

ರಣೆ
ಶಕ್ಕೆ ಬರುವ
ಕಮ್ಮಿ ಭೂ
ಮಿಲ್ಲದ ಕೃಷಿ
ಮಿಕ ಸಹಕಾ
ಮಾಡಲಾಗುವು
ಕ ಈ ಜಮೀ
ಬೋರ್ಡಿ

ಳ್ಳುವವರಿಗೆ

ಮೀನು ಇರು
ರಿಂದ ಮಾ
ನ ಜಮೀನಿ
ವೆಂದು ಪರಿಗ
1957 ಏ
ರಾಲ್ಯ ಪಡೆ
ರುವುದನ್ನೂ

ಸ್ಥೆ
ಜಮೀನ
ಸಂದರ್ಭಗಳ
ಪ್ರದೇಶದ
ಸ್ಥಿತಿಯಿಂದ
ಟ್ರಿಬ್ಯೂನಲು
ವಿವಾದಕ್ಕೆ
ಆರ್ಥಿಕ
ಅಭಿವೃದ್ಧಿ
ಡಿರುತ್ತಾರೆ
ಮುದಿಂದಲೇ
ತಿ ಯಾಗಿ
ಬಂಧಪಟ್ಟ
ಗಣನೆಗೆ
ತೀರ್ಮಾ

ಗಳು

ಮಸೂದೆಯ
ಗಳು ಕೇ
ಕಡೆಗಳ

ಲ್ಲೂ ಪ್ರಕಟವಾಗಿದೆ. ದಶಂಬರ ತಾ. 30 ರ "ಹಿಂದುಸ್ತಾನ್ ಟೈಮ್ಸ್" ಪತ್ರಿಕೆಯ ವಿಶೇಷ ಪ್ರತಿನಿಧಿಯ ಮಾತುಗಳಲ್ಲಿ ಹೇಳುವುದಾದರೆ, "…. ಯೋಜನಾ ಮಂಡಲವು ಭೂಸುಧಾರಣೆಯ ಬಗ್ಗೆ ರಾಜ್ಯಗಳು ಸ್ಥೂಲವಾಗಿ ಅನುಸರಿಸತಕ್ಕ ಮಾರ್ಗವನ್ನು ತೋರಿಸಿದೆಯಾದರೂ ರಾಜ್ಯಗಳ ಕಾಂಗ್ರೆಸ್ ಸರಕಾರಗಳು ಯೋಜನಾ ಮಂಡಲದ ಎಲ್ಲ ಶಿಫಾರಸುಗಳನ್ನು ಕಾರ್ಯಗತಗೊಳಿಸಲು ಶಕ್ತವಾಗಿಲ್ಲ …. ಯೋಜನಾ ಮಂಡಲದ ಶಿಫಾರಸುಗಳನ್ನು ಕಾಂಗ್ರೆಸ್ ಸರಕಾರಗಳಿಗಿಂತಲೂ ಸಂಪೂರ್ಣವಾಗಿ ಕಮ್ಯೂನಿಸ್ಟ್ ಸರಕಾರವು ಕಾರ್ಯಗತಗೊಳಿಸಲು ಮುಂದಾಗಿದೆ. (ಕೇರಳ ಭೂಸಂಬಂಧ ಮಸೂದೆಯ) ಅನೇಕ ನಿಯಮಗಳು ಬಿಡಿ ಬಿಡಿಯಾಗಿ ಇತರ ಕೆಲವು ರಾಜ್ಯಗಳಲ್ಲಿಯೂ ಕಾನೂನಾಗಿ ಬಂದಿವೆ; ಆದರೆ ಒಟ್ಟು ಮೊತ್ತದ ಪರಿಣಾಮದಲ್ಲಿ ಈ ಮಸೂದೆಯು ಇತರ ರಾಜ್ಯಗಳ ಮಸೂದೆಗಳಿಗಿಂತೆಲ್ಲ ಸಮಗ್ರವಾದ ಭೂಸುಧಾರಣೆಯನ್ನು ಜಾರಿಗೆ ತರುತ್ತದೆ."

ಮೊದಲನೆಯ ಮೈಲುಗಲ್ಲು

ಈ ಮಸೂದೆಯು ಅತ್ಯಂತ ತೀವ್ರವಾಗಿದೆ ಎನ್ನುವವರಿಗೆ ಉತ್ತರ ಕೊಡುತ್ತ ಕೇರಳದ ರೆವೆನ್ಯೂ ಸಚಿವೆ ಶ್ರೀಮತಿ ಕೆ. ಆರ್. ಗೌರಿ ಹೇಳಿರುವ ಮಾತುಗಳನ್ನು ಇಲ್ಲಿ ಉದ್ಧರಿಸಬಹುದು:



ಈ ಮಸೂದೆಯು ರಾಷ್ಟ್ರೀಯ ಚಳುವಳಿಯು ಒಕ್ಕೊರಲಿನಿಂದ ಘೋಷಿಸಿರುವ "ಉಳುವವನೇ ಹೊಲದ ಒಡೆಯ" ಎಂಬ ಘೋಷಣೆಯನ್ನು ಕಾರ್ಯಕಾರಿಗೊಳಿಸಲು ಯತ್ನಿಸುತ್ತದೆ. ಇದು ದ್ವಿತೀಯ ಪಂಚವಾರ್ಷಿಕ ಯೋಜನೆಯಲ್ಲಿ ಯೋಜನಾ ಮಂಡಲವು ಶಿಫಾರಸು ಮಾಡಿರುವ ಕ್ರಮಗಳನ್ನು ಅನುಸರಿಸಿ ತಯಾರಿಸಲ್ಪಟ್ಟಿದೆ. ಅಲ್ಲದೆ ಕಮ್ಯೂನಿಸ್ಟ್ ಪಾರ್ಟಿಯ ಚುನಾವಣಾ ಘೋಷಣೆಯಲ್ಲಿ ವಾಗ್ದಾನ ಮಾಡಿರುವುದನ್ನು ನೆರವೇರಿಸುತ್ತದೆ.

"ಭೂಸುಧಾರಣೆಯ ಕೊನೆಯ ಮೈಲುಗಲ್ಲಾದ ಈ ಮಸೂದೆಯು ಸಾಕಷ್ಟು ಪ್ರಗತಿಶೀಲವಾಗಿಲ್ಲ" ಎಂದು ಕೇರಳ ವಿಧಾನ ಸಭೆಯ ಕಾಂಗ್ರೆಸ್ ಸದಸ್ಯರೊಬ್ಬರು ಟೀಕಿಸಿದ್ದಾರೆ. ಅದಕ್ಕೆ ಉತ್ತರ ಕೊಡುತ್ತ ಮುಖ್ಯ ಮಂತ್ರಿ ಶ್ರೀ ನಂಬೂದ್ರಿಪಾದ್ ಹೇಳಿರುವ ಮಾತುಗಳನ್ನೂ ಇಲ್ಲಿ ಎತ್ತಿ ಹೇಳಿದರೆ ಅಪ್ರಸ್ತುತವಾಗಲಾರದು: ಕಳೆದ ಹತ್ತು ವರ್ಷಗಳಲ್ಲಿ ಕಾಂಗ್ರೆಸ್ಸು ಏನು ಮಾಡಿದೆ? ಈಗಲಾದರೂ ಕಾಂಗ್ರೆಸು ಆಡಳಿತೆ ನಡೆಸುವಲ್ಲಿ ಏನು ಮಾಡುತ್ತಿದೆ? ಈ ಮಸೂದೆಯು ಭೂಸುಧಾರಣೆಯ ಕೊನೆಯ ಮೈಲುಗಲ್ಲು ಅಥವ ಕೊನೆಯ ಹೆಜ್ಜೆ ಎಂದು ಯಾರೂ ಎಣಿಸಬಾರದು. ಇದು ಮೊದಲನೆಯ ಮೈಲುಗಲ್ಲು; ಬಹಳ ಮುಖ್ಯವಾದ ಮೊದಲನೆಯ ಹೆಜ್ಜೆ!

ಬಿ.ವಿ. ಕಕ್ಕಿಲ್ಲಾಯ

ಗುಲ್ಬರ್ಗಾ ಜಿಲ್ಲೆಯಲ್ಲಿ ಕಂದಾಯ ಮತ್ತು ತಗಾಯಿ ಮಾಫಿಯಾಗಲಿ

ಗುಲ್ಬರ್ಗಾ ಜಿಲ್ಲೆಯಲ್ಲಿ ಕಳೆದ ಮೂರು ವರ್ಷಗಳಿಂದಲೂ ಬೆಳೆ ಕೆಟ್ಟು ಹೋಗಿದ್ದರಿಂದ ಸರಕಾರ ಕಂದಾಯ ವಸೂಲಿಯನ್ನು ಸಸ್ಪೆಂಡ್ ಮಾಡಿತ್ತು. ಆದರೀಗ ಅದನ್ನು ವಸೂಲು ಮಾಡಬೇಕೆಂದು ಜಿಲ್ಲಾಧಿಕಾರಿಗಳು ನಿರ್ಧರಿಸಿದ್ದಾರೆ.

ಈ ಸಲದ ಕರೀಫ್ ಬೆಳೆಯು ಕೆಲವು ಭಾಗಗಳಲ್ಲಿ ಚೆನ್ನಾಗಿದ್ದರೂ ಹಲವು ಪ್ರದೇಶಗಳಲ್ಲಿ ಕೆಟ್ಟಿರುತ್ತದೆ. ಇದರಿಂದಾಗಿ ಅವರಿಗೆ ಈ ಸಲದ ಕಂದಾಯ ಕೊಡುವುದೂ ದುಸ್ಸಾಧ್ಯವಾಗಿದೆ. ರಬಿ ಬೆಳೆಯೂ ಕೆಲವು ಕಡೆ ಹಾಳಾಗಿದೆ.

ಮನ್ನಾ ಆಗಿದ್ದ ಕಂದಾಯವನ್ನು ಈಗ ವಸೂಲು ಮಾಡುವುದು ತೀರಾ ಅನ್ಯಾಯವಾಗಿದೆ. ಈ ಸಾಲಿನ ಕಂದಾಯ ಕಟ್ಟುವುದೇ ಕಷ್ಟವಾಗಿರುವಾಗ ಹಿಂದಿನ ಕಂದಾಯ ಕೊಡಬೇಕೆಂದು ಹೇಳುವುದು ಖಂಡನೀಯವಾಗಿದೆ. ಕಡಿಮೆ ಪ್ರಮಾಣದಲ್ಲಿ ಬೆಳೆ ಬಂದಿರುವಾಗ ಅದರ ಹೆಚ್ಚಿನ ಭಾಗವನ್ನು ಸರಕಾರಕ್ಕೆ ಕೊಟ್ಟರೆ ರೈತರು ಬದುಕುವುದಾದರೂ ಹೇಗೆ?

ಚಿತ್ತಾಪುರದಲ್ಲಿ ನಡೆದ ಪಾರ್ಟಿ ಸಮ್ಮೇಳನದ ನಂತರ ನಾನು ಷಹಬಾದ್, ಗುಲ್ಬರ್ಗಾ, ಕೊಲ್ಲೂರು, ಕೀರಲಗಿ ಮುಂತಾದ ಸ್ಥಳಗಳಿಗೆ ಹೋಗಿ ರೈತರ ಚಿಂತಾಜನಕ ಪರಿಸ್ಥಿತಿಯನ್ನು ಪ್ರತ್ಯಕ್ಷ ನೋಡಿರುತ್ತೇನೆ. ಕಂದಾಯವನ್ನಾಗಲಿ, ಹಿಂದಿನ ತಗಾಯಿಯನ್ನಾಗಲಿ ಕೊಡಲು ಅವರಿಗೆ ಸಾಧ್ಯವಿಲ್ಲವೆಂಬುದನ್ನು ಮನಗಂಡಿದ್ದೇನೆ. ಒತ್ತಾಯದಿಂದ ಅದನ್ನು ವಸೂಲು ಮಾಡುವುದರಿಂದ ರೈತರಲ್ಲಿ ಅಶಾಂತಿ ಬೆಳೆಯಲು ಅವಕಾಶ ಕೊಟ್ಟಂತಾದೀತು. ಬಾಕಿ ಮಾಫಿಯಾಗಬೇಕೆಂದು ಜಿಲ್ಲಾದ್ಯಂತ ರೈತರು ಒತ್ತಾಯಪಡಿಸುತ್ತಿದ್ದಾರೆ.

ಈ ಸಲದ ಕರೀಫ್ ಬೆಳೆಯ ಕಂದಾಯದ ಜತೆಗೆ ಹೋದ ಸಲದ ಕರೀಫ್ ಕಂದಾಯವನ್ನೂ, ರಬಿ ಜತೆಗೆ ಕಳೆದ ವರ್ಷದ ರಬಿ ಕಂದಾಯವನ್ನು ಕೊಡಬೇಕೆಂದು ಗ್ರಾಮಾಧಿಕಾರಿಗಳು ಡಂಗುರ ಹೊರಡಿಸಿದ್ದಾರೆ ಇದರಿಂದರೈತರಲ್ಲಿ ತುಂಬಾ ಕಳವಳ ಉಂಟಾಗಿದೆ. ತಗಾಯಿ ಸಾಲವನ್ನು ವಸೂಲು ಮಾಡಲು ಪ್ರಯತ್ನ ನಡೆದಿದೆ. ದೇಶದಲ್ಲಿ ಆಹಾರದ ಕೊರತೆಯಿರುವಾಗ ಹೆಚ್ಚು ಆಹಾರ ಬೆಳಸಲು ರೈತರಿಗೆ ಪ್ರೋತ್ಸಾಹ ಕೊಡುವ ಬದಲು ಸರಕಾರದ ಈ ಧೋರಣೆಯಿಂದ ರೈತರಲ್ಲಿ ನಿರುತ್ಸಾಹ ತಲೆ ಎತ್ತುವುದು ಖಂಡಿತ.

ಈಗಾಗಲೇ ಜಿಲ್ಲಾ ಕಮ್ಯೂನಿಸ್ಟ್ ಪಾರ್ಟಿ ಮತ್ತು ರೈತ ಸಂಘಗಳು ಇದರ ಬಗ್ಗೆ ಸರಕಾರಕ್ಕೆ ಮನವಿಗಳನ್ನು ಕೊಟ್ಟಿವೆ. ಆದರೆ ಸರಕಾರವು ಹೊರಡಿಸಿದ ಆಜ್ಞೆಯಿಂದ ಘಾಯದ ಮೇಲೆ ಬರೆ ಎಳೆದಂತಾಗಿದೆ. ಇನ್ನಾದರೂ ಸರಕಾರವು ರೈತರ ಚಿಂತಾಜನಕ ಪರಿಸ್ಥಿತಿಯನ್ನು ಗಮನದಲ್ಲಿಟ್ಟುಕೊಂಡು ಹಿಂದಿನ ಬಾಕಿ ಕಂದಾಯವನ್ನು ಮಾಫಿ ಮಾಡಬೇಕೆಂದೂ, ಕರೀಫ್ ಬೆಳೆ ಕೆಟ್ಟಿರುವ ಪ್ರದೇಶಗಳಲ್ಲಿ ಈ ಸಲದ ಕಂದಾಯವನ್ನು ಮನ್ನಾ ಮಾಡಬೇಕೆಂದೂ ನಾನೂ ಒತ್ತಾಯಪಡಿಸುತ್ತೇನೆ. ಇದರ ಬಗ್ಗೆ ಸರಕಾರ ಕೂಡಲೇ ಕ್ರಮತೆಗೆದುಕೊಳ್ಳುವುದೆಂದು ನಂಬಿದ್ದೇನೆ.

ಎನ್. ಎಲ್ ಉಪಾಧ್ಯಾಯ

ಏಷ್ಯಾ-ಅಫ್ರಿಕಾ ಜನತೆಯ ಪ್ರತಿನಿಧಿಗಳ ಸಮ್ಮೇಳನ

ಏಷ್ಯಾ ಮತ್ತು ಅಫ್ರಿಕಾ ಜನತೆಯ ಪ್ರತಿನಿಧಿಗಳ ಮಹಾಧಿವೇಶನವು ಕಳೆದ ವಾರದಿಂದ ಈಜಿಪ್ಟಿನ ರಾಜಧಾನಿ ಕೈರೋ ನಗರದಲ್ಲಿ ಸಮಾವೇಶ ಹೊಂದಿದೆ. ಏಷ್ಯಾ—ಅಫ್ರಿಕಾ ದೇಶಗಳ 50 ರಾಷ್ಟ್ರಗಳನ್ನು ಪ್ರತಿನಿಧಿಸಿ, ಪ್ರತಿನಿಧಿಗಳು ಸಮ್ಮೇಳನದಲ್ಲಿ ಭಾಗವಹಿಸಿದ್ದಾರೆ. ಕೈರೋದಲ್ಲಿ ನಡೆಯುತ್ತರುವ ಈ ಸಮ್ಮೇಳನವನ್ನು "ಜನತೆಯ ಬಾಂಡುಂಗು" ಎಂದು ಕರೆಯಲಾಗಿದೆ. ಕಳೆದ ಬಾರಿ ಏಷ್ಯಾ ಮತ್ತು ಅಫ್ರಿಕಾ ದೇಶಗಳ ಪ್ರಧಾನಿಗಳು ಇಂಡೊನೇಷಿಯದ ಬಾಂಡುಂಗ್‌ನಲ್ಲಿ ಸೇರಿ ಅಂತರರಾಷ್ಟ್ರೀಯ ವ್ಯವಹಾರದಲ್ಲೇ ಹೊಸ ಇತಿಹಾಸವನ್ನು ಸೃಜಿಸಿದ ಈ ಸಮ್ಮೇಳನಕ್ಕೆ ಪೂರ್ವಭಾವಿಯಾಗಿ, 1955ರ ಏಪ್ರಿಲ್ ತಿಂಗಳಲ್ಲಿ ನವದೆಲಿಯಲ್ಲಿ ಏಷ್ಯಾ-ಆಫ್ರಿಕ ಜನತೆಯ ಪ್ರತಿನಿಧಿಗಳ ಸಮ್ಮೇಳನದಲ್ಲಿ ಏಷ್ಯಾ ಮತ್ತು ಮಧ್ಯಪ್ರಾಚ್ಯ ರಾಷ್ಟ್ರಗಳ 15—16 ರಾಷ್ಟ್ರಗಳು ಸಮ್ಮೇಳನದಲ್ಲಿ ಭಾಗವಹಿಸಿತ್ತು; ಆದರೆ ಈ ಬಾರಿ ಕೈರೋದಲ್ಲಿ ನಡೆಯುತ್ತಿರುವ ಸಮ್ಮೇಳನದಲ್ಲಿ 50 ರಾಷ್ಟ್ರಗಳ ಜನತೆಯ ಪ್ರತಿನಿಧಿಗಳು ಆಗಮಿಸಿದ್ದರು.

ಬಾಂಡುಂಗ್ ಸಮ್ಮೇಳನದ ನಂತರ ಏಷ್ಯಾ—ಅಫ್ರಿಕಾ ದೇಶಗಳಲ್ಲಿ ಶಾಂತಿ ಮತ್ತು ಸೌಹಾರ್ದಕ್ಕಾಗಿ ಚಳವಳಿ ಅಗಾಧವಾಗಿ ಬೆಳೆದಿದೆ. ವಸಾಹತು ಶೃಂಖಲೆಯನ್ನು ತೊಡೆದು ಹಾಕಿರುವ ಏಷ್ಯಾ ಆಫ್ರಿಕದ ಜನತೆ ಸಾಮ್ರಾಜ್ಯಶಾಹಿಯ ಅವಶೇಷಗಳನ್ನು ಸಂಪೂರ್ಣವಾಗಿ ಮೂಲೋತ್ಪಾಟನ ಮಾಡುವ ಕಾರ್ಯದಲ್ಲಿ ತೊಡಗಿದ್ದಾರೆ ಸ್ವಾತಂತ್ರ್ಯವನ್ನು ಗಳಿಸಿರುವ ಏಷ್ಯಾ ಆಫ್ರಿಕಾ ರಾಷ್ಟ್ರಗಳ ಜನತೆ ಇಂದು ತಮ್ಮ ಆರ್ಥಿಕವನ್ನು ಪುನರ್ರೂಪಿಸಿಕೊಳ್ಳುವ, ಬೃಹತ್ ನಿರ್ಮಾಣ ಕಾರ್ಯದಲ್ಲಿ ತೊಡಗಿದ್ದಾರೆ. ಎಲ್ಲ ಅಡ್ಡಿ ಆತಂಕಗಳನ್ನು ಧೈರ್ಯದಿಂದ ಎದುರಿಸಿ ಮುನ್ನುಗ್ಗಲು ಕಂಕಣ ತೊಟ್ಟಿದ್ದಾರೆ.

ಅನೇಕ ಏಷ್ಯಾ-ಆಫ್ರಿಕ ದೇಶಗಳು ಇಂದು ವಿಶ್ವ ಸಂಸ್ಥೆಯಲ್ಲಿ ತಮ್ಮ ನ್ಯಾಯಬದ್ಧವಾದ ಸ್ಥಾನಗಳನ್ನು ಪಡೆದುಕೊಂಡಿವೆ. ಶಾಶ್ವತದಾದ ಶಾಂತಿಗಾಗಿ ತಮ್ಮ ವಿದೇಶಾಂಗ ನೀತಿಯನ್ನು ರೂಪಿಸಿಕೊಂಡು ಹೋರಾಡುತ್ತಿವೆ.

ಕಳೆದ ಸಮ್ಮೇಳನದಿಂದೀಚೆಗೆ ಅಂತರರಾಷ್ಟ್ರೀಯ ಕ್ಷೇತ್ರದಲ್ಲಿ ಮಹತ್ವಪೂರ್ಣ ಘಟನೆಗಳು ಜರುಗಿವೆ. ಶಾಂತಿ ಚಳವಳಿಯು ತೀವ್ರವಾಗಿ ಮುನ್ನಡೆದು, ಆಕ್ರಮಣ ಕಾರ್ಯವನ್ನು ತಡೆಗಟ್ಟಿದೆ. ಈಜಿಪ್ಟಿನ ಮೇಲೆ ಅಂಗ್ಲೋ-ಫ್ರೆಂಚ್ ಸಾಮ್ರಾಜ್ಯಶಾಹಿಗಳು ನಡೆಸಿದ ಆಕ್ರಮಣಕಾರಿ ಧಾಳಿಯನ್ನು ಏಷ್ಯಾ-ಆಫ್ರಿಕಾ ರಾಷ್ಟ್ರಗಳೆಲ್ಲವೂ ಒಕ್ಕೊರಲಿನಿಂದ ಆಕ್ರಮಣವನ್ನು ಖಂಡಿಸಿದುವು. ಅಫ್ರಿಕಾ ದೇಶದಲ್ಲಿನ ವರ್ಣಭೇದ ನೀತಿಯ ನೀತಿಯ ವಿರುದ್ಧವಾಗಿ, ಫ್ರೆಂಚ್ ಮತ್ತು ಬ್ರಿಟಿಷ್ ಸಾಮ್ರಾಜ್ಯವಾದಿಗಳು ಸ್ವಾತಂತ್ರ್ಯಕ್ಕಾಗಿ ಹೋರಾಡುತ್ತಿರುವ ಜನತೆಯ ಮೇಲೆ ನಡೆಸುತ್ತಿರುವ ದಬ್ಬಾಳಿಕೆಯ ವಿರುದ್ಧವಾಗಿ, ಏಷ್ಯಾ-ಆಫ್ರಿಕಾದ ಜನತೆ ಹೋರಾಡುತ್ತಿವೆ. ಹೋರಾಟವು ಹೊಸ ಘಟ್ಟಗಳನ್ನು ಮುಟ್ಟುತ್ತಿರುವಂಥ ಸನ್ನಿವೇಶದಲ್ಲಿ ಈ ಸಮ್ಮೇಳನವು ಜರಗುತ್ತಿದೆ.

ಈ ಸಮ್ಮೇಳನದಲ್ಲಿ ಭಾಗವಹಿಸಲು ಭಾರತದಿಂದ ದೊಡ್ಡ ನಿಯೋಗವೊಂದು ಶ್ರೀಮತಿ ರಾಮೇಶ್ವರಿ ನೆಹರೂರವರ ನೇತೃತ್ವದಲ್ಲಿ ತೆರಳಿದೆ. ಸಮ್ಮೇಳನವು ಅಂತರರಾಷ್ಟ್ರೀಯ ಪರಿಸ್ಥಿತಿಯನ್ನು ಕುರಿತು, ವಿಶ್ವಶಾಂತಿ ಚಳುವಳಿಯನ್ನು ಕುರಿತು ಚರ್ಚೆ ನಡೆಸಿ ನಿರ್ಣಯಗಳನ್ನು ಮಾಡಿದೆ (ಮಹತ್ವಪೂರ್ಣವಾದ ಈ ನಿರ್ಣಯಗಳ ಕುರಿತು ವಿವರಗಳನ್ನು ಮುಂದಿನ ವಾರ ಪ್ರಕಟಿಸುತ್ತೇವೆ.)

ಜನತೆಯ ಆಶಯಗಳನ್ನು ಎತ್ತಿ ಹಿಡಿಯಲು, ಏಷ್ಯ ಆಫ್ರಿಕಾ ದೇಶಗಳ ಜನತೆಯ ನಡುವಣ ಸೌಹಾರ್ದವನ್ನು ಬಲಗೊಳಿಸಲು, ವಸಾಹತುಶಾಹಿಯನ್ನು ನಿರ್ಮೂಲಗೊಳಿಸಲು, ವಿಶ್ವಶಾಂತಿಗಾಗಿ ಶ್ರಮಿಸಲು, ಜನತೆ ನಡೆಸುತ್ತಿರುವ ಹೋರಾಟದಲ್ಲಿ ಈ ಸಮ್ಮೇಳನವು ಒಂದು ಮೈಲುಗಲ್ಲಾಗಿದೆ.

ಚಿಕ್ಕಮಗಳೂರು ತೋಟ ಮಾಲಿಕರುಗಳ ದಬ್ಬಾಳಿಕೆಗೆ ಅಂತ್ಯವಿಲ್ಲವೆ?

ಕರ್ನಾಟಕ ಪ್ರಾವಿನ್ಸಿಯಲ್ ಪ್ಲಾಂಟೇಷನ್ ವರ್ಕರ್ಸ್ ಯೂನಿಯನಿನ ಆಶ್ರಯದಲ್ಲಿ ತಾರೀಕ 20—12—57ರಂದು ಸಾಯಂಕಾಲ 5 ಗಂಟೆಗೆ ಜಯಪುರದಲ್ಲಿ ಶ್ರೀ ಎ. ಅಣ್ಣಾಮಲೆಯವರ ಅಧ್ಯಕ್ಷತೆಯಲ್ಲಿ ಬಹಿರಂಗ ಸಭೆ ನಡೆಯಿತು. ಸಭೆಗೆ ಮುಂಚಿತವಾಗಿ ಪ್ಲಾಂಟೇಶನ್ ಕಾರ್ಮಿಕರು ಮೆರವಣಿಗೆಯಾಗಿ ಬಂದರು. ಮೆರವಣಿಗೆಯಲ್ಲಿ ಮಾವಿನ ಗುಡಿಗೆ, ಸೋಮೇಶ್ವರ ಖಾನ್ ಮಾಲೀಕರನ್ನು ಶಿಕ್ಷೆಗೆ ಗುರಿಪಡಿಸಬೇಕ; ಬಂಧನದಲ್ಲಿರುವ ಕಾರ್ಮಿಕರನ್ನು ಕೂಡಲೇ ಬಿಡುಗಡೆ ಮಾಡಬೇಕು, ಪೋಲೀಸರು ಕಾರ್ಮಿಕ ವಿವಾದದಲ್ಲಿ ಪ್ರವೇಶಿಸುವುದು ತಡೆಹಿಡಿಯಬೇಕು. ಮೂರು ತಿಂಗಳ ಬೋನಸ್ಸು ಸಿಗಬೇಕು ಎಂಬಿತ್ಯಾದಿ ಘೋಷಣೆ ಹಾಕುತ್ತಾ ಸಭಾಂಗಣಕ್ಕೆ ಬಂದು ಸೇರಿದರು. ಸಭೆಯಲ್ಲಿ ಯಂ. ವಿ. ಸುಬ್ಬಯ್ಯ, ಬಾಲನ್ ಮಾತಾಡಿದರು. ಕಾಂ. ಯಂ. ವಿ. ಭಾಸ್ಕರ್ ಮಾವಿನ ಗುಡಿಗೆ ಸೋಮೇಶ್ವರ ಖಾನ್ ಎಸ್ಟೇಟ್ ಮಾಲೀಕರು ಮತ್ತು ಪೋಲೀಸರು ಕಾರ್ಮಿಕರ ಮೇಲೆ ನಡೆಸಿದ ಆಕ್ರಮಣ ಮತ್ತು ಅತ್ಯಾಚಾರವನ್ನು ಖಂಡಿಸುವ ಠರಾವೊಂದನ್ನು ಸಭೆಯ ಮುಂದಿಡುತ್ತಾ ಈ ಬಗ್ಗೆ ಸಮಸ್ತ ಪ್ಲಾಂಟೇಶನ್ ಕಾರ್ಮಿಕರು ಮತ್ತು ಮಹಾಜನತೆ ಒಂದಾಗಿ ಪ್ರತಿಭಟಿಸಬೇಕೆಂದೂ ಕೇಳಿಕೊಂಡರು. ಕೊನೆಗೆ ಆಧ್ಯಕ್ಷರು ಮಾತನಾಡಿದ ನಂತರ ಘೋಷಣೆಗಳೊಡನೆ ಸಭೆಯು ಮುಕ್ತಾಯವಾಯಿತು.

ಠರಾವು:

ತಾ. 3—12—57ರಂದು ಮಾವಿನ ಗುಡಿಗೆ, ಸೋಮೇಶ್ವರ ಖಾನ್ ಎಸ್ಟೇಟಿನ ಮಾಲೀಕರು ಸದ್ರಿ ಎಸ್ಟೇಟಿನ ಕಾರ್ಮಿಕರ ಮೇಲೆ ಆಕ್ರಮಣ ಮತ್ತು ಅತ್ಯಾಚಾರ ನಡೆಸಿದ್ದನ್ನು ಈ ಸಭೆಯು ಖಂಡಿಸುತ್ತದೆ. ಆಕ್ರಮಕ್ಕೊಳಗಾದ ಕಾರ್ಮಿಕರನ್ನು ಮರ್ಧಿಸಿ, ಬಂಧಿಸಿ ಲೋಕಪ್ಪಿಗೊಯ್ದ ಪೋಲೀಸರ ಕೃತ್ಯವನ್ನು ಈ ಸಭೆಯು ಬಲವಾಗಿ ಖಂಡಿಸುತ್ತದೆ, ಲೋಕೊಪ್ಪಿನಲ್ಲಿರುವ ಕಾರ್ಮಿಕರನ್ನು ಕೂಡಲೇ ಬಿಡುಗಡೆ ಮಾಡಿ ಕೇಸನ್ನು ವಾಪಾಸು ಪಡೆಯಬೇಕಾಗಿಯೂ, ಇಷ್ಟಕ್ಕೂ ಕಾರಣರಾದ ಮಾಲೀಕರ ಮೇಲೆ ಸೂಕ್ತಕ್ರಮ ಜರಗಿಸಬೇಕೆಂದು ಸರಕಾರವನ್ನು ಕೇಳಿಕೊಳ್ಳುತ್ತದೆ.

ತಿರುಗುಬಾಣ

ಹಳೆಯದೆಲ್ಲಾ ಬದಲಾಗುತ್ತಾ ಹೊಸದಕ್ಕೆ ಸ್ಥಾನ ಬಿಟ್ಟುಕೊಡುತ್ತವೆ ಎಂದು ಇಂಗ್ಲಿಷ್ ಕವಿ ಟೆನಿಸನ್ ಹಾಡಿದ್ದನ್ನು ನೆನೆದು 1958ಕ್ಕೆ ಸ್ಥಾನ ಬಿಟ್ಟು ಹಿಂದುಳಿದ 1957ರ ಸಾಲಿಗೆ ಹೊಸ ವರುಷದ ಪ್ರಥಮ ಸಲಾಂ.

ಏನೇ ಕಷ್ಟ ಬಂದರೂ ಟಿ. ಟಿ. ಕೆ. ಬಿರ್ಲಾ, ಪ್ರಸವಾ ಪಕ್ಷಗಳಿಂದ ಕೈಬಿಡಲ್ಪಟ್ಟರೂ, ಅಮೆರಿಕಾದ ಡಾಲರ್ ಸಹಾಯದಿಂದ ವಂಚಿಸಲ್ಪಟ್ಟರೂ, ಈ ಎಲ್ಲಾ ಗ್ರಹ-ಉಪಗ್ರಹಗಳ ಬಾಲಗ್ರಹದಿಂದ ಸಾಯದೆ ಉಳಿದ, ಕ್ಷೀಣಿಸಿದರೂ ಎಲುಬುಗೂಡು (ತಿರುಳು) ಉಳಿಸಿಕೊಂಡ ನಮ್ಮ ಪಂಚವಾರ್ಷಿಕ ಯೋಜನೆಯ ಶಿಶುವಿಗೆ ನಮ್ಮ ಎರಡನೆಯ ಸಲಾಂ.

ಏನೇ ಬರಲಿ ಯೋಜನೆ ಬದುಕಿರಲಿ ಚಿಂತ ತೊಡೆ ತಟ್ಟಿ ಯೋಜನಾ ವಿರೋಧಿಗಳೊಡನೆ ಸೆಣಸಾಡಲು ಕದನಕಳಕ್ಕಿಳಿದ ಕಮ್ಯೂನಿಸ್ಟರಿಗೂ ಅವರ ಉದ್ದೇಶ ಸರಿಯಾಗಿಲ್ಲವೆಂದು ಪ್ರತಿಬಂಧಕಾಜ್ಞೆಯ ಪತಿಪಾದಕ ಪಂತರು ಹೇಳಿದ್ದರೂ ಅಭಿನಂಧನೆ ಸಲ್ಲಿಸೋಣ.

★ ಇನ್ನು ಈ 'ಬಾಲಗ್ರಹ' ಅಂದಾಗ ರಷ್ಯನರು ಹಾರಿಸಿದ ಶಿಶುಚಂದ್ರನ ನೆನಪಾಯಿತು. ಅಂತೂ 'ಸ್ಪೂತ್ನಿಕ'ನ್ನು ಅಂತರ್‌ಗ್ರಹ ಪ್ರವಾಸಕ್ಕೆ ಕಳಿಸಿದ ರಷ್ಯನರಿಗೆ ಅಭಿನಂದನೆ ಸಲ್ಲಿಸಬೇಕಾದುದೇ!

ಎರಡನೇ ಯುದ್ಧದ 'ಹಳೇ ಹುಲಿ' ಚರ್ಚಿಲ್ಲರಿಗೂ. ಮಸ್ ಸಲಾಂ ಇವರು 1939ರಲ್ಲಿ ಅಂದಂತೆ, ಇನ್ನು ಇಪ್ಪತ್ತು ವರ್ಷಗಳಲ್ಲಿ ಬೊಲ್ಶೆವಿಕರು ಈ ಭೂಮಿಯಿಂದಲೇ ಉಚ್ಚಾಟಿಸಲ್ಪಡುತ್ತಾರೆಂಬುದಕ್ಕೆ ರಷ್ಯನರು 'ಸ್ಪೂತ್ನಿಕ್' ಹಾರಿಸಿ, ಆ ಮೂಲಕ ಇತರ ಗ್ರಹಗಳಿಗೆ ತಪ್ಪಿಸಿ ಹೋಗಲು ಹವಣಿಸುವುದು ಸಾಕ್ಷಿಯಾಗಿದೆ.

ಆದೇ ಸಮಯದಲ್ಲಿ ಅಮೆರಿಕಾದ ಐಕರ "ಡಡ್ನಿಕ್" ಮೇಲಕ್ಕೆ ಹೋಗಲು ನಿರಾಕರಿಸಿದ್ದಕ್ಕೆ ಐಕರಿಗೆ ಸಂತಾಪ ಸೂಚನೆ ತೋರಲೇ! ಅಥವಾ ಶುಭ ಸಂದೇಶ ಕಳಿಸಲೇ ಎಂದು ಇನ್ನು ಮನಸ್ಸಿನಲ್ಲಿ ಇತ್ಯರ್ಥವಾಗಿಲ್ಲ. ಅಂತೂ ಶೀತಲ ಯುದ್ಧದ ಮಾದಕಪೇಯ ಕುಡಿದ ಡಲ್ಲೆಸರಿಗೆ ಮನಸ್ಸಿಗೊಪ್ಪಿಗೆಯೋ ಎಂಬಂತೆ ಆಕಾಶದಲ್ಲಿ ಕೂಡಾ ರಷ್ಯನ್ 'ಸ್ಪೂತ್ನಿಕ್'ನೊಡನೆ ಸಹಬಾಳ್ವೆ ನಡೆಸಲು ಒಪ್ಪದ ಐಕ್ಯರ "ಡಡ್ನಿಕ್" ನಿರ್ಮಾತರು ಅಭಿನಂದನಾರ್ಹರೇ?

★ 1957ರ ಅಂತ್ಯದಲ್ಲೇ ನ್ಯಾಟೊ ರಾಷ್ಟ್ರಗಳ ಶೃಂಗಸಮ್ಮೇಳನ ಸೇರಿದ್ದು ರಷ್ಯವನ್ನು ಎದುರಿಸಲು ಈ ರಾಷ್ಟ್ರಗಳಲ್ಲಿ ಮಧ್ಯಾಂತರ ಕ್ಷಿಪಣಿಗಳನ್ನಿಡಬೇಕೆಂದು ಹೇಳಿದ ಅಮೆರಿಕಾದ ಯೋಜನೆಗೆ ನಾರ್ವೆ, ಸ್ವೀಡನ್‌ಗಳು 'ಶಿಶು (ಅರ್ಧ) ಚಂದ್ರ' ಗೆದಿದೆ. ಅಂತೂ ಶೃಂಗಸಮ್ಮೇಳನ ಭಂಗಹೊಂದಿ ಅಮೆರಿಕದ ಜನತೆ ಮತ್ತು ಪತ್ರಿಕೆಗಳು 'ಐಕ್—ಡಲ್ಲೆಸ್ ನೀತಿ 'ಲೈಕ್' ಮಾಡೋಲ್ಲ ಎಂದು ಘರ್ಜಿಸಿರುವುದು 1958ರಲ್ಲಿ ಕೂಡಾ ಮೊಳಗಲೆಂದು ಹಾರೈಸೋಣ.

★ ಅಮೆರಿಕಾದ 'ಅಣುಬಾಂಬು ಯುಗ' ಮುಗಿದು ರಷ್ಯದ 'ಸ್ಪೂತ್ನಿಕ್ ಯುಗ' ತಂದ 1957 ಚಿರಸ್ಮರಣೀಯ. ಹಾಗೆಯೇ ಭಾರತದ ಕೇರಳದಲ್ಲಿ ಕಾಂಗ್ರೆಸ್ ಮಾದರಿ ಸಮಾಜವಾದಿ ಯುಗ ಮುಗಿದು, ನಿಜವಾದ ಸಮಾಜವಾದಿ ಯುಗ ಮೂಡಿದ 1957 ಎಪ್ರಿಲ್ 5 ಸ್ಮರಣೀಯ. ಕೇರಳದಲ್ಲಿ ಕಮ್ಯೂನಿಸ್ಟ್ ಆಡಳಿತೆಯೊಡನೆ ಸಹಬಾಳ್ವೆ ನಡೆಸಲು ಸಾಧ್ಯವಿಲ್ಲವೆಂದು ಘೋಷಿಸಿರುವ ಪಿ. ಎಸ್. ಪಿ. ಕೇರಳ ಕಾಂಗ್ರೆಸ್, 1957ರಲ್ಲಿ ನಡೆಸಿದ ಕಾರಸ್ಥಾನಗಳು ಮುರಿದು ಬಿದ್ದರೂ 1958ರಲ್ಲಾದರೂ ತಮ್ಮ ಪ್ರಯತ್ನ ಮುಂದುವರಿಸಲಿ. ಈ ಸೋಲಿನ ಸಂದರ್ಭದಲ್ಲಿ ಅಡಿಗೆ ಬಿದ್ದರೂ ಮೂಗು ಮೇಲು' ಎಂದು ಕಮ್ಯೂನಿಸ್ಟರೊಡನೆ ಸಹಬಾಳ್ವೆ ನಡೆಸಲು ನಿರಾಕರಿಸಿ, ದೇಶದೊಳಗೂ ಹೊರಗೂ ಛೀಮಾರಿ ಹಾಕಿಸಿಕೊಳ್ಳುವ ಐಕ್-ಡಲ್ಲೆಸ್‌ರವರೇ ನಮ್ಮ ಕೇರಳ ಪಿ. ಎಸ್. ಪಿ. ಕಾಂಗ್ರೆಸ್ಸಿನ ಮಾದರಿಯಾಗಿರಲಿ. ಅಥವಾ ಈಗಾಗಲೇ ಇವರು ಮಾದರಿಯಾಗಿದ್ದರೆ ಅದೇ ಮಾದರಿಯನ್ನು ತಪ್ಪದೆ ಅನುಸರಿಸಿ, ಪ್ರಜಾಪ್ರಭುತ್ವ ರೀತಿಯಲ್ಲೇ ಬ್ಲಾಕ್‌ಮೈಲ್ ಗೂಂಡಾಗಿರಿ, ಭ್ರಷ್ಟಾಚಾರಗಳನ್ನು 1958ರಲ್ಲಿ ಕೂಡಾ ನಡೆಸಬಹುದೆಂದು ಒಂದು ಸಣ್ಣ ಸಲಹೆ.

★ 1956 ನವಂಬರ ಒಂದರಂದು ಏಕೈಕ ಕರ್ನಾಟಕದ ಮುಖ್ಯ ಮಂತ್ರಿಯಾಗಿ ಮೇಲೆದ್ದ ನಿಜಲಿಂಗಪ್ಪನವರು 1957 ಸಾಲಿಡೀ ಹಲವಾರು ಗುಂಪು ಘರ್ಷಣೆ, ಕೋಮುವಾರು ಕಾರಸ್ಥಾನಗಳಬಿರುಗಾಳಿಯಿಂದಉಳಿದು ಬೀಳದಿದ್ದಕ್ಕೂ ಕೆಂಗಲ್ ಸಾಹುಕಾರರ ಪ್ರಯತ್ನ ಸಾಗದೆ ಮಂತ್ರಿ ಮಂಡಲದ ಉರುಳಾಟ 1958ನೇ ಸಾಲಿಗೆ ಮುಂದುವರಿದುದಕ್ಕೂ ಕನ್ನಡಿಗರ ತೃಪ್ತಿ ಸೂಚನೆ. ಹಾಗೇನೇ 1957ರಲ್ಲಿ ಕಾರ್ಮಿಕರ ಹಿತವನ್ನೇ ಮನಸ್ಸಿನಲ್ಲಿಟ್ಟು ಕಾರ್ಯತಃ ಕಾರ್ಮಿಕ ಕ್ಷೇತ್ರದಲ್ಲಿ ಮುಷ್ಕರಗಳ ಉತ್ಪತ್ತಿಯನ್ನು ಹೆಚ್ಚಿಸಲು ಹೊಣೆಗಾರರಾದ ಕಾರ್ಮಿಕ ಸಚಿವ ಬಾಳಿಗರು ವಂದನೀಯರೇ ಹೊರತು ನಿಂದನೀಯರಲ್ಲ.

(೮ನೇ ಪುಟದಿಂದ)

ವಿದೆಯೋ? ಚುನಾವಣೆಯಲ್ಲಿ ಎಲ್ಲಾ ಸೇವೆಗಳನ್ನೂ ಸಲ್ಲಿಸುವ ಭರವಸೆ ಕೊಟ್ಟು ಮತ ಪಡೆದು ಒಂದು ಸ್ಥಾನಕ್ಕೆ ಏರಿದ ನಂತರ ಏರಿಸಲು ಸಹಕಾರಿಯಾದ ಜನಸಾಮಾನ್ಯರ, ಕಾರ್ಮಿಕರ ಕೈಯನ್ನೇ ಬಿಡುತ್ತಾರೆ. ಇದು ಇಂದಿನ ಯುಗಧರ್ಮ? ಅಲ್ಲ, ಕಾಂಗ್ರೆಸ್ಸಿನ ಧರ್ಮ!

ನಿಜವಾಗಿಯೂ ಚುನಾಯಿತರಾಗುವ ಸದಸ್ಯರು, ತಾವು ತಮ್ಮ ಸ್ವಾಭಿಮಾನಗಳಿಗೆ ಬಾಗದೆ ದೇಶಸೇವೆಯಲ್ಲಿ ನಿರತರಾಗಿ ಜನರನ್ನು ತೃಪ್ತಿಪಡಿಸುವುದೇ ಆಗಿದ್ದರೆ ಈಗ ನಡೆಯುವ ಈ ದುರ್ಘಟನೆಗಳು ಅಂದರೆ ಪ್ರಚಾರವಾಗಲಿ ತನ್ನನ್ನೇ ಚುನಾಯಿಸಿ ಎಂಬ ಕೂಗಾಟ ಕಿರ್‍ಚಾಟವೇ ಆಗಲಿ ಇರುತ್ತಿರಲಿಲ್ಲ ಎನ್ನುವ ಅಂಶವನ್ನು ಇಂದಿನ ಪ್ರಜೆಗಳಾದ ನಾವೆಲ್ಲರೂ ತಿಳಿಯಬೇಕಾಗಿದೆ.

—ಎ. ಡಿ. ಆಂಜನರೆಡ್ಡಿ

ರತನ್ ಸಿಲ್ಕ್ ವೀವಿಂಗ್ ಫ್ಯಾಕ್ಟರಿ 'ಲಾಕೌಟ್'

1957ರ ಸಾಲಿನಲ್ಲಿ ಬೆಂಗಳೂರಿನ ಸಿಲ್ಕ್ ಉದ್ಯಮದಲ್ಲಿ ಅತಿ ಹೆಚ್ಚು ಅವ್ಯವಸ್ಥೆ ತಲೆದೋರಿದೆ ಎಂಬುದರಲ್ಲಿ ಸಂಶಯವಿಲ್ಲ, ಮಾಲಿಕರು ಮನಬಂದಂತೆ ಫ್ಯಾಕ್ಟರಿಗಳನ್ನು ಮುಚ್ಚುವುದು, ಆ ಮೇಲೆ ತನ್ನ ಮಗನೋ ಮತ್ತಾರದೋ ಹೆಸರಿನಲ್ಲಿ ಪುನಃ ತೆರೆಯುವುದು, ಲಾಕೌಟ್, ಮಾಡುವುದು, ಕೆಲಸಗಾರರನ್ನು ಕೆಲಸದಿಂದ ತೆಗೆಯುವುದು "ಮನಸ್ಸಿದ್ದಾಗೊಂದು, ಇಲ್ಲದಾಗೊಂದು ಎಂಬಂತೆ" ನಡೆಯುತ್ತಾ ಬಂದಿದೆ. ಮಾಲಿಕರ ಈ ಸರ್ವಾಧಿಕಾರ ನೀತಿಯನ್ನು ಪ್ರತಿಭಟಿಸಿ, ಸಂಘಟಿತ ಸಿಲ್ಕ್ ಕಾರ್ಮಿಕರು ಹಲವಾರು ಹೋರಾಟಗಳನ್ನು ಮಾಡಿದ್ದಾರೆ. ಅನ್ನ ಸತ್ಯಾಗ್ರಹ ಹೂಡಿದ್ದಾರೆ. ಆದರೂ ಈ ಸಿಲ್ಕ್ ಕೈಗಾರಿಕೆಯಲ್ಲಿ ಮಾಲಿಕರೆನ್ನಿಸುವವರು ತಮ್ಮ ಲಾಭವನ್ನಲ್ಲದೆ ಕಾರ್ಮಿಕರ ಹಿತರಕ್ಷಣೆ ಬಿಡಿ, ದೇಶದ ಕೈಗಾರಿಕಾ ಪ್ರಗತಿಯತ್ತ ಕೂಡಾ ಗಮನವಿತ್ತಿಲ್ಲ. ಕಾರ್ಮಿಕರ ಮಂತ್ರಿಗಳಾಗಿ, ನಮ್ಮ ಶ್ರೀ ವೈಕುಂಠ ಬಾಳಿಗರು ಬಂದ ಮೇಲೆ ಸಿಲ್ಕ್ ಕೈಗಾರಿಕೆಗೂ ಕೂಡಾ ರಾಹು ಬಡಿದಂತಾಗಿದೆಯೆನ್ನಬಹುದು.

ಈಗಾಗಲೇ ಶ್ರೀನಿವಾಸ್ ಸಿಲ್ಕ್ ಫ್ಯಾಕ್ಟರಿ, ಶಂಕರೀ ಸಿಲ್ಕ್ ಫ್ಯಾಕ್ಟರಿ, ರಾಮಕುಮಾರ್ ಮಿಲ್ಸ್ ಇವೆಲ್ಲವನ್ನು ಮುಚ್ಚಲಾಗಿದೆ. ಈ ಮಿಲ್ಲುಗಳನ್ನು ಮುಚ್ಚುವುದು, ತೆರೆಯುವುದು, 'ಲಾಕೌಟ್' ಮಾಡುವುದು ನಗರದಲ್ಲಿ ಒಂದು ಅಂಟುಜಾಡ್ಯವಾಗಿ ಬಂದಿದೆ.

ರತನ್ ಸಿಲ್ಕ್ ವೀವಿಂಗ್ ಫ್ಯಾಕ್ಟರಿಯವರು, ಕಾರ್ಮಿಕರು ಕೆಲಸ ಮಾಡುತ್ತಿರುವಾಗಲೇ ತಾ 2-12-57ರಂದು, ಮಿಲ್ಲನ್ನು ಮುಚ್ಚಿದರು. ಮುಚ್ಚಲು ಕೊಟ್ಟ ಕಾರಣ ಬಹಳ ಹಾಸ್ಯಾಸ್ಪದವಾದುದು. ಕೈಗಾರಿಕೆಯಲ್ಲಿ ನಷ್ಟವಾದುದರಿಂದಲ್ಲ, ಆದರೆ ಕಾರ್ಮಿಕರು ಫ್ಯಾಕ್ಟರಿ ಮಾಲುಗಳಿಗೆ ನಷ್ಟ ಉಂಟುಮಾಡಬಹುದೆಂಬ ಸಂಶಯದಿಂದ ಫ್ಯಾಕ್ಟರಿಯನ್ನು ಮುಚ್ಚಲಾಯಿತಂತೆ. ಫ್ಯಾಕ್ಟರಿ ತೆರೆಯಬೇಕಾದರೆ ಕಾರ್ಮಿಕರು ಫ್ಯಾಕ್ಟರಿ ಮಾಲುಗಳಿಗೆ ಧಕ್ಕೆ ತರುವುದಿಲ್ಲವೆಂದು ಬರೆದುಕೊಡಬೇಕಂತೆ. ಇದು ಯಾವೊಂದು ಕಾರಸ್ಥಾನ? ಈ ಫ್ಯಾಕ್ಟರಿಯ ಮಾಲಿಕರಾದರೊ, ತಾನು ದೊಡ್ಡದಾನಧರ್ಮಿ ಎಂದು ಒಳ್ಳೆ ಹೆಸರು ಪಡೆದುಕೊಂಡಿರುವರೆಂದು ಹೇಳುವ ವಿಜಯಲಕ್ಷ್ಮಿ ಹಾಲಿನ ಮಾಲಿಕರೇ!

ಅಂತೂ ಕಾರ್ಮಿಕರ ಪ್ರತಿಭಟನೆ ಬೆಂಗಳೂರಿನ ಅಸಿಸ್ಟೆಂಟ್ ಲೇಬರ್ ಕಮಿಷನರ್ ಪ್ರವೇಶ, ಕಾರಣವಾಗಿ ಕೊನೆಗೂ ಫ್ಯಾಕ್ಟರಿಯನ್ನು ತೆರೆಯಲಾಯಿತು. ಆದರೆ ಇಲ್ಲೂ ಮಾಲಕರು ತಮ್ಮ ಕುತಂತ್ರ ಬಿಡಲಿಲ್ಲ. ಸಂಘದಲ್ಲಿ ದುಡಿಯುವ ಕಾರ್ಯಕರ್ತರನ್ನು ಕೆಲಸಕ್ಕೆ ತೆಗೆದುಕೊಳ್ಳಲು ಈ ಮಾಲಿಕರು ನಿರಾಕರಿಸಿದ್ದಾರೆ - ಅಂತೂ ಇದರಿಂದ ಇಷ್ಟು ಸ್ಪಷ್ಟವಾಯಿತು. ಫ್ಯಾಕ್ಟರಿ ಮುಚ್ಚುವುದು ನಷ್ಟದಿಂದಲ್ಲ, ಸಂಘವನ್ನು ಮುರಿಯಲಿಕ್ಕಾಗಿ.

ಕಾರ್ಮಿಕರು ಮುಷ್ಕರ ಮಾಡಿದರೆ ಉತ್ಪತ್ತಿಗೆ ತಡೆಯಾಗುತ್ತದೆಂದು ಬಡದುಡಿಯುವವರಿಗೆ ಬೋಧಿಸುವ ಕಾಂಗ್ರೆಸ್ ಸರಕಾರ ಮಾಲಿಕರ ಈ ಕೈಗಾರಿಕಾ ಕಾರ್ಮಿಕಾ ವಿರೋಧಿ ವರ್ತನೆಯ ವಿರುದ್ಧ ಏಕೆ ಯೋಗ್ಯ ಕ್ರಮವನ್ನು ಕೈಗೊಳ್ಳುವುದಿಲ್ಲ? ಅಥವಾ ಮಂತ್ರಿ ಬಾಳಿಗರು ಹೇಳಿದಂತೆ! ಕಾರ್ಮಿಕಖಾತೆ ನಿಜವಾಗ್ಯೂ ನಿದ್ರಿಸುತ್ತಿದೆಯೊ?

ಹಿಂದುಸ್ಥಾನ ವಿಮಾನ ಕಾರ್ಖಾನೆ ಕಾರ್ಮಿಕರ ಖಟ್ಲೆ ಹಿಂತೆಗೆಯಬೇಕು

ಹಿಂದುಸ್ಥಾನ ವಿಮಾನ ಕಾರ್ಖಾನೆ ಕಾರ್ಮಿಕರ ಅನ್ನ ಸತ್ಯಾಗ್ರಹವನ್ನು ಸರಕಾರವು ಕ್ರೂರ ದಬ್ಬಾಳಿಕೆಯಿಂದ ಇದಿರಿಸಿತು. ಅನ್ನಸತ್ಯಾಗ್ರಹಿಗಳು 'ಆತ್ಮಹತ್ಯೆ' ಮಾಡಿಕೊಳ್ಳಲು ಪ್ರಯತ್ನಿಸಿದರೆಂದೂ ಇತರ ಅನೇಕ ಕಾರ್ಮಿಕರ ಮೇಲೆ ಬೇರೆ ನಿಯಮಗಳ ಪ್ರಕಾರವೂ ಖಟ್ಲೆ ಹಾಕಲಾಗಿದೆ.

ಅನ್ನ ಸತ್ಯಾಗ್ರಹವು ಆತ್ಮಹತ್ಯೆ ಎಂದಾದರೆ, ಕೇಂದ್ರ ಸಚಿವ ಮೊರಾರ್ಜಿಯವರೂ ಆಪಾದಿತರಲ್ಲಿ ಒಬ್ಬರಾಗಿರಬೇಕಿತ್ತು! ಗಾಂಧೀಜಿ, ಪೊಟ್ಟಿ ಶ್ರೀರಾಮುಲು ಮತ್ತು ಅನೇಕ ದಿವಂಗತ ಸ್ವಾತಂತ್ರ್ಯ ಯೋಧರು—ಬದುಕಿ ಉಳಿದಿದ್ದರೆ—ಮೈಸೂರು ಸರಕಾರದ ಖಟ್ಲೆಗೆ ಗುರಿಯಾಗಬೇಕಿತ್ತು!

ವಿಮಾನ ಕಾರ್ಖಾನೆಯ ಕಾರ್ಮಿಕರ ಚಳುವಳಿಯ ಸಂಬಂಧದಲ್ಲಿ ಒಂದೇ ಒಂದು ಹಿಂಸಾತ್ಮಕ ಘಟನೆ ನಡೆದುದಿಲ್ಲ. ಶಾಂತ ರೀತಿಯ ಸಾಮೂಹಿಕ ಹೋರಾಟದ ವಿರೋಧವಾಗಿ ದಂಡ ಪ್ರಯೋಗಿಸುವ ಸರಕಾರದ ನೀತಿ ಬದಲಾಗಬೇಕು.

ಎರಡು ಉದಾಹರಣೆಗಳನ್ನು ಮೈಸೂರು ಸರಕಾರದ ಗಮನಕ್ಕೆ ತರಬೇಕೆಂದಿದ್ದೇವೆ.

ಕೇರಳ ಸರಕಾರವನ್ನು ಉರುಳಿಸುವ ದುರುದ್ದೇಶದಿಂದ ಕಾಂಗ್ರೆಸ್— ಪಿ. ಎಸ್. ಪಿ. ಪಕ್ಷಗಳು ಒಂದಾಗಿ ಕಟ್ಟಂಪಳ್ಳಿಯಲ್ಲಿ ಸರಕಾರೀ ಜಮೀನನ್ನು ಆಕ್ರಮಿಸಲು ಹೋರಾಡಿದುವು. ಈ ಹೋರಾಟದಲ್ಲಿ ಮಂತ್ರಿಗಳ ಕಾರುಗಳನ್ನು ತಡೆಯುವುದು, ಪೋಲೀಸು ಅಧಿಕಾರಿಗಳಿಗೆ ಹೊಡೆಯುವುದು, ಕಲ್ಲು ತೂರುವುದೇ ಮೊದಲಾದ ಹಿಂಸಾತ್ಮಕ ಕೃತ್ಯಗಳೆಲ್ಲ ನಡೆದುವು. ಕೊನೆಗೆ ಹೋರಾಟ ಹಿಂತೆಗೆಯಲ್ಪಟ್ಟಿತು. ಆದಾದ ಕೂಡಲೆ ಕೇರಳದ ಕಮ್ಯೂನಿಸ್ಟ್ ಸರಕಾರವು ಕಟ್ಟಂಪಳ್ಳಿಗೆ ಸಂಬಂಧಿಸಿದ ಎಲ್ಲ ಖಟ್ಲೆಗಳನ್ನೂ ಹಿಂತೆಗೆದು ಆಪಾದಿತರನ್ನು ನಿಶ್ಶರ್ತವಾಗಿ ಬಿಡುಗಡೆ ಮಾಡಿತು.

ಕಳೆದ ಏಳು ತಿಂಗಳುಗಳಿಂದ ಪಂಜಾಬಿನಲ್ಲಿ ಹಿಂದೀ ಸತ್ಯಾಗ್ರಹ ನಡೆಯಿತು.

(೧೦ನೇ ಪುಟ ನೋಡಿ)

ವಿಶೇಷ ಸಮಾಚಾರಗಳು

ಅಖಿಲ ಭಾರತ ಮಹಿಳಾ ಪರಿಷತ್ತು

ಹೈದರಾಬಾದಿನಲ್ಲಿ ತಾ. 25ಕ್ಕೆ ಸಮಾವೇಶಗೊಂಡ ಅಖಿಲ ಭಾರತ ಮಹಿಳಾ ಪರಿಷತ್ತು ಮಹತ್ವದ ಕೆಲವು ನಿರ್ಣಯಗಳನ್ನು ಅಂಗೀಕರಿಸಿದೆ. ಪರಮಾಣು ಆಯುಧಗಳ ಪರೀಕ್ಷಾರ್ಥ ಪ್ರಯೋಗಗಳನ್ನು ನಿಲ್ಲಿಸಬೇಕು, ಸಾಮೂಹಿಕ ವಿನಾಶ ಕಾರಕವಾದ ಪರಮಾಣು ಆಯುಧಗಳನ್ನು ಸಂಪೂರ್ಣವಾಗಿ ನಿರೋಧಿಸುವುದಕ್ಕೆ "ಮಹಾಶಕ್ತಿ"ಗಳು ಒಪ್ಪಂದ ಮಾಡಿಕೊಳ್ಳಬೇಕೆಂದು ಮಹಿಳಾ ಪರಿಷತ್ತು ವಿನಂತಿಸಿದೆ. ದೇಶವು ಸ್ವಾತಂತ್ರ್ಯ ಪಡೆದು, ಭಾಷಾವಾರಾಗಿ ಪ್ರಾಂತಗಳ ಪುನರ್ವಿಂಗಡನೆ ಆದ ನಂತರ, ಮಕ್ಕಳ ವಿದ್ಯಾಭ್ಯಾಸವನ್ನು ಅವ್ಯವಸ್ಥೆಗೆ ಗುರಿಪಡಿಸಲಾಗಿದೆ; ಒಂದು ಕಡೆಯಿಂದ ಇನ್ನೊಂದು ಕಡೆಗೆ ವರ್ಗವಾಗುತ್ತಿರುವ ಉದ್ಯೋಗಸ್ಥರ ಮಕ್ಕಳ ಸಲುವಾಗಿ ಮುಖ್ಯ ನಗರಗಳಲ್ಲಿ ಅಖಿಲ ಭಾರತ ನಮೂನೆಯ ಶಾಲೆಗಳನ್ನು ಸ್ಥಾಪಿಸಬೇಕು ಎಂದು ಪರಿಷತ್ತು ಭಾರತ ಸರಕಾರವನ್ನು ಕೇಳಿಕೊಂಡಿದೆ. ಪ್ರಾದೇಶಿಕ ಭಾಷೆ, ಮತ್ತು ಹಿಂದಿಯನ್ನು ಕಲಿಸುವುದರ ಜೊತೆಯಲ್ಲೇ ಆದಷ್ಟು ಆರಂಭದಲ್ಲೇ ಇಂಗ್ಲೀಷನ್ನೂ ಮಕ್ಕಳಿಗೆ ಕಲಿಸಬೇಕೆಂದು ಪರಿಷತ್ತು ಕೇಳಿಕೊಂಡಿದೆ. ಆಹಾರದ ಪರಿಸ್ಥಿತಿಯ ಬಗ್ಗೆ ಪರಿಷತ್ತು ಅಂಗೀಕರಿಸಿರುವ ನಿರ್ಣಯದಲ್ಲಿ, ಕಡ್ಡಾಯ ರೇಶನಿಂಗ್ ಕ್ರಮವನ್ನು ಬಳಕೆಗೆ ತರಬಾರದೆಂದೂ, ದೊಡ್ಡ ಮತ್ತು ಸಣ್ಣ ಸೀರಾವರಿಗಳಿಗೆ ಹೆಚ್ಚು ಗಮನಕೊಡಬೇಕೆಂದೂ ಜಮೀನನ್ನು ಬಂಜರಾಗಿ ಬಿಡಲು ಅವಕಾಶ ಕೊಡಬಾರದೆಂದೂ ವ್ಯವಸಾಯಗಾರರಿಗೆ ಸರಕಾರ ಸಹಾಯ ನೀಡಬೇಕೆಂದೂ ಪರಿಷತ್ತು ಕೇಳಿಕೊಂಡಿದೆ.

ನಿರುದ್ಯೋಗ ಹೆಚ್ಚಾಗುತ್ತಿದೆ ಎಂದು ಶ್ರೀ ವಾಸ್ವಾದ

ಇಂಡಿಯನ್ ನ್ಯಾಶನಲ್ ಟ್ರೇಡ್ ಯೂನಿಯನ್ ಕಾಂಗ್ರೆಸಿನ ಅಧ್ಯಕ್ಷ ಶ್ರೀ ವಾಸ್ವಾದರವರು ದಶಂಬರ ತಾ. 25ರಂದು ಅಹಮದಾಬಾದಿನಲ್ಲಿ ಒಂದು ಹೇಳಿಕೆ ಕೊಡುತ್ತ, "ಹತ್ತಿ ಗಿರಣಿಗಳು ಮುಚ್ಚಲ್ಪಟ್ಟಿರುವುದರಿಂದ ಸಾವಿರಗಟ್ಟಲೆ ಜನರ ಉದ್ಯೋಗಕ್ಕೆ ಭಯಂಕರವಾದ ಅಪಾಯ ಉಂಟಾಗಿದೆ" ಎಂದು ಹೇಳಿದ್ದಾರೆ. ಪಶ್ಚಿಮ ಭಾರತ ಮತ್ತು ರಾಜಸ್ಥಾನದಲ್ಲಿ ಮಾತ್ರ 25,000 ಕೆಲಸಗಾರರು ಈಗಾಗಲೇ ನಿರುದ್ಯೋಗಕ್ಕೆ ತಳ್ಳಲ್ಪಟ್ಟಿದ್ದಾರೆ. ಮುಚ್ಚುವುದಾಗಿ ನೋಟೀಸು ಕೊಡಲಾಗಿರುವ ಇತರ ಮಿಲ್ಲುಗಳೂ ಮುಚ್ಚಿದರೆ ಇನ್ನೂ 10—15 ಸಾವಿರ ಕೆಲಸಗಾರರು ಕೆಲಸ ಕಳೆದುಕೊಳ್ಳಬೇಕಾಗುವುದು. ಇದರಿಂದ ಕನಿಷ್ಟಪಕ್ಷ 150,000 ಜನರು ತೀವ್ರವಾದ ಕಷ್ಟ ಕಾರ್ಪಣ್ಯಗಳಿಗೆ ತುತ್ತಾಗುವರು........ಅರಿವೆಯ ಉತ್ಪಾದನೆಯು ಈಗಲೇ 540 ಕೋಟಿ ಗಜದಿಂದ 480 ಕೋಟಿ ಗಜಗಳಿಗೆ ಇಳಿದಿದೆ. ಅದು ಇನ್ನೂ ಕಡಿಮೆಯಾಗುವ ಮತ್ತು ಅರಿವೆಯ ಕ್ರಯ ಹೆಚ್ಚಾಗುವ ಅಪಾಯವಿದೆ. ಸರಕಾರವು ನಿರುದ್ಯೋಗಿ ಕೆಲಸಗಾರರಿಗೆ ಪರಿಹಾರ ಒದಗಿಸಬೇಕು; ಮಿಲ್ಲುಗಳನ್ನು ತೆರೆದು ನಡೆಸುವುದಕ್ಕೆ ಮಾಲಕರಿಗೆ ಸಹಾಯ ನೀಡಬೇಕು" ಎಂದು ವಾಸ್ವಾದ ಹೇಳಿದ್ದಾರೆ.

ದೆಹಲಿ ಭಂಗಿ ಕಾಲನಿಯ ಅವಗಣನೆ

ಕಾಂಗ್ರೆಸು ಮುಂದಾಳುಗಳು ಹರಿಜನ ಸೇವೆ ತಮ್ಮ ಧರ್ಮವೆಂದು ಹಾಡುತ್ತಿರುತ್ತಾರೆ. ಅಸ್ಪೃಶ್ಯತೆ ಕೂಡಲೆ ಕೊನೆಗಾಣಿಸಲು ತೀವ್ರ ಕ್ರಮ ವಹಿಸಬೇಕೆಂದು ಘೋಷಿಸುತ್ತಾರೆ. ಆದರೆ ಅಸ್ಪೃಶ್ಯತಾ ನಿವಾರಣೆಯ ಕಾರ್ಯ ತೀರ ಹಿಂದುಳಿದಿದಯೆಂದು ಇತ್ತೀಚೆಗೆ ಅಧಿಕೃತವಾಗಿಯೇ ಒಪ್ಪಿಕೊಳ್ಳಬೇಕಾಗಿ ಬಂದುದು ನಾಚಿಕೆಗೇಡು. ಇದೀಗ ಇನ್ನೊಂದು ವಿಶಯ ಬೆಳಕಿಗೆ ಬಂದಿದೆ.

ದೆಹಲಿ ನಗರದ ಭಂಗಿ ಕಾಲೊನಿ (ಹರಿಜನ ನಿವಾಸ)ಯನ್ನು 1935ರಿಂದ.... ಅಂದರೆ ಇಪ್ಪತ್ತ ಎರಡು ವರ್ಷಗಳಿಂದ— ದುರಸ್ತಿ ಮಾಡಿರುವುದಿಲ್ಲವಂತೆ! ದೆಹಲಿ ನಗರ ಸಭೆಯಲ್ಲಿ ಈ ವಿಷಯ ಪ್ರಸ್ತಾಪಿಸಲ್ಪಟ್ಟಿತು. ಕೊನೆಗೆ, ಈ ಕಾಲೊನಿಯನ್ನು ದುರಸ್ತಿ ಮಾಡಬೇಕೆಂಬುದನ್ನು ನಗರ ಸಭೆಯು "ತತ್ವತಃ" ಒಪ್ಪಿಕೊಂಡಿತೆಂದೂ, ಆದರೆ ಕಾರ್ಯತಃ ದುರಸ್ತಿ ಮಾಡುವುದಕ್ಕೆ ಹಣದ ಅಭಾವವಿರುವುದರಿಂದ ಇನ್ನೂ ಪರಿಶೀಲನೆ ನಡೆಸಿ ನೋಡಬೇಕೆಂದು ಅಭಿಪ್ರಾಯ ಪಡಲಾಗಿದೆಯೆಂದೂ ವರದಿಯಾಗಿದೆ.

ಮಹಾತ್ಮಾ ಗಾಂಧಿಯವರು ದೆಹಲಿಗೆ ಸಂದರ್ಶನವಿತ್ತಾಗ ಈ ಭಂಗಿ ಕಾಲೋನಿಯಲ್ಲೆ ನೆಲೆಸಿದ್ದರು. ಅವರಿಗಾಗಿ ಪ್ರತ್ಯೇಕ ಗುಡಿಸಲಿನ ನಿರ್ಮಾಣವಾಗಿತ್ತು. ಆದರೆ ಆಗಲೂ ಅನಂತರ ಈವರೆಗೂ ಭಂಗಿಗಳು ವಾಸವಾಗಿರುವ ಗುಡಿಸಲುಗಳ ಮತ್ತು ಕೇರಿಗಳ ದುರುಸ್ತಿ ಆಗಲಿಲ್ಲ! ಇದು ಕಾಂಗ್ರೆಸ್ ಆಡಳಿತೆಯ ಹರಿಜನ ಸೇವೆಗೆ ಒಂದು ಪ್ರತ್ಯಕ್ಷ ಉದಾಹರಣೆ!

ಎಲ್ಲ ಭಾಷೆಗಳಿಗೂ ಸಮಾನ ಸ್ಥಾನ

ಕಲ್ಕತ್ತದಲ್ಲಿ ಜರಗಿದ ಲೇಖಕರ ಸಮ್ಮೇಳನವು ಭಾಷಾ ಸಮಸ್ಯೆಯ ಕುರಿತು ಒಂದು ನಿರ್ಣಯವನ್ನು ಅಂಗೀಕರಿಸಿದೆ. ಭಾರತವು ಅನೇಕ ಭಾಷೆಗಳ ಮತ್ತು ವಿವಿಧ ಸಂಸ್ಕೃತಿಗಳ ದೇಶವಾಗಿದೆ. ಈ ಎಲ್ಲ ಭಾಷೆ ಹಾಗೂ ಸಂಸ್ಕೃತಿಗಳ ಕಡೆಗೆ ಸಹಾನುಭೂತಿ, ಸಮದೃಷ್ಟಿ ಮತ್ತು ಗೌರವ ಇದ್ದರೆ ಮಾತ್ರವೇ ರಾಷ್ಟ್ರೀಯ ಐಕ್ಯತೆಯನ್ನು ಉಳಿಸಿಕೊಳ್ಳಲು ಸಾಧ್ಯವಾಗುವುದು. ಎಲ್ಲ ಭಾಷೆಗಳಿಗೂ ಮಾನ ಸ್ಥಾನ ಮತ್ತು ಅವಕಾಶವಿರುವುದರ ಆಧಾರದಲ್ಲಿ ಎಲ್ಲ ಭಾಷೆಗಳ ಸ್ವಾಭಾವಿಕವಾದ ಬೆಳವಣಿಗೆಗೆ ಆಸ್ಪದವಿರಬೇಕು. ಹಿಂದಿಯ ಕಡೆಗೆ ವಿರೋಧವಾಗಲಿ ಹಿಂದಿ ಭಾಷೆಯನ್ನು ಮಾತಾಡುವವರಲ್ಲಿ ದ್ವೇಷವಾಗಲಿ ಇಲ್ಲ. ಆದರೆ ಭಾರತದ ಎಲ್ಲ ಮುಖ್ಯ ಭಾಷೆಗಳೂ ರಾಷ್ಟ್ರೀಯ ಭಾಷೆಗಳಾಗಿ ಅಂಗೀಕರಿಸಲ್ಪಡಬೇಕು. ಯಾವುದೇ ಒಂದು ಭಾಷೆಗಾದರೂ ಇತರ ಭಾಷೆಗಳಿಗಿಂತ ಹೆಚ್ಚಿನ ಅಧಿಕಾರ ಅವಕಾಶಗಳನ್ನು ಕೊಡುವ ಪಕ್ಷಪಾತತನ ಯೋಗ್ಯವಲ್ಲ. ಈ ಸರ್ವ ಭಾಷಾ ಸಮನ್ವಯತೆಯ ಧೋರಣೆಗೆ ಜನರು ಬೆಂಬಲ ನೀಡಬೇಕೆಂದು ಬರಹಗಾರರ ಸಮ್ಮೇಳನವು ವಿನಂತಿಸಿದೆ.

"ಜನತಾ ಕಾಂಗ್ರೆಸ್" ಸ್ಥಾಪಿಸುವ ಯೋಚನೆ

ಕಾಂಗ್ರೆಸ್ ಪಕ್ಷದೊಳಗೆ "ಸೋಷ್ಯಲಿಸ್ಟ ಫಾರಂ" ಹುಟ್ಟಿಕೊಂಡಾಗಲೇ, ಇನ್ನೊಂದು ಪಂಗಡ ಕಾಂಗ್ರೆಸಿನಿಂದ ಹೊರಗೆ ಬಂದು "ಜನತಾ ಕಾಂಗ್ರೆಸ್" ಎಂಬ ಪಕ್ಷವನ್ನು ಕಟ್ಟಿಕೊಳ್ಳಲು ಪ್ರಯತ್ನ ನಡೆಯುತ್ತಿದೆ. ಬೊಂಬಯಿಯಲ್ಲಿ ಸಂಯುಕ್ತ ಮಹಾರಾಷ್ಟ್ರ ಕಾಂಗ್ರೆಸ್ ಜನ ಪರಿಷತ್ತನ್ನು ಉದ್ಘಾಟನೆ ಮಾಡುತ್ತ ಪಶ್ಚಿಮ ಬಂಗಾಳದ ಪರಿತ್ಯಕ್ತ ಕಾಂಗ್ರೆಸ್ ನಾಯಕ ಶ್ರೀ ಜೆ. ಸಿ. ಮೊಯಿತ್ರಾ ಈ ಸಲಹೆಯನ್ನು ಇತ್ತಿದ್ದಾರೆ. ಕಾಂಗ್ರೆಸಿನ ಒಳಗೆ ಇದ್ದುಕೊಂಡು ಘಟನಾತ್ಮಕವಾಗಿ ಆ ಸಂಸ್ಥೆಗೆ ಚೈತನ್ಯ ತುಂಬಲು ಸಾಧ್ಯವಿಲ್ಲ ಎಂದು ಅವರು ಅಭಿಪ್ರಾಯ ಪಟ್ಟಿದ್ದಾರೆ. ಆದ್ದರಿಂದ ಅಧಿಕೃತ ಕಾಂಗ್ರೆಸಿನ ಪ್ರತಿರೂಪವಾಗಿ "ಜನತಾ ಕಾಂಗ್ರೆಸ್" ಎಂಬ ಸಂಸ್ಥೆಯನ್ನು ಸ್ಥಾಪಿಸಬೇಕೆಂದು ಅವರು ಸಲಹೆ ನೀಡಿದ್ದಾರೆ.

ಒಪ್ಪಂದವಾಗದುದರಿಂದ ಚುನಾವಣೆ ರದ್ದು

ಕಾಂಗ್ರೆಸ್ ಪಕ್ಷದ ಧೋರಣೆಯಲ್ಲಿರುವ ಪರಸ್ಪರ ವಿರೋಧ ಅಂಶಗಳು, ಮಾತಿಗೂ ಕಾರ್ಯಕ್ಕೂ ನಡುವಿನ ತಿಕ್ಕಾಟ, ಅಧಿಕಾರದ ಮೋಹ ಮತ್ತು ಸ್ವಾರ್ಥಲಾಲಸೆಯಿಂದ ಒಳಗೆ ನುಸುಳುವವರಿಗೆ ಸಿಗುವ ಸ್ವಾಗತ ಮತ್ತು ಅವಕಾಶ ಮುಂತಾದವುಗಳ ಪರಿಣಾಮವಾಗಿ ಒಳಜಗಳ ತೀರಿಸಿದಷ್ಟು ತೀರದ ಸ್ಥಿತಿಗೆ ತಲುಪಿದೆ. ಮೈಸೂರು ಕಾಂಗ್ರೆಸಿನ ಒಳಗುಂಪುಗಳ ನಿರಂತರ ಬಡೆದಾಟವು ಆಚಾರ್ಯ ವಿನೋಭಾಜಿಯವರ ಬಹಿರಂಗ ವಿಮರ್ಶೆಗೂ ಗುರಿಯಾಗಿತ್ತು. ಅದಿನ್ನೂ ಮುಗಿದಿಲ್ಲ; ಮುಗಿಯುವಂತೆಯೂ ಇಲ್ಲ. ಈ ಒಳಜಗಳದ ಕಾರಣದಿಂದಲೇ ಮೈಸೂರು ವಿಧಾನ ಸಭೆಯ ಅಧಿವೇಶನ—ಕಡೆಯ ಪಕ್ಷ ದಶಂಬರ ಕೊನೆಯ ವಾರದಲ್ಲಾದರೂ ಸೇರಬೇಕಾಗಿದ್ದುದು—ಫೆಬ್ರುವರಿಯ ತನಕ ಮುಂದೆ ದೂಡಲ್ಪಟ್ಟಿದೆ.

ಪಂಡಿತ ನೆಹರೂರವರ ಸ್ವಂತ ಪ್ರಾಂತವೂ ಕಾಂಗ್ರೆಸಿನ ಕೋಟೆಯೆಂದು ಹೆಸರುವಾಸಿಯಾದುದೂ ಉತ್ತರ ಪ್ರದೇಶ! ಅಲ್ಲೇ ಈ ಒಳಜಗಳದ ರುದ್ರರೂಪ ಇದೀಗ ಬಯಲಿಗೆ ಬಂದಿದೆ. ಪ್ರಾದೇಶಿಕ ಅಧಿಕಾರಿಗಳ ಚುನಾವಣೆಗೆಂದು ಕರೆಯಲಾಗಿದ್ದ ಸಭೆಗೆ ಪ್ರತಿನಿಧಿಗಳೆಲ್ಲ ಹಾಜರಾಗಿದ್ದರು. ಅಷ್ಟರೊಳಗೆ ಕಚ್ಚಾಡುತ್ತಿದ್ದ ಮುಂದಾಳುಗಳಲ್ಲಿ ಒಪ್ಪಂದ ಮಾಡುವುದಕ್ಕೆ ಶತಪ್ರಯತ್ನ ನಡೆಯಿತು. ಈ ಪ್ರಯತ್ನ ಫಲಕಾರಿಯಾಗಲಿಲ್ಲ. ಮುಂದಾಳುಗಳೊಳಗೆ ಒಪ್ಪಂದವಾಗದುದರಿಂದ ಚುನಾವಣೆಯನ್ನೇ ರದ್ದು ಪಡಿಸಲಾಯಿತು! ಪಕ್ಷದೊಳಗೆನೇ ಹೀಗೆ ಪ್ರಜಾಪ್ರಭುತ್ವವನ್ನು ಬಲಿಕೊಡುವ ನಾಯಕರು ದೇಶದ ಆಡಳಿತೆಯಲ್ಲಿ ಪ್ರಜಾಪ್ರಭುತ್ವಕ್ಕೆ ಮನ್ನಣೆ ಕೊಡುವರೆ? ಪಕ್ಷದೊಳಗೆ ಐಕ್ಯತೆಯನ್ನು ಉಳಿಸಿಕೊಳ್ಳಲಾರದವರು ರಾಷ್ಟ್ರದ ಐಕ್ಯತೆಯನ್ನು ರಕ್ಷಿಸಬಲ್ಲರೆ? ಇದು ಕೇವಲ ಕಾಂಗ್ರೆಸ್ ಪಕ್ಷಕ್ಕೆ ಸಂಬಂಧಿಸಿದ ಪ್ರಶ್ನೆಯಲ್ಲ. ಇದು ಸಮಗ್ರ ಜನತೆ ಯೋಚಿಸತಕ್ಕ ವಿಷಯ.

ಸಿ. ವಿ. ರಾಮನ್‌ಗೆ ಲೆನಿನ್ ಪ್ರಶಸ್ತಿ

ನೋಬೆಲ್ ಪ್ರಶಸ್ತಿ ಪಡೆದ ಭಾರತ ಭೌತ ವಿಜ್ಞಾನಿ ಶ್ರೀ ಸಿ. ವಿ. ರಾಮನ್‌ರಿಗೆ ಲೆನಿನ್ ಪ್ರಶಸ್ತಿಯನ್ನು ನೀಡಲಾಗಿದೆ. ಅಂತರ್‌ರಾಷ್ಟ್ರೀಯ ಲೆನಿನ್ ಪ್ರಶಸ್ತಿಗಳ ಬಗ್ಗೆ ಇರುವ ಸಮಿತಿಯು ಜನತೆಗಳ ನಡುವೆ ಶಾಂತಿಯನ್ನು ಬಲಗೊಳಿಸಲು ದುಡಿದ 7 ಜನರಿಗೆ ಈ ಪ್ರಶಸ್ತಿಯನ್ನು ಕೊಟ್ಟಿದೆ. ಪ್ರಪ್ರಥಮವಾಗಿ ಕನ್ನಡಿಗರಾದ ಶ್ರೀ ಸಿ. ವಿ. ವಿ. ರಾಮನ್‌ರವರು ಈ ಪೈಕಿ ಒಬ್ಬರಾಗಿರುವುದು, ಕನ್ನಡಿಗರೆಲ್ಲರಿಗೂ ಹೆಮ್ಮೆಯ ಮತ್ತು ಸಂತೋಷದ ಮಾತು.

ಪ್ಲಾಂಟೇಶನ್ ಲೇಬರ್ ಆ್ಯಕ್ಟಿಗೆ ತಿದ್ದುಪಡಿ ಸೂಚನೆ

1951ರ ಪ್ಲಾಂಟೇಶನ್ ಲೇಬರ್ ಆ್ಯಕ್ಟಿಗೆ ಕೆಲವು ತಿದ್ದುಪಡಿಗಳನ್ನು ಕೇಂದ್ರ ಸರಕಾರ ತರುವುದಾಗಿ ನಿರೀಕ್ಷಿಸಲಾಗಿದೆ. ಪ್ಲಾಂಟೇಶನ್ ಲೇಬರ್ ಆ್ಯಕ್ಟುಪ್ರಕಾರ 25ಎಕ್ರೆಗಳಿಗಿಂತ ಕಡಿಮೆ ವಿಸ್ತೀರ್ಣವಿರುವ ಮತ್ತು 30 ಕೆಲಸಗಾರರಿಗಿಂತ ಕಡಿಮೆ ಮಂದಿ ಕೆಲಸಕ್ಕಿರುವ ಪ್ಲಾಂಟೇಶನುಗಳಿಗೂ ಅನ್ವಯವಾಗುವಂತೆ ಮಾಡುವುದು ಈ ತಿದ್ದುಪಡಿಗಳಲ್ಲಿ ಒಂದಾಗಿದೆ. ಪ್ಲಾಂಟೇಶನುಗಳಲ್ಲಿ ಕೆಲಸ ಮಾಡುವ ವೈದ್ಯಕೀಯ ನೌಕರರಿಗೂ ಗುಮಾಸ್ತರುಗಳಿಗೂ ಈ ಆ್ಯಕ್ಟಿನ ಪ್ರಯೋಜನ ದೊರಕುವಂತೆ ಮಾಡುವುದು, ಕೆಲಸಗಾರರ ಕುಟುಂಬಗಳವರಿಗೆ ವೈದ್ಯಕೀಯ ಸಹಾಯ ಕೊಡಬೇಕೆಂದು ಕಡ್ಡಾಯ ಮಾಡುವುದು, ಕೆಲಸದಿಂದ ವಜಾ ಮಾಡುವ ಸಂದರ್ಭದಲ್ಲಿ ಕೆಲಸಗಾರರಿಗೆ ಸಲ್ಲತಕ್ಕ ರಜೆ ಅಥವಾ ಅದರ ಬದಲು ಸಂಬಳ ಕೊಡುವುದೂ, ಕೆಲಸದ ಸಮಯವನ್ನು ವಾರಕ್ಕೆ 54 ಘಂಟೆಗಳಿಗೆ ಪರಿಮಿತಗೊಳಿಸುವ ಈಗಿನ ಕಾನೂನಿನ ನಿಬಂಧನೆಯಿಂದ ಮಾಲಕರಿಗೆ ವಿನಾಯಿತಿ ಕೊಡುವುದೇ ಮೊದಲಾದ ತಿದ್ದುಪಡಿಗಳನ್ನು ಕೇಂದ್ರ ಸರಕಾರವು ತರುವುದರಲ್ಲಿದೆ ಎಂದು ವರದಿಯಾಗಿದೆ.

ರೈತರಂಗ

ಶಿವಮೊಗ್ಗೆ

ತಾ 26—12—57 ಗುರುವಾರ ಸಂಜೆ 8ಗೆ ಗಂಟೆಗೆ ಶಿವಮೊಗ್ಗೆ ತಾಲೂಕಿನ ಹೊಳೆ ಹನಸವಾಡಿಯ ರೈತರೆಲ್ಲರೂ, ಕರ್ನಾಟಕ ಪ್ರಾಂತ ರೈತ ಸಂಘದ ಅಂಗವಾಗಿ ಬಸವೇಶ್ವರ ದೇವಸ್ಥಾನದ ಆವರಣದಲ್ಲಿ ಸಭೆ ಸೇರಿದ್ದು, ರೈತರ ಸಂಘವನ್ನು ಸ್ಥಾಪಿಸಲಾಯಿತು.

ಶ್ರೀ ಎನ್. ಎಸ್. ಪಾಲಾಕ್ಷಯ್ಯನವರು ಸರ್ವರನ್ನು ಸ್ವಾಗತಿಸಿದರು. ಶ್ರೀಯುತರುಗಳಾದ ಕೆ. ಸಿ. ಕುಟ್ಟಿ, ಸದಾಶಿವಪ್ಪ, ಬಿ. ಬಸವರಾಜ್‌ರವರುಗಳು ಇಂದಿನ ರೈತರ ಸಮಸ್ಯೆಗಳ ವಿಶಯವಾಗಿ ಮಾತನಾಡಿದರು

ತಾತ್ಕಾಲಿಕವಾಗಿ ಈ ಕೆಳಕಂಡ ಕಾರ್ಯಕಾರಿ ಸಮಿತಿಯನ್ನು ರಚಿಸಲಾಯಿತು. ಅಧ್ಯಕ್ಷರಾಗಿ ಶ್ರೀ ಹೊಸೂರು ಬಸವಪ್ಪನವರು, ಉಪಾಧ್ಯಕ್ಷರಾಗಿ ಎಚ್. ಜಿ ಲಿಂಗಪ್ಪ ಗೌಡ್ರು, ಕಾರ್ಯದರ್ಶಿಗಳಾಗಿ ಎಚ್. ಎಸ್. ಪಾಲಾಕ್ಷಯ್ಯ ಟಿ. ಎನ್.ಗಂಗಪ್ಪನವರನ್ನೂ ಸದಸ್ಯರುಗಳಾಗಿ ವಿಳವ.ಗಿ ನಂದಿಬಸಪ್ಪ, ನಂದಿಬಸಪ್ಪ ಗೌಡ್ರು ಕೆ. ಕರಿಬಸಪ್ಪ, ಭಾಸ್ಕರಾಚಾರ್ ದಾಸಪ್ಪ, ಸಣ್ಣ ಬಸಪ್ಪ, ಕೆ. ನವಲಪ್ಪ, ಕೆ. ಶಣ್ಮುಗಪ್ಪ, ಜಿ. ನಾಗಪ್ಪ ಜಿ. ಕೆ. ರಂಗಪ್ಪ ಇವರುಗಳನ್ನು ಸರ್ವಾನುಮತದಿಂದ ಆರಿಸಲಾಯಿತು.

ಬೇಗನೆ ಸಂಘದ ಪ್ರಾರಂಭೋತ್ಸವ ಮಾಡಲು ಚಿತ್ರದುರ್ಗದ ನ್ಯಾಯವಾದಿಗಳಾದ ಶ್ರೀ ಹನುಮಂತ ರೆಡ್ಡಿಯವರನ್ನು ಮತ್ತು ಆ ದಿನದ ಕಾರ್ಯಕಲಾಪದ ಅಧ್ಯಕ್ಷತೆ ವಹಿಸಲು ಶಿವಮೊಗ್ಗದ ನ್ಯಾಯವಾದಿಗಳಾದ ಶ್ರೀ ಬಿ. ಎನ್. ಎ. ಹೆಗಡೆಯವರನ್ನು ಕೇಳಿಕೊಳ್ಳಲು ತೀರ್ಮಾನಿಸಲಾಯಿತು.

ಶ್ರೀ ಎಚ್. ಎಸ್. ಪಾಲಾಕ್ಷಯ್ಯನವರು, ಕರ್ಣಾಟಕ ರೈತ ಸಂಘದ ಶಾಖೆಯಾಗಿ ಸ್ಥಾಪನೆಯಾಗಿರುವ ಈ ಸಂಘಕ್ಕೆ ಸರ್ವರೂ ಎಲ್ಲಾ ವಿಧವಾದ ಬೆಂಬಲ ನೀಡಬೇಕೆಂದು ಕೋರಿದರು.

ಶ್ರೀ ಎಚ್. ಪಿ. ಲಿಂಗಪ್ಪ ಗೌಡ್ರು ಸರ್ವರಿಗೂ ವಂದನೆಗಳನ್ನು ಸಮರ್ಪಿಸಿದರು.

ಕುಣಿಗಲ್

ಕುಣಿಗಲ್ ತಾಲ್ಲೂಕ್ ರೈತರ ಬಹಿರಂಗ ಸಭೆಯು ತಾ. 25—12—57 ರಂದು ಟಿ. ಎನ್. ಮಾಸ್ತಿ ಗೌಡರ ಅಧ್ಯಕ್ಷತೆಯಲ್ಲಿ ನಡೆಯಿತು ತುಮುಕೂರು ಜಿಲ್ಲಾ ರೈತ ಸಂಘದ ಅಧ್ಯಕ್ಷರಾದ ಕೆ.ವಿ. ಕೃಷ್ಣಸ್ವಾಮಿಯವರು ಮತ್ತು ಕುಣಿಗಲ್ ತಾಲ್ಲೂಕು ರೈತ ಸಂಘದ ಕಾರ್ಯದರ್ಶಿಯವರಾದ ಚಿಕ್ಕಣ್ಣ ಗೌಡರು, ಶ್ರೀ ವೆಂಕಟಪ್ಪನವರು ಭೂಮಾಲಿಕರು ರೈತರನ್ನು ಜಮೀನಿನಿಂದ ಹೊರದೂಡುವುದನ್ನು ಖಂಡಿಸಿ ಮಾತನಾಡಿದರು. ಶ್ರಿ ಆರ್. ರಾಮಣ್ಣನವರಿಂದ ವಂದನಾರ್ಪಣೆಯಾಯಿತು.

ಮಂಡ್ಯ ಜಿಲ್ಲೆ

ಕರ್ನಾಟಕ ಪ್ರಾಂತ ರೈತ ಸಂಘದ ಉಪ ಕಾರ್ಯದರ್ಶಿ ಶ್ರೀ ಎಂ. ಎನ್. ಉಗ್ರಪ್ಪ ಮತ್ತು ಶ್ರೀ ತಿಮ್ಮೇ ಗೌಡರು ದಶಂಬರ ತಾ 24ರಂದು ಮೇಳಾಪುರದಲ್ಲೂ ತಾ 25ರಂದು ಮಹದೇವಪುರ ಮತ್ತು ಮಂಡ್ಯ ಕೊಪ್ಪಲಲ್ಲೂ ರೈತರ ಸಭೆಗಳನ್ನು ಉದ್ದೇಶಿಸಿ, ಒಟ್ಟು ಉತ್ಪತ್ತಿಯ $\frac{1}{3}$ ಭಾಗ ಗುತ್ತಿಗೆ ಎಂಬ ನಿಯಮವನ್ನು ಜಾರಿಗೆ ತರಲು ರೈತರು ಒಗ್ಗಟ್ಟಾಗಿ ಪ್ರಯತ್ನಿಸಬೇಕೆಂದು ವಿನಂತಿಸಿ ಭಾಷಣ ಮಾಡಿದರು. ರೈತರು ಕರ್ನಾಟಕ ಪ್ರಾಂತ ರೈತ ಸಂಘದ ಸದಸ್ಯರಾಗಬೇಕೆಂದು ಕೇಳಿಕೊಂಡರು. ಮಹದೇವಪುರದ ಸಭೆಯಲ್ಲಿ ಶ್ರೀರಂಗ ಪಟ್ಟಣದ ಮಾಜಿ ಪಟೇಲ ಶ್ರೀ ಬೋರೇಗೌಡರೂ ಉಪಸ್ಥಿತರಿದ್ದರು.

ಕರೀಪುರ ಎಂಬ ಗ್ರಾಮದಲ್ಲಿ ಜ| ಸರ್ಕಾರ್ ಖಾನ್ ದುರಾನಿ ಎಂಬ ಜಮೀನ್ದಾರರು ಅವರ $1\frac{1}{2}$ ಎಕ್ರೆ ಜಮೀನನ್ನು ಗುತ್ತಿಗೆ ಮಾಡುವ ಶ್ರೀ ಮಂಜಶೆಟ್ಟಿ ಎಂಬವರನ್ನು ಬಲವಂತದಿಂದ ಜಮೀನಿನಿಂದ ಹೊರ ಹಾಕಿರುವುದಾಗಿ ತಿಳಿದುಬಂದಿದೆ. ಆ ಗ್ರಾಮದ ರೈತರ ಒಂದು ಸಭೆಯು ತಾ 26ರಂದು ಜರುಗಿ ರೈತನ ಮೇಲೆ ನಡೆದಿರುವ ಬಲಾತ್ಕಾರವನ್ನೂ ಅನ್ಯಾಯವನ್ನೂ ಖಂಡಿಸಲಾಗಿದೆ. ಜಮೀನನ್ನು ರೈತನಿಗೆ ವಾಪಾಸು ಕೊಡುವಂತೆ ಜಮೀನ್ದಾರರನ್ನು ಕೇಳಿಕೊಳ್ಳುವ ಠರಾವು ಸಭೆಯಲ್ಲಿ ಸರ್ವಾನುಮತದಿಂದ ಅಂಗೀಕರಿಸಲ್ಪಟ್ಟಿದೆ.

ಗೌರಿಬಿದನೂರು

ಸಹಕಾರ ಸಂಸ್ಥೆಯಲ್ಲಿ ಅವ್ಯವಸ್ಥೆ

ತಾ. 26—12—57ರಲ್ಲಿ ಶ್ರೀ ಅಶ್ವತ್ಥನಾರಾಯಣ ಸ್ವಾಮಿ ಕೊ-ಆಪರೇಟಿವ್ ಸೊಸೈಟಿ ಲಿ., ಡೈರೆಕ್ಟರುಗಳಾದ ಕೆ. ರತ್ನಯ್ಯನವರು, ಎನ್. ಪಾಪಯ್ಯನವರು, ಕೆ. ಅನಂತರಾಮಯ್ಯ ಶೆಟ್ಟರು, ಕೆ. ಮುದ್ದೇಗೌಡರು, ಕೆ. ಆರ್. ಹನುಮಂತಯ್ಯ ಶೆಟ್ಟರು ಸೊಸೈಟಿಯ ಆಗುಹೋಗುಗಳನ್ನು ನೋಡಲಿಕ್ಕಾಗಿ ಹೋದಾಗ್ಯೆ ಹಲವಾರು ಲೋಪದೋಷಗಳು ಕಂಡುಬಂದುವು.

ಸುಮಾರು ರೂ. 1000 ಬೆಲೆ ಬಾಳುವ 234 ಇದ್ದಲು ಮೂಟೆಗಳನ್ನು ತಾರೀಕು 25—12—57 ಸಾಯಂಕಾಲ 6 ಘಂಟೆಯಿಂದ 8 ಘಂಟೆ ಒಳಗೆ ಮಾರಿರುತ್ತೀವೆ ಎಂದು ಹೇಳಿರುತ್ತಾರೆ. ಇದಕ್ಕೆ Retail Sales Cash Bills ಇಲ್ಲ. ಮೊಬಲಗು ಸಹ ಇಲ್ಲ. ಗೊಡೌನ್‌ನಲ್ಲಿ ನೋಡಲು ಮೂಟೆಗಳು ಸಹಇಲ್ಲ.

ಸೆಕ್ರೆಟರಿಯವರು ರೂ. 290 ಖಜಾಂಚಿಯವರ ಹೆಸರಿಗೆ ಖರ್ಚು ಹಾಕಿರುತ್ತಾರೆ. ಇದನ್ನು ಖಜಾಂಚಿಯವರು ತೆಗೆದುಕೊಂಡಿರುವುದಕ್ಕೆ ದಾಖಲೆ ಇಲ್ಲ.

ಹಾಲಿನ ಬಿಕರಿ ಲೆಕ್ಕ ತಾ. 18ರಿಂದ 26—12—57ರ ವರೆಗೂ ಬರೆದಿಲ್ಲ, ಕ್ಯಾಷ್ ಸಹ ಇಲ್ಲ. ಇದು ಸ್ವಂತಮನೆ ಆಡಳಿತವೊ, ಸಹಕಾರ ಸಂಘವೋ ತಿಳಿಯದು.

ಮೈಸೂರು ಶಾಸನ ಸಭಾ ಅಧ್ಯಕ್ಷರಾದ ಶ್ರೀಮಾನ್ ಪಾಲಹಳ್ಳಿ ಸೀತಾರಾಮಯ್ಯ ಬಿ.ಎ.ಎಲ್‌ಎಲ್.ಬಿ.,ರವರು ತಾರೀಕು 25—12—57 ಮಧ್ಯಾಹ್ನ ಪುರಭವನದಲ್ಲಿ 3 ಘಂಟೆಗೆ "ಸಹಕಾರ ಸಂಘಗಳ ಗೌರವ ಅಧಿಕಾರಿಗಳ ಒಂದು ವಾರದ ಶಿಕ್ಷಣ ಕೇಂದ್ರವನ್ನು ಉದ್ಘಾಟಿಸಿದ್ದು ಸರಿಯಷ್ಟೆ. ಶ್ರೀ ಅಶ್ವತ್ಥನಾರಾಯಣ ಸ್ವಾಮಿ ಕೊ-ಆಪರೇಟಿವ್ ಸೊಸೈಟಿಯ ಸೆಕ್ರೆಟರಿಗಳು, ಇನ್ಸ್‌ಪೆಕ್ಟರರು, ಪ್ರೆಸಿಡೆಂಟರೂ, ಖಜಾಂಚಿಯವರು, ಪಾಲಹಳ್ಳಿ ಸೀತಾರಾಮಯ್ಯನವರ ಜೊತೆಯಲ್ಲಿಯೆ ಸಾಯಂಕಾಲ 7 ಘಂಟೆಯ ವರೆಗೂ ಇದ್ದು ಬೀಳ್ಕೊಟ್ಟಿರುತ್ತಾರೆ. ಹೀಗಿರುವಲ್ಲಿ 234 ಮೂಟೆಗಳನ್ನು ಯಾವ ಕಾಲದಲ್ಲಿ ಮಾರಿದ್ದಾರೆಂಬುದು ಸಂಶಯಾಸ್ಪದವಾಗಿದೆ.

ಕಾಂಗ್ರೆಸ್ಸಿಗರಿಂದ ಜನರಿಗೆ ಕಿರುಕುಳ

ಕಳೆದ ಸಾರ್ವತ್ರಿಕ ಚುನಾವಣೆಯಲ್ಲಿ ಕಾಂಗ್ರೆಸಿಗೆ ಬಹುಮತ ನೀಡಲಿಲ್ಲವೆಂದು ಶಿಕ್ಷಿಸಲು ಬಡಜನತೆಯ ಮೇಲೆ ಸುಳ್ಳು ಆರೋಪಣೆ ಹೊರಿಸಿ ಗೌರಿಬಿದನೂರಿನ ಕೆಲವು ಕಾಂಗ್ರೆಸ್ಸಿಗರು ಸರಕಾರಕ್ಕೆ ಅರ್ಜಿ ಕೊಟ್ಟಿರುತ್ತಾರೆ. ಸರ್ಕಾರದವರು ಆ್ಯಂಟಿ ಕರೆಪ್ಷನ್ ಖಾತೆಯ ಕೆಲವರನ್ನು 23—12—57ರಲ್ಲಿ ಪರಿಶೀಲನೆಗಾಗಿ ಕಳುಹಿಸಿ ಯಾವುದೋ ಸುಳ್ಳು ನೆಪ ಮುಂದೆ ಹಾಕಿ ಇಲ್ಲಿನ ಬಡಜನತೆಯನ್ನು ಕಿರುಕುಳಕ್ಕೊಳಪಡಿಸಿದ್ದಾರೆ. ಕಾಂಗ್ರೆಸ್ ಪ್ರಭಾವಶಾಲಿ ಸದಸ್ಯರುಗಳು ಬಡನೌಕರರ ಮೇಲೆ ಕೊಟ್ಟಿರುವ ಅರ್ಜಿ ಪ್ರಕಾರ ತನಿಖೆ ನಡೆಸಿರುತ್ತಾರೆ. ಪ್ರಜಾಪ್ರಭುತ್ವದಲ್ಲಿ ಪ್ರಜೆಗಳಿಗೆ ತಮಗೆ ಇಷ್ಟಬಂದ ಪಕ್ಷಕ್ಕೆ ಮತ ಕೊಡುವ ಅಧಿಕಾರವಿದ್ದರೂ ಈ ಪುಢಾರಿಗಳು ಸರ್ವಾಧಿಕಾರತ್ವ ಚಲಾಯಿಸುತ್ತಿದ್ದಾರೆ. ಇದು ಯಾವ ಪ್ರಜಾಪ್ರಭುತ್ವ ರೀತಿಯಪ್ಪ!

—ಗುಪ್ತ

ಓದುಗರ ಓಲೆ

ಬೇಲಿ ಎದ್ದು ಹೊಲ ಮೇದೊಡೆ?

ಭದ್ರಾವತಿ ಮುನಿಸಿಪಲ್ ವಿಭಾಗದಲ್ಲಿ ನಡೆಯುತ್ತಿರುವ ಅಕ್ರಮ ವರ್ತನೆಗಳಿಗೆ ಲೆಕ್ಕವಿಲ್ಲ. ಸಾಮಾನ್ಯ ಮನುಷ್ಯ ಕಾನೂನುಗಳನ್ನು ಅತಿಕ್ರಮಿಸಿದರೆ ಅದನ್ನು ಶಿಕ್ಷಿಸಲಾಗುತ್ತದೆ. ಆದರೆ ಜವಾಬ್ದಾರಿಯುತರು ಬೇಜವಾಬ್ದಾರಿಯಿಂದ ನಡೆದರೆ ಅದನ್ನು ಮುನಿಸಿಪಲ್ ಅಧಿಕಾರಿವರ್ಗ ಗಮನಿಸುವುದೇ ಇಲ್ಲ.

ಕಳೆದ 15 ವರ್ಷದಿಂದ ಮುನಿಸಿಪಲ್ ಕೌನ್ಸಿಲರ್ ಆಗಿರುವ ತಿಮ್ಮಯ್ಯನವರು ಹೊಸದಾಗಿ ಬಾಬಾಸಾಬ್ ಲೈನ್‌ನಲ್ಲಿ ಕಟ್ಟುತ್ತಿರುವ ಮನೆಯು ಮುನಿಸಿಪಲ್ ಕಾನೂನಿನಂತೆ ಇದೆಯೆ? ಸಾಮಾನ್ಯವಾಗಿ ಕಟ್ಟಡವು ಒಳಚರಂಡಿಗೆ ಒಂದೂವರೆ ಅಡಿಯಾದರೂ ಬಿಟ್ಟಿರಬೇಕೆಂಬ ನಿಯಮವಿದೆ ಆದರೆ ಒಳಚರಂಡಿಗೆ ಪಕ್ಕದಲ್ಲಿಯೇ ಕಟ್ಟಡ ಎಬ್ಬಿಸುತ್ತಿದ್ದಾರೆ ಈ ಕೌನ್ಸಿಲರ್. ಇವರು ಹಿಂದೊಮ್ಮೆ ಮುನಿಸಿಪಲ್ ಕೌನ್ಸಿಲ್ ಅಧ್ಯಕ್ಷರಾಗಿದ್ದಾಗ ಇಂತಹ ಹಲವಾರು ಅಪರಾಧಗಳು ನಡೆದಿದ್ದು, ಅವರೆಲ್ಲರನ್ನೂ ಕಾನೂನಿನ ಕ್ರಮಕ್ಕೆ ಒಳಪಡಿಸಲು ಈ ಅಧ್ಯಕ್ಷರು ಕಿಂಚಿತ್ ಸಮಯ ವಿಳಂಬ ಮಾಡಲಿಲ್ಲ. ಆದರೆ ಈಗ ಖುದ್ದಾಗಿ ತಾವೇ ಅನ್ಯಾಯ ನಡೆಸಿದರೆ! ಕೇಳುವ ಮುನಿಸಿಪಾಲಿಟಿಯಲ್ಲಿ ಇವರ ಕಾಂಗ್ರೆಸ್ ಪಕ್ಷವೇ ಬಹುಮತದ್ದಾಗಿದೆ. ಅಂತೂ 'ಬೇಲಿ ಎದ್ದು ಹೊಲ ಮೇದೊಡೆ' ನಾವೇನು ಮಾಡಬಹುದೆಂದು ಪೌರರು ಚಿಂತಿಸುವಂತಾಗಿದೆ.

ಇನ್ನು ಮುಂದಾದರೂ ಇಂತಹ ಜವಾಬ್ದಾರಿಯುತ ವ್ಯಕ್ತಿಗಳು ಈ ರೀತಿಯ ಅಕ್ರಮ ನಡೆಸಿ, ಇತರ ಪೌರರಿಗೆ ಈ ಕಾನೂನು ಘಾತುಕ ಮೇಲ್ಪಂಕ್ತಿ ಹಾಕದಂತಾಗಲೆಂದು ಹಾರೈಸುವ.

—ಭದ್ರಾವತಿ ಪೌರ

ಕಾಂಗ್ರೆಸ್ಸಿನ ಅಳಿವಿಗೆ ಕಾರ್ಪೊರೇಷನ್ ಚುನಾವಣೆ ನಾಂದಿಯೇ?

1957ರ ಡಿಸೆಂಬರ್ 22ರಂದು ನಡೆದ ಬೆಂಗಳೂರು ನಗರದ ಕಾರ್ಪೊರೇಷನ್ ಚುನಾವಣೆಯು ಎಲ್ಲರ ಗಮನವನ್ನು ಸೆಳೆದಿದೆ. ಕಾಂಗ್ರೆಸ್ಸು....ಕಾಂಗ್ರೆಸ್ಸು ಎಂದು ಹೇಳಿಕೊಂಡು ಓಡಾಡುವ ಪುಢಾರಿಗಳ ಬಾಯಿ ಮುಚ್ಚಿಸಿದೆ. ಈ ಚುನಾವಣೆ ಕಾಂಗ್ರೆಸಿನ ಅಳಿವಿಗೆ ಮೊದಲನೇ ನಾಂದಿ. ಜನಸೇವೆ ಮಾಡಲು ಹೊರಟವರು ತಮ್ಮ ಸ್ವಾಭಿಮಾನಕ್ಕಾಗಿ ಹೊಡೆದಾಡಿ, ಜನರ ಮಮತೆಯನ್ನುಕಳೆದುಕೊಂಡಿದ್ದಾರೆ. ಎಂಬುದಕ್ಕೆ ಈ ಚುನಾವಣೆಯೇ ಒಂದು ನಿದರ್ಶನವೆಂದು ಹೇಳಿದರೆ ಅತಿಶಯೋಕ್ತಿಯಾಗಲಾರದು. ಸುಮಾರು 1,80,000 ಮತದಾನ ಮಾಡಿದವರಲ್ಲಿ, ಕೇವಲ 40,000 ಮಂದಿ ಮಾತ್ರ ಮತವಿತ್ತಿದ್ದಾರೆಂದರೆ, ಈ ಸಂಸ್ಥೆಯ ಬಗ್ಗೆ ಜನತೆಗಿರುವ ಅಭಿಮಾನ ಸ್ಪಷ್ಟವಾಗುತ್ತದೆ ಮತ್ತು ಕಾಂಗ್ರೆಸ್ಸಿನ ಜನಪ್ರಿಯತೆ ಎಷ್ಟರಮಟ್ಟಿಗೆ ಇದೆ ಎಂಬುದರ ಅರಿವಾಗುತ್ತದೆ. ಇದರಲ್ಲಿಯೂ ಕೂಡ ಅವರ ಶ್ರೀಮಂತಿಕೆ ದಬ್ಬಾಳಿಕೆಗಳಿಗೆ, ಹೆದರಿ ಮತವಿತ್ತಿರುವುದು ಶೋಚನೀಯವೇ ಸರಿ. ಇಂದು ಪ್ರಯೋಗದಲ್ಲಿರುವ ಪ್ರಜಾಪ್ರಭುತ್ವದಲ್ಲಿ ಅಧಿಕಾರ ಮತ್ತು ಐಶ್ವರ್ಯಕ್ಕೆ ಬೆಲೆ ಹೆಚ್ಚು ಎನ್ನುವುದು ತಿಳಿದೇ ಇದೆ. ಅದರಲ್ಲೂ ಎಂದೂ ಮೋಟಾರು-ಕಾರುಗಳಲ್ಲಿ ಕೂರದೇ ಇರುವ ಜನರನ್ನು ಮೋಟಾರು-ಕಾರುಗಳಲ್ಲಿ ಕೂರಿಸಿ, ಮತಗಳನ್ನು ಒಟ್ಟಾರೆಯಾಗಿ ಮತದಾರರಿಂದ ಕ್ರಯಕ್ಕೆ ಪಡೆದು, ತನ್ನ ಅಲ್ಪ ಬಹುಮತವನ್ನು ಪಡೆಯಲಾಗಿದೆ.

ತಮ್ಮ ಜೀವನವೇ ಜನಸೇವೆಗೆ ಎಂದು ಪ್ರದರ್ಶಿಸಿ ಚುನಾವಣಾ ಕಾಲದಲ್ಲಿ ಮಾತ್ರ ಲಕ್ಷಗಟ್ಟಲೆ ಹಣ ತೆತ್ತು ಪಡೆದ ಮತಗಳಿಗೂ ಬೆಲೆ ಇದೆ ಎಂದರೆ ಅರ್ಥ

(೬ನೇ ಪುಟ ನೋಡಿ)

ಗುಲ್ಬರ್ಗಾ ಜಿಲ್ಲಾ ಕಮ್ಯೂನಿಸ್ಟ್ ಪಾರ್ಟಿ ಸಮ್ಮೇಳನ

ಗುಲ್ಬರ್ಗಾ ಜಿಲ್ಲೆಯ ಕಮ್ಯೂನಿಸ್ಟ್ ಪಕ್ಷದ ಸಮ್ಮೇಳನವು ಡಿಸೆಂಬರ್ 22 ಮತ್ತು 23ನೇ ತಾರೀಖು ಚಿತ್ತಾಪುರದಲ್ಲಿ ನಡೆಯಿತು. ಜಿಲ್ಲೆಯ ವಿವಿಧ ಭಾಗಗಳಿಂದ ಸುಮಾರು 60 ಪ್ರತಿನಿಧಿಗಳು ಸಮ್ಮೇಳನದಲ್ಲಿ ಭಾಗವಹಿಸಿದ್ದರು. ಸಭೆಯ ಕಾರ್ಯಕಲಾಪಗಳನ್ನು ನಡೆಸಲು ಆರು ಮಂದಿಯ ಪ್ರಿಸೀಡಿಯಂನ್ನು ಚುನಾಯಿಸಲಾಯಿತು.

ಜಿಲ್ಲೆಯಲ್ಲಿ ಅಂದಿನವರೆಗೆ ಪಾರ್ಟಿಯು ನಡೆಸಿದ ಕಾರ್ಯಗಳು ಮತ್ತು ಮುಂದೆ ನಡೆಸಬೇಕಾಗಿರುವ ಕೆಲಸಗಳ ಕಾರ್ಯಕ್ರಮಗಳನ್ನೊಳಗೊಂಡ ವರದಿಯನ್ನು ಜಿಲ್ಲಾ ಪಾರ್ಟಿಯ ಕಾರ್ಯದರ್ಶಿಯಾದ ಕಾ॥ ಅಬ್ದುಲ್ ಕರೀಂರವರು ಪ್ರತಿನಿಧಿಗಳ ಮುಂದಿಟ್ಟರು. ಇವರ ಮೇಲೆ ನಡೆದ ಚರ್ಚೆಯಲ್ಲಿ ಸುಮಾರು 20 ಮಂದಿ ಭಾಗವಹಿಸಿದ್ದರು.

ಕಮ್ಯೂನಿಸ್ಟ್ ಪಾರ್ಟಿ ಕರ್ನಾಟಕ ಪ್ರಾಂತ ಸಮಿತಿಯ ಕಾರ್ಯದರ್ಶಿಯಾದ ಕಾ॥ ಎಸ್. ಎಲ್. ಉಪಾಧ್ಯಾಯರು, ಇಂದಿನ ರಾಜಕೀಯ ಪರಿಸ್ಥಿತಿಯ ಪರಿಚಯವಿತ್ತು, ಪಾರ್ಟಿಯ ಕೇಂದ್ರ ಸಮಿತಿಯು ಸೂಚಿಸಿರುವ ಪಾರ್ಟಿಯ ರಚನಾತ್ಮಕ ಬದಲಾವಣೆಗಳನ್ನು ವಿವರಿಸಿದರು.

ಮಂಗಳೂರಲ್ಲಿ ನಡೆಯಲಿರುವ ಪಾರ್ಟಿಯ ಪ್ರಾಂತ ಸಮ್ಮೇಳನಕ್ಕೆ 8 ಮಂದಿ ಪ್ರತಿನಿಧಿಗಳನ್ನು ಚುನಾಯಿಸಲಾಯಿತು. ಮತ್ತು ಕಾಮ್ರೇಡರುಗಳಾದ ಅಬ್ದುಲ್ ಕರೀಂ, ಗಂಗಾಧರ ನಮೋಶಿ, ಶ್ರೀನಿವಾಸ ಗುಡಿ, ಶರಣಪ್ಪ ಭೈರಿ ಹಾಗೂ ಶಫಿ – ಉದ್ದೀನ್ ಇವರನ್ನೊಳಗೊಂಡ ಜಿಲ್ಲಾ ಸಮಿತಿಯನ್ನು ಆರಿಸಲಾಯಿತು.

ಜಿಲ್ಲೆಯ ಪ್ರಚಲಿತ ಸಮಸ್ಯೆಗಳಿಗೆ ಸಂಬಂಧಪಟ್ಟ ಹಲವಾರು ನಿರ್ಣಯಗಳನ್ನು ಪಾಸು ಮಾಡಲಾಯಿತು.

ರೈತರ ಮೆರವಣಿಗೆ

ಮಧ್ಯಾಹ್ನದ ಹೊತ್ತಿಗೆ ಪಾರ್ಟಿ ಆಫೀಸಿನಿಂದ ಹೊರಟ, ಹಲವಾರು ಹಳ್ಳಿಗಳಿಂದ ಬಂದ ರೈತರ ಭಾರೀ ಮೆರವಣಿಗೆಯು ಘೋಷಣೆಗಳೊಂದಿಗೆ ಕಪಡಾ ಬಜಾರಿನಲ್ಲಿ ನಡೆದ ಬಹಿರಂಗ ಸಭೆಯನ್ನು ಸೇರಿತು. ಸಭೆಯ ಅಧ್ಯಕ್ಷತೆಯನ್ನು ಕಾ॥ ಅಬ್ದುಲ್ ಕರೀಂರವರು ವಹಿಸಿದ್ದು ಸಭೆಯನ್ನುದ್ದೇಶಿಸಿ, ಕಾಮ್ರೇಡರುಗಳಾದ ಶರಣಪ್ಪಭೈರಿ, ಗಂಗಾಧರ್ ನಮೋಶಿ, ಎಸ್. ಎಲ್. ಉಪಾಧ್ಯಾಯ ಹಾಗೂ ಶಿವಲಿಂಗಪ್ಪ ಹೂಗಾರರವರು ಮಾತನಾಡಿದರು.

ಸಮ್ಮೇಳನದ ನಿರ್ಣಯಗಳು

ಕಳೆದವರು 3ವರ್ಷಗಳಿಂದ ಜಿಲ್ಲೆಯಲ್ಲಿ ಬೆಳೆ ಕೆಟ್ಟಿದ್ದು ರೈತರು ಭಾರಿ ಕಷ್ಟನಷ್ಟಗಳನ್ನು ಎದುರಿಸಬೇಕಾಗಿದೆ. ಈ ವರ್ಷವೂ ಅಫ್ಜಲಪುರ್, ಗುಲ್ಬರ್ಗಾ, ಚಿತ್ತಾಪುರ ಮತ್ತು ಜೇವರ್ಗಿ ತಾಲ್ಲೂಕುಗಳಲ್ಲಿ ಬೆಳೆ ಕೆಟ್ಟಿರುತ್ತದೆ. ಆದರೆ ರೆವಿನ್ಯೂ ಇಲಾಖೆ ಕಳೆದ ವರ್ಷ ಹಾಗು ಈ ವರ್ಷದ ಕಂದಾಯ ವಸೂಲು ಮಾಡಲು ಮುಂದಾಗಿದೆ. ಸರಕಾರವು ಹಳೇ ಬಾಕಿಗೆ ರಿಯಾಯಿತಿ ತೋರುವುದು ಮಾತ್ರವಲ್ಲ, ಎಲ್ಲಿ ಬೆಳೆ ಕೆಟ್ಟದೆಯೋ ಆ ಪ್ರದೇಶಗಳಲ್ಲಿ ವಸೂಲು ಮಾಡುವುದನ್ನು ಕೂಡಲೇ ನಿಲ್ಲಿಸಬೇಕು. ಮತ್ತು ತಕ್ಕಾವಿ ಸಾಲಗಳ ವಸೂಲಿ ನಡೆಸದೆ ಮಾಫಿ ತೋರಬೇಕು. ಅಲ್ಲದೆ ಕಳೆದ ವರ್ಷದ ಹೊಗೇಸೊಪ್ಪಿನ ಮೇಲಿನ 'ಸೆಸ್ಸ್' ವಸೂಲಿ ನಿಲ್ಲಿಸಿ, ರೈತರಿಗೆ ಪರಿಹಾರ ಒದಗಿಸಬೇಕೆಂದು ಈ ಸಮ್ಮೇಳನವು ಸರ್ಕಾರವನ್ನು ಒತ್ತಾಯಿಸುತ್ತದೆ.

ಜಿಲ್ಲೆಯಲ್ಲಿ ಹೆಚ್ಚಿನ ಕೆರೆಗಳು ಹಾಳು ಬಿದ್ದಿವೆ. ಇದೂ ಕೂಡಾ ಬೆಳೆಗಳ ನಷ್ಟಕ್ಕೆ ಕಾರಣೀಭೂತವಾಗಿದೆ. ಆದ ಕಾರಣ ಸರ್ಕಾರವು ಈ ಕೂಡಲೇ ಲಾಡ್ಲಾಪುರ, ಹೆಲ್ಲೊಳ್ಳಿ, ಗುಂಡಳ್ಳಿ, ಶಹಾಪುರ ಮೊದಲಾದೆಡೆಗಳಲ್ಲಿರುವ ಕೆರೆಗಳನ್ನು ದುರಸ್ತಿಗೊಳಿಸಬೇಕು ಮತ್ತು ಹೊಸ ಕೆರೆಗಳನ್ನು ಕಟ್ಟಿಸಿ ರೈತರಿಗೆ ಸಹಾಯ ಒದಗಿಸಬೇಕು.

ಗುಲ್ಬರ್ಗಾ ತಾಲ್ಲೂಕಿನ ಮರ್ತೂರಿನಲ್ಲಿ ಪ್ರತಿಗಾಮಿ ಶಕ್ತಿಗಳು ಕಾರಸ್ಥಾನ ನಡೆಸಿ, ನಿರಪರಾಧಿಗಳಾದ ನಮ್ಮ ಪಾರ್ಟಿಯ 25 ಸದಸ್ಯರ ಮೇಲೆ ಕೊಲೆಯ ಆಪಾದನೆ ಹೊರಿಸಿದ್ದು, ಅವರನ್ನು ಬಂಧಿಸಲಾಗಿದೆ. ಸರ್ಕಾರವು ಸ್ವಲ್ಪವೂ ವಿಳಂಬ ತೋರದೆ ಇವರನ್ನು ಬಿಡುಗಡೆ ಮಾಡಬೇಕು. ಈ ಸಮ್ಮೇಳನವು ಜೈಲಿನಲ್ಲಿರುವ ಕಾಮ್ರೇಡುಗಳಿಗೆ ತನ್ನ ಅನುತಾಪವನ್ನು ತೋರುತ್ತದೆ.

ಜಿಲ್ಲೆಯಲ್ಲಿ ರಸ್ತೆಗಳ ನಿರ್ಮಾಣಕ್ಕಾಗಿ ರೈತರ ಜಮೀನುಗಳನ್ನು ವಶಪಡಿಸಿಕೊಂಡಿದ್ದು, ಅವರಿಗೆ ಸೂಕ್ತ ಪರಿಹಾರ ಕೊಡುವುದನ್ನು ವಿಳಂಬಗೊಳಿಸುತ್ತಿದೆ, ಸರಕಾರ ಕೂಡಲೇ ಪರಿಹಾರ ಒದಗಿಸಬೇಕು, ಭೂಕಂದಾಯದ ಪ್ರಶ್ನೆಯನ್ನು ಪುನರ್ ಪರ್ಯಾಲೋಚಿಸಬೇಕು.

ಸಾವಿರಾರು ಎಕರೆ ಬಂಜರು ಜಮೀನುಗಳು ಜಿಲ್ಲೆಯಲ್ಲಿ ಉಪಯೋಗಿಸಲಾರದೆ ಕೊಳೆಯುತ್ತಿದ್ದು, ಇವು ಭೂಸ್ವಾಮಿಗಳ ವಶಕ್ಕೆ ಹೋಗುತ್ತಿರುವುದನ್ನು ತಪ್ಪಿಸಿ ಇವುಗಳನ್ನು ಭೂಹೀನ ರೈತರಿಗೆ ಹಂಚಬೇಕು. ಜಿಲ್ಲೆಯಲ್ಲಿ ಪರಿಹಾರ ಒದಗಿಸಲು, ಸಾಲಗಳನ್ನು ನೀಡಲು, ರೈತರಿಗೆ ಸಹಾಯ ನೀಡಲು ಮಾಡುವ ಮಾರ್ಕೆಟ್ ಸಮಿತಿ ಮತ್ತಿತರ ಸಲಹಾ ಸಮಿತಿಗಳಲ್ಲಿ ಕಮ್ಯೂನಿಸ್ಟ್ ಪಾರ್ಟಿಗೂ ರೈತ ಸಂಘಕ್ಕೂ ಪ್ರತಿನಿಧಿತ್ವ ಈಗ ಕೊಡುತ್ತಿಲ್ಲವಾಗಿ ಅದು ಸಿಗುವಂತಾಗಬೇಕು.

ಸರ್ಕಾರದ ನೀತಿಯಿಂದಾಗಿ ಗುಲ್ಬರ್ಗ ಜಿಲ್ಲೆಯ ಬೆಳವಣಿಗೆಯು ಸಾಧಿಸಲ್ಪಡದೆ ಅದು ಹಿಂದೆಯೇ ಉಳಿದಿದೆ ಜಿಲ್ಲೆಯಲ್ಲಿ ವಿದ್ಯಾಭ್ಯಾಸ, ವೈದ್ಯಕೀಯ, ಆರೋಗ್ಯ ಮತ್ತು ರಸ್ತೆ ನಿರ್ಮಾಣ ಕ್ಷೇತ್ರದಲ್ಲಿ, ಅಭಿವೃದ್ಧಿ ಯೋಜನೆಯಲ್ಲಿ ಏನೊಂದು ಕೆಲಸ ಸಾಗದೆ ಜಿಲ್ಲೆಯ ಜನರ ಜೀವನ ಪರಿಸ್ಥಿತಿ ಬಿಗಡಾಯಿಸಿರುತ್ತದೆ. ಈ ಬಾರಿಯೂ ಪಂಚವಾರ್ಷಿಕ ಯೋಜನೆಯಡಿಯಲ್ಲಿ ಗುಲ್ಬರ್ಗಕ್ಷೇತ್ರ ಪಾಲು ಬಹಳ ಅತ್ಯಲ್ಪ. ಸರಕಾರವು ಈ ಅನ್ಯಾಯವನ್ನು ಸರಿಪಡಿಸಿ ಗುಲ್ಬರ್ಗದ ಅಭಿವೃದ್ಧಿ ಕಾರ್ಯ ನಡೆಸಲು ಹೆಚ್ಚಿನ ಪಾಲು ನೀಡುವಂತಾಗಲು ಎಲ್ಲಾ ಪಕ್ಷಗಳ ಸಮ್ಮೇಳನ ಕರೆಯಬೇಕು, ಇದರ ಬಗ್ಗೆ ಜನರು-ಎಲ್ಲಾ ಪಕ್ಷಗಳೂ ಪ್ರತಿಭಟನಾ ಚಳುವಳಿ ಹೂಡಬೇಕು.

ಕೊನೆಯದಾಗಿ ಭೂಸುಧಾರಣೆ ಬಗ್ಗೆ ಜತ್ತಿ ಸಮಿತಿ ವರದಿ ಪ್ರಕಟವಾಗಿ ಎಂಟು ತಿಂಗಳಾದರೂ ಇನ್ನೂ ಪ್ರಾಂತದಲ್ಲಿ ಒಂದು ಸಮಗ್ರವಾದ ಭೂಸುಧಾರಣೆ ತರಲು ಸರಕಾರ ಹಿಂಜರಿಯುತ್ತಿದೆ. ಕಾರಣವಾಗಿ ಸಾವಿರಾರು ಗಟ್ಟಲೆ ರೈತರನ್ನು ಒಕ್ಕಲೆಬ್ಬಿಸಲಾಗುತ್ತಿದೆ. ಈಗಿರುವ ಕಾನೂನುಗಳಿಂದ ರೈತರ ಹಿತ ಸಾಧಿಸಲ್ಪಡುವುದಿಲ್ಲ. ದೇಶದ ಪ್ರಗತಿಗೆ ಭೂಸುಧಾರಣೆ ಅತ್ಯಾವಶ್ಯಕವಾಗಿದ್ದು, ಸರಕಾರವು ರೈತರ ಹಿತವನ್ನು ನ್ಯಾಯವಾಗಿ ರಕ್ಷಿಸುವ ಒಂದು ಸಮಗ್ರ ಭೂಸುಧಾರಣೆಯನ್ನು ತಡಮಾಡದೆ ಜಾರಿಗೆ ತರಬೇಕು. ಇವು, ಹಾಗೂ ಕೇರಳದ ಸರ್ಕಾರವನ್ನು ಅಭಿನಂದಿಸುವ ಬಗ್ಗೆ, ಕಾಶ್ಮೀರದ ಬಗ್ಗೆ, ವಿಶ್ವಶಾಂತಿಯ ಬಗ್ಗೆ ನಿರ್ಣಯಗಳು ಸಮ್ಮೇಳನದಲ್ಲಿ ಮಂಡಿಸಲ್ಪಟ್ಟು ಸಮಗ್ರವಾದ ಚರ್ಚೆ ನಡೆದು ಸ್ವೀಕೃತವಾದುವು.

ಪ್ರಾಂತೀಯ ಸುದ್ದಿ ಸಂಗ್ರಹ

ಕುಣಿಗಲ್

ಕುಣಿಗಲ್ ತಾಲ್ಲೂಕು ಕಮ್ಯೂನಿಸ್ಟ್ ಪಾರ್ಟಿ ಸದಸ್ಯರು ತಾ॥ 19-12-57 ರಂದು ಸಭೆ ಸೇರಿ, ಈ ಕೆಳಕಂಡ ನಿರ್ಣಯಗಳನ್ನು ಚರ್ಚಿಸಿ, ಸರ್ವಾನುಮತದಿಂದ ಸ್ವೀಕರಿಸಿದರು.

ಪಾರ್ಟಿಯ ಕಾರ್ಡುಗಳನ್ನು ಪಡೆದಿರುವ ಪಾರ್ಟಿ ಸದಸ್ಯರು ಸಾಮೂಹಿಕವಾಗಿ ವರ್ತಿಸುವುದು ಮತ್ತು ರೈತ-ಕಾರ್ಮಿಕ ಸಂಘಟನೆಗಳನ್ನು ಕಟ್ಟುವುದು ಮತ್ತು ಈ ಬಗ್ಗೆ ತಪ್ಪದೆ ಪಾರ್ಟಿ ಆಫೀಸಿಗೆ ತಿಂಗಳಿಗೊಮ್ಮೆ ವರದಿ ಒಪ್ಪಿಸಬೇಕೆಂದೂ, ಜಿಲ್ಲಾ ಪಾರ್ಟಿ ಮತ್ತು ರೈತ ಸಂಘಕ್ಕೆ ಕೊಡಬೇಕಾದ ವಾರ್ಷಿಕ ಸಹಾಯ 310 ರೂ.ಗಳನ್ನು 1958 ಮಾರ್ಚಿ ತಿಂಗಳಿನೊಳಗಾಗಿ ಕುಣಿಗಲ್ ಪಾರ್ಟಿ ಘಟಕ ತಪ್ಪದೆ ಸಲ್ಲಿಸಬೇಕೆಂದು ಹಾಗೂ ಈ ಎಲ್ಲಾ ಕರ್ತವ್ಯ ನಿರ್ವಹಣೆಯು ಸದಸ್ಯರ ಶಿಸ್ತು ಮತ್ತು ಪ್ರಾಮಾಣಿಕತೆಯಿಂದಲೇ ಯಶಸ್ವಿಯಾಗುವುದೆಂದು, ಸರ್ವಾನುಮತದ ನಿರ್ಣಯಗಳಾದುವು.

ಪಾರ್ಟಿ ಸಾಹಿತ್ಯವನ್ನು ತಪ್ಪದೆ ಓದಿ ತಿಳಿದುಕೊಳ್ಳುವುದಲ್ಲದೆ, ಅವುಗಳ ಮಾರಾಟ ಮತ್ತು ಪ್ರಚಾರ ಕಾರ್ಯದಲ್ಲಿ ಸದಸ್ಯರೆಲ್ಲರೂ ಹೆಚ್ಚಿನ ಉತ್ಸಾಹ ತಾಳಿ ದುಡಿಯಬೇಕೆಂದು ತೀರ್ಮಾನವಾಯಿತು.

ಕುಣಿಗಲ್ ತಾಲ್ಲೂಕು ಪಾರ್ಟಿ ಶಾಖೆಗೆ ಕಾ॥ ಆರ್. ರಾಮಣ್ಣನವರನ್ನು ಕಾರ್ಯದರ್ಶಿಗಳನ್ನಾಗಿ ಚುನಾಯಿಸಲಾಯಿತು.

ಗೂಳೂರು

ಬಾಗೇಪಲ್ಲಿ ತಾಲ್ಲೂಕು ಗೂಳೂರು ಹೋಬಳಿ ಮದ್ದಲಕಾನೆ ಎಂಬ ಗ್ರಾಮದಲ್ಲಿ ಕಳೆದ 26ನೆ ತಾ॥ ಸಂಜೆ ಇದೇ ಗ್ರಾಮದ ಕಮ್ಯೂನಿಸ್ಟ್ ಪಾರ್ಟಿ ಆಶ್ರಯದಲ್ಲಿ ಸಭೆ ನಡೆಯಿತು. ಸಭೆಗೆ ಕಾ॥ ಚಿನ್ನರಸಿಂಹ ರೆಡ್ಡಿಯವರು ಅಧ್ಯಕ್ಷತೆ ವಹಿಸಿದ್ದರು. ಬಾಗೇಪಲ್ಲಿ ಪುರಸಭಾಧ್ಯಕ್ಷರು ಮತ್ತು ತಾಲ್ಲೂಕು ಕಮ್ಯೂನಿಸ್ಟ್ ಪಾರ್ಟಿ ಕಾರ್ಯದರ್ಶಿಗಳೂ ಆದ ಎ. ವಿ. ಅಪ್ಪಸ್ವಾಮಿ ರೆಡ್ಡಿಯವರು ಮಾತನಾಡುತ್ತಾ ಕಾಂಗ್ರೆಸ್ಸಿನವರು ಹರಿಜನರಿಗೆ ಮತ್ತು ಬಡ ರೈತರಿಗೆ ಇತ್ತ ಆಶ್ವಾಸನೆಗಳು, ಅವು ಕಾರ್ಯರೂಪಕ್ಕೆ ತರದೆ ವಿಫಲವಾದದ್ದು ಮತ್ತು 10 ವರ್ಷಗಳ ಕಾಂಗ್ರೆಸ್ ಪಾಲನೆಯ ಕಾಲದಲ್ಲಿ ಆಗದ ಕೆಲಸಗಳನ್ನು ಈಗ ಕಮ್ಯೂನಿಸ್ಟರು ಅಧಿಕಾರಕ್ಕೆ ಬಂದಿರುವ ಕೇರಳದಲ್ಲಿ 9 ತಿಂಗಳು ಅವಧಿಯಲ್ಲೇ ಮಾಡಿ ತೋರಿಸಿದ್ದಾರೆ ಎಂದೂ ಮತ್ತು ಈಗ ನಮ್ಮ ಮುಂದಿರುವ ಜತ್ತಿ ಸಮಿತಿಯಿಂದಾಗುವ ಅನುಕೂಲಗಳೇನು, ಅನಾನುಕೂಲಗಳೇನು ಎಂಬುದನ್ನು ವಿಶದವಾಗಿ ತಿಳಿಸಿದರು. ಕಾ॥ ಎಂ. ಪಿ. ಆದಿನಾರಾಯಣರೆಡ್ಡಿಯವರು ಮಾತನಾಡುತ್ತ, ಈಗ ನಮ್ಮ ಪ್ರದೇಶದಲ್ಲಿ ಸರ್ವೆ ಆಗುವುದರಿಂದ ನಮಗೆ ಬೀಳುವ ಕಂದಾಯಗಳ ಪರಿಣಾಮವಾಗಿ ಹೆಚ್ಚಿನ ಅನಾನುಕೂಲವಾಗುವುದೆಂದು ಹೇಳಿ, ಇದನ್ನು ಎದುರಿಸಲು, ನಾವು ರೈತ ಸಂಘಗಳನ್ನು ಕಟ್ಟಿ, ಸಂಘಟಿತರಾಗಿ ಹೋರಾಡಬೇಕೆಂದೂ, ಕೇರಳದಲ್ಲಿ ಪ್ರಜೆಗಳಿಗೆ ಆಗುತ್ತಿರುವ ಅನುಕೂಲಗಳೇನು ಎಂಬುದನ್ನು ವಿಶದವಾಗಿ ತಿಳಿಸಿದರು.

ಗೂಳೂರು ಅರುಣಾ ಬುರ್ರಕಥಾ ದಳದವರು ಕಾಂಗ್ರೆಸ್ ಮಂತ್ರಿ, ರೈತಸಂವಾದ ಕೇರಳ ಮಂತ್ರಿ ಮುಂತಾದ ಸಾಂಸ್ಕೃತಿಕ ಪ್ರದರ್ಶನಗಳನ್ನು ನೀಡಿದರು. ಸಭೆಗೆ 500 ಜನ ರೈತರು ಮತ್ತು ವ್ಯವಸಾಯ ಕೂಲಿಗಳು ಬಂದಿದ್ದರು.

ಹೋಟೆಲು ಮಾಲಿಕರ ದಬ್ಬಾಳಿಕೆ

ಕುಣಿಗಲ್ ಟೌನ್ ಹೋಟೆಲು ಕೆಲಸಗಾರರ ಸರ್ವಸದಸ್ಯರ ಸಭೆಯು ಕುಣಿಗಲ್ ಕಮ್ಯೂನಿಸ್ಟ್ ಪಾರ್ಟಿ ಆಫಿಸಿನಲ್ಲಿ ಆರ್. ರಾಮಣ್ಣನವರ ಅಧ್ಯಕ್ಷತೆಯಲ್ಲಿ ನಡೆದು, ಹೋಟೆಲು ಕೆಲಸಗಾರರೆಲ್ಲರೂ ತಪ್ಪದೆ ಸಂಘದ ಸದಸ್ಯರಾಗಬೇಕೆಂತಲೂ, ವಾರಕ್ಕೊಂದುದಿನ ರಜಾ, ಕೆಲಸದ ಕಾಲ ಇವೆಲ್ಲವೂ ಇಲ್ಲದಿರುವುದರಿಂದ, ಮಾಲೀಕರು ರಜಾ ಸೌಲಭ್ಯ, ಕೆಲಸದ ಕಾಲಕ್ಕಿಂತ ಹೆಚ್ಚಿಗೆ ಕೆಲಸ ತೆಗೆದುಕೊಳ್ಳಕೂಡದೆಂದು ತೀರ್ಮಾನಿಸಲಾಯ್ತು. ಈ ಊರಿನ ರತ್ನ ಭವನ ಹೋಟೆಲು ಮಾಲೀಕರು ಸಪ್ಲೆಯರ್ ಶಂಕರ ಎಂಬುವನನ್ನು ವಿನಾ ಕಾರಣ ಚೆನ್ನಾಗಿ ಹೊಡೆದು ಹೊರದೂಡಿರುವುದನ್ನು ಖಂಡಿಸಿ, ಇವರ ಬಗ್ಗೆ ಕ್ರಮ ಕೈಗೊಳ್ಳುವಂತೆ ತೀರ್ಮಾನಿಸಲಾಯ್ತು.

ಗತವರ್ಷದ ನೆನಪಿನಲ್ಲಿ ಹೊಸ ವರ್ಷದ ನಿರೀಕ್ಷೆ

ಎನ್.ಎಲ್. ಉಪಾಧ್ಯಾಯ

ಕ್ರಿಸ್ತಶಕ 1957ನ್ನು ಬೀಳ್ಕೊಟ್ಟು ನಾವೀಗ 1958ರ ಹೊಸ ವರ್ಷಕ್ಕೆ ಕಾಲಿಟ್ಟಿದ್ದೇವೆ. ಹೊಸ ವರ್ಷಾರಂಭದಲ್ಲಿ ವಿಶ್ವಾದ್ಯಂತ ರಾಷ್ಟ್ರ ನಾಯಕರು ಶುಭ ಸಂದೇಶಗಳನ್ನು ನೀಡಿದ್ದಾರೆ. ಜನಶಕ್ತಿಯು ಸಹ ತನ್ನ ವಾಚಕರಿಗೆ ಶುಭಕೋರುತ್ತದೆ.

ಕಳೆದ ವರ್ಷ ಒಂದು ಅತ್ಯಂತ ಐತಿಹಾಸಿಕ ವರ್ಷವೆಂದೇ ಹೇಳಬಹುದು. ಕಮ್ಯೂನಿಸ್ಟ್ ರಾಷ್ಟ್ರವಾದ ರಷ್ಯದ ವಿಜ್ಞಾನಿಗಳು ಸ್ಪೂಟ್ನಿಕ್‌ಗಳನ್ನು ಅಂತರಿಕ್ಷಕ್ಕೆ ಕಳಿಸಿ ಮಾನವ ಪ್ರಗತಿಯಲ್ಲಿ ಅದ್ಭುತ ವಿಜಯ ಗಳಿಸಿದ್ದಾರೆ. ಈ ಸಾಧನೆಯು ಸಮಾಜವಾದಿ ಪದ್ಧತಿಯ ಉತ್ತಮತೆಯನ್ನು ಜಗತ್ತಿಗೆ ಸಾರಿದೆ. ಸ್ಪೂಟ್ನಿಕ್‌ಯುಗ ಈಗ ಆರಂಭವಾಗಿದೆಂದೇ ಹೇಳಬಹುದು.

ರಷ್ಯದ ಈ ಪ್ರಚಂಡ ವಿಜಯದಿಂದ ಸಾಮ್ರಾಜ್ಯಶಾಹಿ ರಾಷ್ಟ್ರಗಳಲ್ಲಿ ವಿಪರೀತ ಗೊಂದಲವೆದ್ದಿದೆ. ತಾನೇ ಅತ್ಯಂತ ಬಲಯುತ ರಾಷ್ಟ್ರವೆಂದೂ, ಎಲ್ಲ ಕ್ಷೇತ್ರಗಳಲ್ಲೂ ಇತರರಿಗಿಂತ ಮುಂದರಿದ ದೇಶವೆಂದೂ ಮೆರೆಯುತ್ತಿದ್ದ ಅಮೆರಿಕಾಕ್ಕೆ ಇದರಿಂದ ಮುಖಕ್ಕೆ ಮಸಿ ಬಳಿದಂತಾಗಿದೆ. ಅದರ ಪ್ರತಿಷ್ಠೆಗೆ ಭಾರೀ ಏಟು ಬಿದ್ದಿದೆ. ವಸಾಹತುಶಾಹಿ, ಅಣು ಅಸ್ತ್ರ ಪೈಪೋಟಿ ಮತ್ತು ಸೈನಿಕ ಒಪ್ಪಂದಗಳ ಮೂಲಕ ವಿಶ್ವವನ್ನೆ ವಿಭಜಿಸಿ ಎಲ್ಲರನ್ನು ತನ್ನ ಅಂಕಿತದಲ್ಲಿಟ್ಟುಕೊಂಡು ಯುದ್ಧ ಪ್ರಚೋದನೆಯಲ್ಲಿ ನಿರತವಾಗಿದ್ದ ಅಮೆರಿಕಾ ಈಗ ಕಂಗಲಾಗಿ ದಿಕ್ಕುತೋಚದ ಪರಿಸ್ಥಿತಿಯಲ್ಲಿ ಬಿದ್ದಿದೆ. ಆದರೂ ಸಹ ಉತ್ತರ ಆಟ್ಲಾಂಟಿಕ್ ರಾಷ್ಟ್ರಗಳನ್ನು ಒಂದುಗೂಡಿಸಿ ಅಣುಅಸ್ತ್ರಗಳ ಸೈನ್ಯವಿಟ್ಟುಕೊಳ್ಳಲು ಒತ್ತಾಯಪಡಿಸುತ್ತಿದೆ. ಯುದ್ಧ ಪ್ರಚೋದನೆಯಲ್ಲೇ ನಿರತವಾಗಿದೆ.

ಆದರೆ ಸಾಮ್ರಾಜ್ಯಶಾಹಿಗಳ ಈ ಪ್ರಯತ್ನ ವಿಫಲವಾಗುತ್ತಿದೆ. ನಾರ್ವೆ ಮತ್ತು ಸ್ವೀಡಿಷ್ ರಾಷ್ಟ್ರಗಳು ಅಮೆರಿಕಾದ ಸಲಹೆಯನ್ನು ತಿರಸ್ಕರಿಸಿವೆ. ಇತರ ರಾಷ್ಟ್ರಗಳೂ ಒಪ್ಪಿಗೆ ಕೊಟ್ಟಿಲ್ಲ. ವಿಶ್ವಶಾಂತಿ ಸಾಧಿಸಲು ಒಂದು ಮಹಾ ರಾಷ್ಟ್ರಗಳ ಶೃಂಗ ಸಮ್ಮೇಳನ ನಡೆಯಬೇಕೆಂಬ ರಷ್ಯದ ಸಲಹೆಗೆ ಹಲವು ರಾಷ್ಟ್ರಗಳಿಂದ ಬೆಂಬಲ ದೊರೆತಿದೆ. ಫ್ರಾನ್ಸಿನ ಪ್ರಧಾನಿಯು ಇದನ್ನು ಸ್ವಾಗತಿಸಿದ್ದಾರೆ. ಮಾರ್ಷಲ್ ಟಿಟೋರವರು ಬೆಂಬಲ ನೀಡಿದ್ದಾರೆ. ಇಂಗ್ಲೆಂಡಿನಲ್ಲೂ ಇದಕ್ಕೆ ಹೆಚ್ಚಿನ ಬೆಂಬಲವಿದೆ. ಅಮೆರಿಕಾದಲ್ಲೂ ಈ ಅಭಿಪ್ರಾಯ ಬೆಳೆಯುತ್ತಿದೆ. ಅಣುಶಸ್ತ್ರ ಪ್ರಯೋಗಗಳನ್ನು ಕೂಡಲೇ ನಿಲ್ಲಿಸಿ, ಶಸ್ತ್ರ ಬಲಗಳನ್ನು ಕಡಿಮೆ ಮಾಡಿ ಸಂದಾನದ ಮೂಲಕ ಸಮಸ್ಯೆಗಳನ್ನು ಬಗೆಹರಿಸಿ ಯುದ್ಧದ ಭೀತಿಯನ್ನು ಕಡಿಮೆ ಮಾಡಲು ವಿಶ್ವದ ಮಹಾ ರಾಷ್ಟ್ರಗಳ ನಾಯಕರು ಸೇರಬೇಕೆಂದು ಸಾರ್ವತ್ರಿಕ ಒತ್ತಾಯ ಬೆಳೆಯುತ್ತಿದೆ.

ವಸಾಹತು ಮತ್ತು ಅರೆ ವಸಾಹತು ರಾಷ್ಟ್ರಗಳಲ್ಲಿ ಸ್ವಾತಂತ್ರ್ಯ ಹೋರಾಟ ಬಲಗೊಳ್ಳುತ್ತಿದೆ. ಡಚ್ಚರ ವಿರುದ್ಧ ಇಂಡೋನೇಷಿಯಾದಲ್ಲಿ ಚಳುವಳಿ ನಡೆದಿದೆ. ಚಿಕ್ಕ ರಾಷ್ಟ್ರವಾದ ಮಾಲ್ಟವು ಸಹ ಬ್ರಿಟಿಷರ ವಿರುದ್ಧ ನಿಂತಿದೆ. ಸಿರಿಯಾದ ಮೇಲೆ ಆಕ್ರಮಣ ನಡೆಸಲು ಮಾಡಿದ ಪಿತೂರಿ ವಿಫಲವಾಗಿದೆ. ಅದರೊಳಗಿನ ತಿಕ್ಕಾಟ ಹೆಚ್ಚುತ್ತಿದೆ.

ಸೋವಿಯತ್ ರಷ್ಯಾ ಮತ್ತಿತರ ಸಮಾಜವಾದಿ ಮತ್ತು ಜನತಾ ಪ್ರಜಾಪ್ರಭುತ್ವ ರಾಷ್ಟ್ರಗಳು ಪ್ರಗತಿಯ ಹಾದಿಯಲ್ಲಿ ಮುಂದುವರಿದಿವೆ. ಈ ಸಲದ ರಷ್ಯದ ಕ್ರಾಂತಿಯ ಸಮಾರಂಭ ಕಮ್ಯೂನಿಸಂನ ವಿಜಯದ ಉತ್ಸವವಾಗಿತ್ತು. ಸಮಾಜವಾದಿ ರಾಷ್ಟ್ರಗಳ ಐಕ್ಯತೆ ಇನ್ನು ಬಲಗೊಂಡಿದೆ. ಕಮ್ಯೂನಿಸ್ಟ್ ರಷ್ಯವು ಪ್ರಬಲ ಶಕ್ತಿಯಾಗಿ ಬೆಳೆದಿರುವುದಲ್ಲದೆ ವಿಶ್ವದ ಶಾಂತಿ ರಕ್ಷಣೆಗೆ ಅಗ್ರ ಪಾತ್ರ ವಹಿಸುತ್ತಿದೆ ಮತ್ತು ರಾಷ್ಟ್ರಗಳ ಸ್ವಾತಂತ್ರ್ಯವನ್ನು ಕಾಪಾಡುತ್ತಿದೆ.

ದೇಶದ ವಿದೇಶಾಂಗ ನೀತಿ

ಭಾರತದ ವಿದೇಶಾಂಗ ನೀತಿಯು ವಿಶ್ವಶಾಂತಿಗೆ ಅನುಕೂಲವಾಗಿಯೇ ಮುಂದುವರಿದಿದೆ. ಆದರೆ ಅದನ್ನು ಬದಲಿಸಲು ಕೇಂದ್ರದ ಮಂತ್ರಿ ಮಂಡಳದಲ್ಲಿ ಕೆಲವರು ಪ್ರಯತ್ನಿಸಿರುತ್ತಾರೆ. ಸಾಮ್ರಾಜ್ಯಶಾಹಿ ಗುತ್ತೇದಾರಿಗಳಿಗೂ, ಇತರ ಪ್ರತಿಗಾಮಿಗಳಿಗೂ ಆರ್ಥಿಕರಂಗ ಪ್ರೋತ್ಸಾಹ ನೀಡಲು ಅನುಕೂಲತೆಗಳನ್ನು ಕೊಡಲು ಪ್ರಯತ್ನ ನಡೆದಿದೆ. ಇದರಿಂದ ಮೂಲಧೋರಣೆಗೆ ಧಕ್ಕೆ ತಗಲುವಂತಿದೆ. ಅದರ ಪರಿಣಾಮವನ್ನು ಈ ವರ್ಷ ನೋಡಬೇಕಾಗಿದೆ. ಗೋವಾ ಮತ್ತು ಕಾಶ್ಮೀರ ಸಮಸ್ಯೆಗಳೂ ಬಗೆಹರಿಯದೇ ಉಳಿದಿವೆ.

ಚುನಾವಣೆ—ಕೇರಳದಲ್ಲಿ ಪ್ರಥಮ ಕಮ್ಯೂನಿಸ್ಟ್ ಸರಕಾರ

ಹೋದ ವರ್ಷದ ಅತ್ಯಂತ ಮಹತ್ವದ ಘಟನೆಯೆಂದರೆ ಕೇರಳದಲ್ಲಿ ಕಮ್ಯೂನಿಸ್ಟ್ ಸರಕಾರ ರಚನೆಯಾಗಿರುವುದು. ಸಾರ್ವತ್ರಿಕ ಚುನಾವಣೆ ನಡೆದು ಅದರಲ್ಲಿ ಕಮ್ಯೂನಿಸ್ಟ್ ಪಾರ್ಟಿ ಇಡೀ ರಾಷ್ಟ್ರದಲ್ಲಿ ಎರಡನೇ ಪಕ್ಷವಾಗಿ ಬಂದುದು ಮತ್ತು ಕೇರಳದಲ್ಲಿ ಬಹುಮತಗಳಿಸಿ ಅಧಿಕಾರಕ್ಕೆ ಬಂದುದು ಚಾರಿತ್ರಿಕವಾದ ಘಟನೆಯಾಗಿದೆ. ಇದರ ಪರಿಣಾಮ ಭಾರತದಲ್ಲಿಯಷ್ಟೇ ಅಲ್ಲದೆ ಇತರ ಪ್ರಜಾಪ್ರಭುತ್ವ ಚಳುವಳಿಗೂ ಆಗಿದೆ. ಕಮ್ಯೂನಿಸ್ಟ್ ಪಾರ್ಟಿಯ ಚರಿತ್ರೆಯಲ್ಲಿ ಇದೊಂದು ಮೈಲುಗಲ್ಲು.

ಕೇರಳದ ಕಮ್ಯೂನಿಸ್ಟ್ ಸರಕಾರ ಪ್ರತಿಗಾಮಿ ಶಕ್ತಿಗಳ ವಿರೋಧ ಮತ್ತು ಪಿತೂರಿಗಳನ್ನು ಯಶಸ್ವಿಯಾಗಿ ಎದುರಿಸಿಕೊಂಡು ಮುಂದುವರಿಯುತ್ತಿದೆ. ಕೇರಳ ಸರಕಾರ ಅನೇಕ ಶಾಸನಗಳನ್ನು ಜಾರಿಗೆ ತಂದಿದೆ. ಮತ್ತು ಯಾವ ಕಾಂಗ್ರೆಸ್ ಸರಕಾರವೂ ಹತ್ತು ವರ್ಷಗಳಲ್ಲಿ ಮಾಡದಿರುವ ಒಂದು ಸಮಗ್ರ ಭೂಶಾಸನವನ್ನು ತಂದಿದೆ.

ಆರ್ಥಿಕ ಮುಗ್ಗಟ್ಟು-ಆಹಾರದ ಅಭಾವ

ಕಳೆದ ವರ್ಷ ಬೆಲೆ ಏರಿಕೆ, ಹಣದುಬ್ಬರ, ಹೊಸ ತೆರಿಗೆಗಳಿಂದ ಜನತೆ ಬಳಲಬೇಕಾಯಿತು. ಕಾರ್ಮಿಕರ ಉಪಯೋಗ ವಸ್ತುಗಳ ಬೆಲೆಗಳ ಮಟ್ಟ ಜನವರಿ 1957ರಲ್ಲಿ 149ರಿಂದ ಅಕ್ಟೋಬರದಲ್ಲಿ 153ಕ್ಕೇರಿದೆ (1944-100 ಆಧಾರ) ಆಹಾರೋತ್ಪಾದನೆಯಲ್ಲಿ ದೇಶದ ಸಮೃದ್ಧಿಯಾಗಿದೆಂದು ಹೇಳುತ್ತಿದ್ದ ಸರಕಾರ ತೀವ್ರ ಅಭಾವ ಮತ್ತು ಕ್ಷಾಮದ ಪರಿಸ್ಥಿತಿಯನ್ನನುಭವಿಸಬೇಕಾಯಿತು. ಪರಿಸ್ಥಿತಿ ಸುಧಾರಿಸಬೇಕಾದರೆ ಸುಮಾರು 40 ಲಕ್ಷ ಟನ್ ಆಹಾರ ಧಾನ್ಯಗಳನ್ನು ವಿದೇಶಗಳಿಂದ ತರಿಸಲು ಕ್ರಮ ತೆಗೆದುಕೊಳ್ಳಬೇಕಾಯಿತು. ಸುಮಾರು 8 ಕೋಟಿ ಜನ ಕ್ಷಾಮಕ್ಕೀಡಾಗಿದ್ದಾರೆ.

ಪಂಚವಾರ್ಷಿಕ ಯೋಜನೆಯ ವಿಮರ್ಶೆ

ಆರ್ಥಿಕ ಮುಗ್ಗಟ್ಟಿನ ಪರಿಣಾಮವಾಗಿ ಯೋಜನೆಗೆ ಧಕ್ಕೆ ಬಂದಿದೆ. ಯೋಜನೆಯನ್ನು ಪೂರೈಸುವ ಮಾತು ಮಾಯವಾಗಿದೆ. ಅದರ ತಿರುಳನ್ನು ಕಾರ್ಯಗತಗೊಳಿಸುವ ಆಶ್ವಾಸನೆಗಳು ಬಂದಿವೆ. ಕೇಂದ್ರದ ಮತ್ತು ರಾಜ್ಯಗಳ ಯೋಜನೆಗಳ ಗಾತ್ರ ಕಡಿಮೆ ಮಾಡಲ್ಪಟ್ಟಿವೆ. ರಾಜ್ಯಗಳ ಯೋಜನೆಗಳಲ್ಲಿ ಆರನೇ ಭಾಗದಷ್ಟು ಕಡಿತ ಮಾಡಲಾಗಿದೆಯೆಂದು ವರದಿ ಬಂದಿದೆ. ಯೋಜನೆಗೆ ಬೇಕಾದಷ್ಟು ಹಣವನ್ನು ಎತ್ತಲು ಸಾಲದಿಂದಾಗಲಿ, ಸಣ್ಣ ಉಳಿತಾಯದಿಂದಾಗಲಿ, ಹೊಸ ತೆರಿಗೆಗಳಿಂದಾಗಲಿ ಸಾಧ್ಯವಾಗಲಿಲ್ಲ.

ಪ್ರಜಾಪ್ರಭುತ್ವ ಚಳುವಳಿಯ ಮುನ್ನಡೆ

ಕೇಂದ್ರ ಸರಕಾರಿ ನೌಕರರ ಮುಷ್ಕರದ ಒತ್ತಾಯದಿಂದ ದ್ವಿತೀಯ ಪೇ ಕಮಿಷನ್ ನೇಮಕವಾಗಿ ತಾತ್ಕಾಲಿಕ ಪರಿಹಾರದ ಶಿಫಾರ್ಸು ಬಂದಿದೆ. ಇತರ ಜನವಿಭಾಗಗಳ ಹೋರಾಟಗಳೂ ನಡೆದಿವೆ. ವಿದ್ಯಾರ್ಥಿಗಳ ಮೇಲೆ ಗೋಳಿಬಾರು ಮಾಡಲಾಗಿದೆ. ಕೆಲವೆಡೆ ಜಾತೀಯ ಕಲಹಗಳು ತಲೆ ಎತ್ತಿವೆ. ದ್ರಾವಿಡ ಕಜಗಂನವರು ವಿಗ್ರಹಗಳನ್ನೊಡೆಯುವ ಮತ್ತು ಘಟನೆಯನ್ನು ಸುಡುವ ಕೃತ್ಯಗಳ ಚಳುವಳಿ ಹೂಡಿದರು. ಕಾಂಗ್ರೆಸ್ಸಿನೊಳಗೆ ಎಲ್ಲ ಕಡೆಗಳಲ್ಲೂ ಒಳಜಗಳಗಳು ಬಲವಾಗಿವೆ

ಅಖಿಲ ಭಾರತ ಟ್ರೇಡ್ ಯೂನಿಯನ್ ಕಾಂಗ್ರೆಸ್ ಮತ್ತು ಅಖಿಲ ಭಾರತ ರೈತ ಸಂಘಗಳು ತಮ್ಮ ಅಧಿವೇಶನಗಳನ್ನು ಯಶಸ್ವಿಯಾಗಿ ನಡೆಸಿವೆ. ಜನತೆ ಮುನ್ನಡೆದಿದೆ.

ನಮ್ಮ ರಾಜ್ಯದಲ್ಲಿ

ಕರ್ನಾಟಕದಲ್ಲಿ ಚುನಾವಣೆಯ ನಂತರ ಕಾಂಗ್ರೆಸ್ ಅಧಿಕಾರಕ್ಕೆ ಬಂತು. ಆದರೆ ಕಾಂಗ್ರೆಸ್ ಮಂತ್ರಿಮಂಡಲಕ್ಕೂ ಸಂಸ್ಥೆಗೂ ತಿಕ್ಕಾಟ ಬೆಳೆದು ಬಂದಿದೆ. ಆಡಳಿತೆಯಲ್ಲಿ ಅಧ್ಯಕ್ಷ ಚೆನ್ನಯ್ಯನವರ ಕೈವಾಡ ಹೆಚ್ಚಾಗಿದೆಂದೂ ಮಂತ್ರಿ ಮಂಡಲದಲ್ಲಿ ಬದಲಾವಣೆ ಮಾಡಲು ಒತ್ತಾಯ ತರಲಾಗುತ್ತಿದೆಂದೂ ವರದಿ ಇದೆ. ಮಂತ್ರಿಗಳ ವಿರುದ್ಧ ಅವಿಶ್ವಾಸ ತರುವ ಹಿಂದಿನ ಹವ್ಯಾಸ ಮುಂದರಿದಿದೆ.

ಸಮನ್ವಯದ ಹೆಸರಲ್ಲಿ 3 ಕೋಟಿ ರೂಪಾಯಿ ಹೊಸ ತೆರಿಗೆ ಹಾಕಲಾಗಿದೆ.

ಬೆಂಗಳೂರು ಕಾರ್ಪೊರೇಷನ್ ಮತ್ತು ಮೈಸೂರು ಮುನಿಸಿಪಲ್ ಚುನಾವಣೆಗಳಲ್ಲಿ ಕಾಂಗ್ರೆಸ್ ಭಾರಿ ಸೋಲನ್ನನುಭವಿಸಿತು.

ಯೋಗ್ಯ ಭೂಸುಧಾರಣೆಯನ್ನು ಸೂಚಿಸಲು ಸರಕಾರ ಜತ್ತಿಸಮಿತಿಯನ್ನು ನೇಮಿಸಿ ಅದರ ವರದಿಯನ್ನು ಪ್ರಕಟಿಸಿದೆ. ಈ ವರದಿ ಬಂದರೂ ಮಸೂದೆ ಬರಲಿಲ್ಲ.

ಕರ್ನಾಟಕದ ರೈತರು ಒಂದು ಪ್ರಾಂತ ಸಮ್ಮೇಳನವನ್ನು ನಡೆಸಿ, ಪ್ರಾಂತ ಸಮಿತಿಯನ್ನು ರಚಿಸಿ ಒಂದು ಚಾರಿತ್ರಿಕ ಹೆಜ್ಜೆಯನ್ನಿಟ್ಟಿದ್ದಾರೆ. ರೈತ ಸಂಘಟನೆ ಹಲವು ಕಡೆ ಬೆಳೆದಿವೆ. ಹೊಸ ಜಾಗೃತಿ ಹುಟ್ಟಿದೆ.

ಕಾರ್ಮಿಕರೂ ಮುಂದುವರಿದಿದ್ದಾರೆ. ಕರ್ನಾಟಕ ಪ್ರಾಂತ ಪ್ಲಾಂಟೇಶನ್ ಕೆಲಸಗಾರರ ಮತ್ತು ಪ್ರಾಂತೀಯ ಬೀಡಿ ಕೆಲಸಗಾರರ ಸಮ್ಮೇಳನಗಳು ನಡೆದುವು ನಿಧಾನವಾಗಿಯಾದರೂ ಲೇಬರ್ ಕೋರ್ಟ್-ರಚನೆಯಾಯಿತು. ಆದರೆ ಇನ್ನೊಂದು ಟ್ರಿಬ್ಯೂನಲ್ ರಚಿಸಲು ಸರಕಾರ ನಿರಾಕರಿಸಿದೆ.

ಹಿಂದುಸ್ಥಾನ ವಿಮಾನ ಕಾರ್ಖಾನೆಯ ನೌಕರರು ಸತ್ಯಾಗ್ರಹ ಹೋರಾಟ ನಡೆಸಿದರು. 80 ಜನರಿಗೆ ಜೈಲುವಾಸ ಮತ್ತು ಕೆಲಸದಿಂದ ಸಸ್ಪೆಂಡ್ ಸಹ ಆಯಿತು. ಮಂಗಳೂರಿನ ಪ್ರೆಸ್ ಕೆಲಸಗಾರರು ಒಂದು ದಿನದ ಸಾರ್ವತ್ರಿಕ ಮುಷ್ಕರ ಹೂಡಿದರು. ಕೋಲಾರದ ಚಿನ್ನದಗಣಿ ಮತ್ತಿತರ ಕಡೆಗಳಲ್ಲೂ ಹೋರಾಟಗಳು ನಡೆದುವು-

1957ನೇ ವರ್ಷವೇನೋ ಮುಗಿಯಿತು. ಜನತೆಯ ಸಮಸ್ಯೆಗಳು ಇನ್ನೂ ಜಟಿಲವಾಗುತ್ತಿವೆ. ಆದರೆ ಪ್ರಜಾಪ್ರಭುತ್ವ ಶಕ್ತಿಗಳೂ ಬೆಳೆದಿವೆ. 1958ರಲ್ಲಿ ಅವು ಬೆಳೆದು ಯಶಸ್ವಿಯಾಗಲೆಂದು ನಮ್ಮ ಹಾರೈಕೆ.

(೬ನೇ ಪುಟದಿಂದ)

2000ದಷ್ಟು ಸತ್ಯಾಗ್ರಹಿಗಳು ಬಂಧಿಸಲ್ಪಟ್ಟರು! ಇದೀಗ ಸತ್ಯಾಗ್ರಹ ಹಿಂತೆಗೆಯಲ್ಪಟ್ಟಿದೆ. ಅದರ ಜೊತೆಯಲ್ಲೇ ಬಂಧಿತರ ಬಿಡುಗಡೆಯಾಗಿದೆ; ಖಟ್ಲೆಗಳೂ ವಾಪಾಸಾಗಿವೆ. ಇದು ಕೇಂದ್ರ ಸರಕಾರದ ಆದೇಶದಂತೆ ಪಂಜಾಬಿನ ಕಾಂಗ್ರೆಸ್ ಸರಕಾರ ವಹಿಸಿರುವ ಕ್ರಮ.

ಮೈಸೂರು ಸರಕಾರ ಈ ಎರಡು ಉದಾಹರಣೆಗಳನ್ನು ಗಮನಿಸಬೇಕು. ದಬ್ಬಾಳಿಕೆ, ಪಕ್ಷ ವಿದ್ವೇಷ, ಕಾರ್ಮಿಕ ವಿರೋಧಿ ಕ್ರಮಗಳನ್ನು ಬಿಟ್ಟುಬಿಡಬೇಕು.

(೧ನೇ ಪುಟದಿಂದ)

"ಕೇರಳ ಸರಕಾರ ಚಿರಾಯುವಾಗಲಿ", "ಕೇರಳ ಸರಕಾರಕ್ಕೆ ಜಯವಾಗಲಿ", "ಕೇರಳ ಸರಕಾರವನ್ನು ಉರುಳಿಸುವ ಪ್ರತಿಗಾಮಿಗಳ ಯತ್ನವನ್ನು ನಡೆಯಗೊಡಲಾರೆವು" ಎಂದು ಅಖಿಲ ಭಾರತ ಕಾರ್ಮಿಕ ವರ್ಗದ ಉನ್ನತ ಕೇಂದ್ರ ಸಂಘಟನೆ ಜಗತ್ತಿಗೆ ಸಾರಿ ಹೇಳಿತು.

ಐದೈದು ಜನ ಸಾಲಾಗಿ ನಿಂತಿದ್ದ ಮೆರವಣಿಗೆಯು ಮೂರು ಮೈಲು ಉದ್ದವಿತ್ತು. ಎರ್ನಾಕುಲಂ ನಗರವೇ ಎ. ಐ. ಟಿ. ಯು. ಸಿ.ಯ ಪ್ರದರ್ಶನದಲ್ಲಿ ಭಾಗವಹಿಸುವಂತೆ ತೋರುತ್ತಿತ್ತು. ಕೇರಳ ಟ್ರೇಡ್ ಯೂನಿಯನ್ ಕಾಂಗ್ರೆಸಿನ ಅಧ್ಯಕ್ಷ ಆರ್. ಸುಗತನ್, ಎಂ. ಎಲ್. ಎ ಸಭೆಯ ಅಧ್ಯಕ್ಷತೆ ವಹಿಸಿದ್ದರು. ಲೋಕ ಟ್ರೇಡ್ ಯೂನಿಯನ್ ಫೆಡರೇಶನ್ ಕಾರ್ಯದರ್ಶಿ ಮಿ| ಜಿ. ಕಸಾದಿಯೆ, ಸೋವಿಯತ್ ಸೌಹಾರ್ದ ಪ್ರತಿನಿಧಿ ಮಂಡಲದ ನಾಯಕ ಮಿ| ಐವನ್ ಗುರೀವ್, ಚೀನಾ ಸೌಹಾರ್ದ ಪ್ರತಿನಿಧಿ ಮಂಡಲದ ನಾಯಕ ಮಿ| ಲ್ಯು ಚಾಂಗ್‌ಶೆನ್, ಎ. ಐ. ಟಿ. ಯು. ಸಿ. ಕಾರ್ಯದರ್ಶಿ ಶ್ರೀ ಡಾಂಗೆ, ಕೇರಳ ಕಾರ್ಮಿಕ ಮಂತ್ರಿ ಶ್ರೀ ಟಿ. ವಿ. ಥಾಮಸ್ ಇವರು ಸಭೆಯಲ್ಲಿ ಭಾಷಣ ಮಾಡಿದರು.

REG. No. M. 6867

Edited Printed and Published by C. R. Krishna Rao, at Janashakthi Printers L—59, K. V. Temple St., Sultanpet Bangalore—2 phone 3810